೩೨೧

ಪ್ರಚಾರ ಪುಸ್ತಕ ಮಾಲೆ

ಸೊಳ್ಳೆ

ಡಾ. ಕೆ.ಎಸ್. ಉಮಾಶಂಕರ

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರ ಪುಸ್ತಕ ಮಾಲೆ-೩೨೧

ಸೊಳ್ಳೆ

ಡಾ. ಕೆ. ಎಸ್. ಉಮಾಶಂಕರ

೨೦೦೯

ಮೊದಲನೆಯ ಮುದ್ರಣ : ೨೦೦೯
೫೦೦೦ ಪ್ರತಿಗಳು

ಬೆಲೆ : ರೂ. ೫.೦೦

ಪ್ರಕಾಶಕರು
ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು – ೬

ಮುದ್ರಕರು
ಶ್ರೀ ಓಂ ಸಾಯಿ ಪ್ರಿಂಟ್ಸ್ ಅಂಡ್ ಸೇಲ್ಸ್, ಕೆ.ಆರ್. ಮೊಹಲ್ಲಾ, ಮೈಸೂರು

ಮುನ್ನುಡಿ

"ಕಾರಣಾಂತರಗಳಿಂದ ವಿಶ್ವವಿದ್ಯಾನಿಲಯವನ್ನು ಪ್ರವೇಶಿಸಲು ಅಶಕ್ತರಾದ ಜನಸಾಮಾನ್ಯರಿಗೆ ವಿಶ್ವವಿದ್ಯೆಯ ಪರಿಚಯ ಮಾಡಿಕೊಡಲು ನಮ್ಮ ವಿಶ್ವವಿದ್ಯಾನಿಲಯ ಶ್ರಮಿಸಬೇಕು. ಈ ಕಾರ್ಯ ಪ್ರಚಾರೋಪನ್ಯಾಸ ಮತ್ತು ಪ್ರಕಟಣೆಯ ಮೂಲಕ ನಡೆಯಬೇಕಾಗಿದೆ. ಅತ್ಯಂತ ಪ್ರಯೋಜನಕಾರಿಯಾದ ಈ ಮಹತ್ ಕಾರ್ಯವನ್ನು ವಿಶ್ವವಿದ್ಯಾನಿಲಯ ಕಾರ್ಯರೂಪಕ್ಕೆ ತರುವುದೆಂದು ನಂಬಿದ್ದೇನೆ" ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪಕರೂ ಮೊದಲ ಕುಲಾಧಿಪತಿಗಳೂ, ರಾಜರಿಸಿ ಎಂದೇ ಖ್ಯಾತನಾಮರಾದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಬಹದ್ದೂರ್ ಅವರು ಮೈಸೂರು ವಿಶ್ವವಿದ್ಯಾನಿಲಯದ ಮೊದಲನೆಯ **ಸೆನೆಟ್ ಸಭೆಯ** ಪ್ರಾರಂಭೋತ್ಸವ ಸಮಯದಲ್ಲಿ ಆಡಿದ ಮಾತುಗಳಿವು. ಈ ಮಾತುಗಳು ಇಂದಿಗೂ ಸಮಯೋಚಿತ ಹಾಗೂ ನೆನಪಾರ್ಹ.

೧೯೩೩ರಲ್ಲಿ ಸ್ಥಾಪನೆಯಾದ ಅಧ್ಯಾಪಕರ ಸಂಘ ಪ್ರಚಾರೋಪನ್ಯಾಸಗಳನ್ನು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಪ್ರಾರಂಭಿಸಿತು. ಈ ಜ್ಞಾನಪ್ರಸಾರ ಪ್ರಯೋಗದ ಖ್ಯಾತಿ ವಿದೇಶಗಳಿಗೂ ಹಬ್ಬಿ, **'ಮೈಸೂರಿನ ಪ್ರಯೋಗ'** ಎಂಬ ಹೆಸರಿನಿಂದ ಪ್ರಖ್ಯಾತವಾಯಿತು. **"ನಹಿ ಜ್ಞಾನೇನ ಸದೃಶಂ"** ಎಂಬ ಮೈಸೂರು ವಿಶ್ವವಿದ್ಯಾನಿಲಯದ ಆದರ್ಶವನ್ನು ಕಾರ್ಯರೂಪಕ್ಕೆ ತರುವ ಶೈಕ್ಷಣಿಕ ಕಾರ್ಯಗಳಲ್ಲಿ ಪ್ರಚಾರೋಪನ್ಯಾಸ ಮಾಲೆಯೂ ಒಂದು. ಇಂತಹ ಮೌಲಿಕ ಉಪನ್ಯಾಸಗಳನ್ನು ಕೇಳಲು ಅವಕಾಶ ಸಿಕ್ಕದವರು ತಿಳಿವಳಿಕೆ ಪಡೆಯಲು ಅನುವಾಗುವಂತೆ ಪ್ರಚಾರ ಪುಸ್ತಕಮಾಲೆ ಅಸ್ತಿತ್ವಕ್ಕೆ ಬಂದು, ಅವು ಹೆಚ್ಚು ಜನಪ್ರಿಯವಾಗಿವೆ.

ನಮ್ಮ ವಿಶ್ವವಿದ್ಯಾನಿಲಯದ ಪ್ರಸಾರಾಂಗ ನಾಡಿನ ಮೂಲೆಮೂಲೆಗಳಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಿ

ಸಾಹಿತ್ಯ, ಸಂಸ್ಕೃತಿ ಪ್ರಸಾರ ಕಾರ್ಯವನ್ನು ಸಮರ್ಪಕ ರೀತಿಯಲ್ಲಿ ನೆರವೇರಿಸುತ್ತಾ ಬಂದಿದೆ. ಜನರು ಬಯಸಿದೆಡೆಗಳಲ್ಲಿ ಈ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಲಾಗುತ್ತಿದೆ. ಜ್ಞಾನಸಾಗರವಾಗಿರುವ ಮೈಸೂರಿನ ಹಲವಾರು ವಿದ್ವಾಂಸರಿಂದ ಹಾಗೂ ವಿಶ್ವವಿದ್ಯಾನಿಲಯದಲ್ಲಿ ಅನೇಕ ವರ್ಷಗಳ ಕಾಲ ಬೋಧನೆ ಮತ್ತು ಸಂಶೋಧನೆಯಲ್ಲಿ ನಿರತರಾದ ತಜ್ಞ ವಿದ್ವಾಂಸರಿಂದ ಶ್ರೀಸಾಮಾನ್ಯರು ಅಪೇಕ್ಷಿಸುವ ವಿಷಯಗಳನ್ನು ಕುರಿತು ಸರಳವೂ ಸುಲಭ ಗ್ರಾಹ್ಯವೂ ಆದ ಕನ್ನಡ ಭಾಷೆಯಲ್ಲಿ ಈ ಮೂಲಕ ತಿಳಿವಳಿಕೆ ಕೊಡುತ್ತಿರುವುದು ಶ್ಲಾಘನೀಯ. ಜ್ಞಾನವನ್ನು ಹಂಚುವುದರಲ್ಲೂ ಆನಂದವಿದೆ. ಆದರವಿದೆ. ಈ ಜ್ಞಾನಪ್ರಕಾಶನ ಸಮಾಜದಲ್ಲಿನ ಭೇದ-ಭಾವವನ್ನು ಹೋಗಲಾಡಿಸಿ ಸಮಾನತೆಯನ್ನು ಅಂಕುರಿಸಲು ಸಹಾಯಕವಾಗುತ್ತದೆ. ವಿಶ್ವವಿದ್ಯಾನಿಲಯಕ್ಕೂ ಸಾಮಾನ್ಯ ಜನತೆಗೂ ಮಧ್ಯೆ ಇರುವ ಅಂತರವನ್ನು ಪರಿಹರಿಸಲು ನೆರವಾಗುತ್ತದೆ. ಜನರಲ್ಲಿ ಜ್ಞಾನೋದಯವನ್ನುಂಟು ಮಾಡಿ ದುಃಖಕ್ಕೆ ಮೂಲಕಾರಣವಾದ ಅಸಮಾನತೆ ಹಾಗೂ ಇನ್ನಿತರ ಅಂಶಗಳನ್ನು ಹೋಗಲಾಡಿಸಿ ವಿಶಾಲ ಭಾವನೆ ಹಾಗೂ ಜ್ಞಾನಶೀಲತೆ ಮೂಡುವಂತೆ ಮಾಡುತ್ತದೆ.

ಪ್ರಚಾರ ಪುಸ್ತಕ ಮಾಲೆ ಅಡಿಯಲ್ಲಿ ಈಗಾಗಲೇ ಭೌತವಿಜ್ಞಾನ, ರಸಾಯನವಿಜ್ಞಾನ, ಪ್ರಾಣಿವಿಜ್ಞಾನ, ವೈದ್ಯವಿಜ್ಞಾನ, ಸಮಾಜವಿಜ್ಞಾನ, ಅರ್ಥಶಾಸ್ತ್ರ, ಸಾಹಿತ್ಯ ಮತ್ತು ಕಲೆ ಮುಂತಾದ ವಿಷಯಗಳನ್ನು ಕುರಿತಂತೆ ಉಪಯುಕ್ತ ಪುಸ್ತಿಕೆಗಳು ಪ್ರಕಟವಾಗಿವೆ. ಇವು ಸಮಸ್ತ ಕನ್ನಡ ಓದುಗರ ಮತ್ತು ಜ್ಞಾನಾಸಕ್ತರ ಮೆಚ್ಚುಗೆ ಹಾಗೂ ಪ್ರಶಂಸೆಗೆ ಪಾತ್ರವಾಗಲೆಂದು ಸಂತೋಷದಿಂದ ಆಶಿಸುತ್ತೇನೆ.

೧೫ ಜುಲೈ ೨೦೦೮ — ವಿ.ಜಿ. ತಳವಾರ್

ಕುಲಪತಿ

ಪ್ರಥಿತನ ಉಲಿ

ಜ್ಞಾನಪ್ರಸಾರದ ಸದುದ್ದೇಶದಿ ೨೨ ಮೇ, ೧೯೩೩ರಲ್ಲೇ ಸ್ಥಾಪನೆಯಾದ ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯದ ಉತ್ತುಂಗ ಶೈಕ್ಷಣಿಕ ಸಂಸ್ಥೆಗಳಲ್ಲಿ ಒಂದು. ಕನ್ನಡನಾಡಿನ ಅಕ್ಷರ ಸಂಸ್ಕೃತಿಯ ಭವ್ಯ ತಾಣ. ಅಂತೆಯೇ ಸಾವಿರಾರು ಮಹತ್ವದ ಕನ್ನಡ ಹೊತ್ತಗೆಗಳ ಪ್ರಕಟಣಾ ನೆಲೆ. ಇದು ಜ್ಞಾನಸಾಧನೆ, ಜ್ಞಾನಾರ್ಜನೆ, ಜ್ಞಾನಶೋಧ ಮತ್ತು ಜ್ಞಾನಪ್ರಸಾರಕ್ಕೆ ಬೇಕಾಗುವ ಎಲ್ಲಾ ಜ್ಞಾನ ಸಾಧನಗಳನ್ನು ಉಪನ್ಯಾಸ, ಪ್ರಚಾರೋಪನ್ಯಾಸ, ಕಿರು ಪುಸ್ತಿಕಾ ಪ್ರಕಟಣೆ, ದತ್ತಿ ಉಪನ್ಯಾಸ, ವಿಶೇಷೋಪನ್ಯಾಸ, ಇತರ ದೇಶೀ ಜ್ಞಾನ ಸಂಪಾದನಾ ಸಂಪನ್ಮೂಲ ಉದ್ಗ್ರಂಥಗಳ ಸಾರ್ಥಕ ಪ್ರಕಟಣೆ ಮೂಲಕ ದೇಶ ವಿದೇಶಗಳ ಉದ್ದಗಲಕ್ಕೂ ಯಶೋ ಕೀರ್ತಿಯನ್ನು ಪಸರಿಸಿ ಅತ್ಯುತ್ತಮ ಜ್ಞಾನಪ್ರಸಾರಾಂಗ ಖ್ಯಾತಿಗೆ ಪಾತ್ರವಾಗಿದೆ.

ಶ್ರೀಸಾಮಾನ್ಯರಿಗೆ ವಿಶ್ವವಿದ್ಯೆಯ ಪರಿಚಯ ಆಗಬೇಕೆಂಬುದೇ ಪ್ರಸಾರಾಂಗದ ಆಂತರ್ಯದ ಆಶಯ. ಅಧ್ಯಾಪಕರ ಸಂಘ ಪ್ರಾರಂಭಿಸಿದ ಪ್ರಚಾರೋಪನ್ಯಾಸ ಕಾರ್ಯಕ್ರಮ ಉತ್ತಮ ಪ್ರಯೋಗವೆಂಬ ಖ್ಯಾತಿಯನ್ನು ಪಡೆದಿದೆ. ಪ್ರಚಾರ ಪುಸ್ತಕ ಮಾಲೆಯಲ್ಲಿ ಇದುವರೆಗೂ ಪ್ರಕಟವಾಗಿರುವ ನೂರಾರು ಪುಸ್ತಕಗಳಿಂದ ಶ್ರೀಸಾಮಾನ್ಯರಿಗೆ ಜ್ಞಾನದ ಬಹುಮುಖತ್ವವನ್ನು ಪರಿಚಯಿಸಿದಂತಾಗಿದೆ. ಈ ಮಹತ್ಕಾರ್ಯದಿ ವಿಶ್ವವಿದ್ಯಾನಿಲಯದ ಜ್ಞಾನವಾಹಿನಿ ನಾಡಿನ ಮೂಲೆಮೂಲೆಗೆಲ್ಲಾ ಹರಿದು ಸಮಷ್ಟೀ ಪ್ರಜ್ಞೆ ವಿಕಾಸಗೊಳ್ಳಲು ಅನುಕೂಲವಾಗುತ್ತದೆ. ಅಲ್ಲದೇ ನಾಡಿನ ಜನತೆ ಜ್ಞಾನವಂತರಾಗಿ ಸತ್ಪ್ರಜೆಗಳಾಗುವರು. ಕಿರುಪುಸ್ತಿಕೆಗಳ ಮೂಲಕ ಸಾಮಾನ್ಯ ಜನತೆಯ ಅಪೇಕ್ಷಿತ ವಿಷಯಗಳನ್ನು ಹಿತಮಿತವಾಗಿ ತಲುಪಿಸುವ ಕೈಂಕರ್ಯದಲ್ಲಿ ಸಮಸ್ತ ವಿದ್ವಾಂಸ ಮಹನೀಯರು

ನಿರತರಾಗಿದ್ದಾರೆ. ಪ್ರಚಾರ ಪುಸ್ತಕಮಾಲೆಯ ಚಾರಿತ್ರಿಕ ನಡೆಗೆ ಪ್ರಶಂಸಾರ್ಹ. ಈ ಮಹತ್ವದ ಕಲಾಪದಲ್ಲಿ ನಾಡಿನ ಶ್ರೇಷ್ಠ ಸಾಹಿತಿ, ಸಂಶೋಧಕ, ವಿಜ್ಞಾನಿ ಮತ್ತು ಚಿಂತಕರು ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ. ಇದರ ವೈಶಿಷ್ಟ್ಯವನ್ನು ಮನಗಂಡ ವಿಶ್ವವಿದ್ಯಾನಿಲಯದ ಕುಲಪತಿಗಳು ಹಾಗೂ ಅಧಿಕಾರವರ್ಗದವರು ಪ್ರಚಾರ ಪುಸ್ತಕಮಾಲೆಯನ್ನು ಪ್ರಸ್ತುತದಲ್ಲಿ ಸಶಕ್ತತೆಯಿಂದ ಮುಂದುವರೆಯಲು ಕಾರಣೀಭೂತರಾಗಿದ್ದಾರೆ. ಸುವರ್ಣ ಕರ್ನಾಟಕದ ಸಂದರ್ಭದಲ್ಲಿ ಸುವರ್ಣ ಪ್ರಚಾರೋಪನ್ಯಾಸ ಮಾಲೆಯ ಅಡಿಯಲ್ಲಿ ಐವತ್ತು ಉಪನ್ಯಾಸಗಳನ್ನು ವಿದ್ವಾಂಸರಿಂದ ಆಯೋಜಿಸಲು ಉದಾರತೆಯಿಂದ ಸಹಕರಿಸಿದ ಸನ್ಮಾನ್ಯ ಕುಲಪತಿಗಳಾಗಿದ್ದ ಪ್ರೊ. ಜೆ. ಶಶಿಧರ ಪ್ರಸಾದ್ ಅವರಿಗೂ ಪ್ರಸಾರಾಂಗದ ನಿರ್ದೇಶಕರಾಗಿದ್ದ ಪ್ರೊ. ಆರ್‌ವಿಯಸ್ ಸುಂದರಂ ಅವರ ಸಂಕಲ್ಪ ಸಿದ್ಧಿಗೂ ಧನ್ಯವಾದ ಪೂರ್ವಕ ಕೃತಜ್ಞತೆಗಳು. ಐವತ್ತು ಸುವರ್ಣ ಪ್ರಚಾರೋಪನ್ಯಾಸಗಳಲ್ಲಿ ಇಪ್ಪತ್ತನಾಲ್ಕು ಉಪನ್ಯಾಸಗಳು ಪುಸ್ತಿಕೆ ರೂಪದಲ್ಲಿ ಪ್ರಕಟವಾಗಿದ್ದು, ಪ್ರಸ್ತುತ ಇಪ್ಪತ್ತಾರು ಪುಸ್ತಿಕೆಗಳು ಪ್ರಕಟಗೊಳ್ಳಲಿವೆ. ಇದರ ಪ್ರಕಟಣೆಗೆ ಪ್ರೋತ್ಸಾಹ, ಬೆಂಬಲ, ಸಹಕಾರ ಹಾಗೂ ಸಹಾಯದ ನೆರವನ್ನು ಮುಕ್ತ ಮನಸ್ಸಿನಿಂದ ನೀಡಿದ ವಿಶ್ವವಿದ್ಯಾನಿಲಯದ ಸನ್ಮಾನ್ಯ ಕುಲಪತಿಗಳಾದ ಪ್ರೊ. ವಿ.ಜಿ. ತಳವಾರ್ ಅವರಿಗೆ ಗೌರವಪೂರ್ವಕ ಧನ್ಯತಾ ವಂದನೆಗಳು. ಈ ಕಾರ್ಯಕ್ರಮದಲ್ಲಿ ನೆರವಾಗಿ ಸದರೀ ಪುಸ್ತಿಕೆಯನ್ನು ಬರೆದುಕೊಟ್ಟ, ಡಾ. ಕೆ. ಎಸ್. ಉಮಾಶಂಕರ ಅವರಿಗೆ ವಿಶ್ವಾಸ ಪೂರ್ವಕ ವಂದನೆಗಳು.

ಸುವರ್ಣ ಕರ್ನಾಟಕದ ಸುವರ್ಣ ಪ್ರಚಾರೋಪನ್ಯಾಸ ಮಾಲೆಯಡಿಯ ಕಿರುಪುಸ್ತಿಕೆಗಳ ಉಪನ್ಯಾಸ ಹಾಗೂ ಮುದ್ರಣಕ್ಕೆ ಪ್ರತ್ಯಕ್ಷ-ಪರೋಕ್ಷ ನೆಲೆಯಲ್ಲಿ ಸಹಕರಿಸಿದ ಎಲ್ಲಾ ಹಿರಿಯ-ಕಿರಿಯ ವಿದ್ವಾಂಸ ಆತ್ಮೀಯರೆಲ್ಲರಿಗೂ ಅನಂತಾನಂತ ವಂದನೆಗಳು. ವಿಶ್ವವಿದ್ಯಾನಿಲಯದ ಸಮಸ್ತ ಅಧಿಕಾರಿವರ್ಗದವರಿಗೂ ಹುತ್ಪೂರ್ವಕ ಧನ್ಯವಾದಗಳು.

ಸಿ. ಎಸ್. ರಾಮಚಂದ್ರ
ನಿರ್ದೇಶಕ, ಪ್ರಸಾರಾಂಗ

ಸೊಳ್ಳೆ


ಆರು ಕಾಲುಗಳು, ಎಲ್ಲ ದಿಕ್ಕುಗಳಲ್ಲಿ ನೋಟ ಕಾಣಿಸುವಂತಹ ಎರಡು ವಿಶಿಷ್ಟ ಕಣ್ಣುಗಳು, ಉದ್ದುದ್ದದ ಎದೆ ಮತ್ತು ಹೊಟ್ಟೆ, ರಭಸದಿಂದ ಹಾರಾಡಲು ಇರುವ ಎರಡು ರೆಕ್ಕೆಗಳು, ಹಾರಾಡುವಾಗ ರೆಕ್ಕೆಗಳ ಬಡಿತದಿಂದ ಹೊರಡುವ ವಿಚಿತ್ರ ಶಬ್ದ, ಜೊತೆಗೆ ಮನುಷ್ಯನ ರಕ್ತವನ್ನು ಹೀರುವುದಕ್ಕೆ ಇರುವಂತಹ ವಿಶೇಷ ಸೊಂಡಿಲು! ಒಟ್ಟಾರೆ ಶರೀರದ ಗಾತ್ರ ಒಂದು ಅಕ್ಕಿಕಾಳಿನಷ್ಟು ಮಾತ್ರ. ಮೈಬಣ್ಣ ಕಪ್ಪು ಮತ್ತು ಕಂದು. ರಭಸದಿಂದ ಹಾರಾಡಿ ಆಪತ್ತಿನಿಂದ ತಪ್ಪಿಸಿಕೊಳ್ಳುವ ಚಾಣಾಕ್ಷತನ. ಇವೆಲ್ಲವುಗಳನ್ನು ನೋಡಿದಾಗ ಉಂಟಾಗುವುದು ಆಶ್ಚರ್ಯ! ಇವರ ದರ್ಶನ ಮಾತ್ರದಿಂದಲೇ ಮನುಷ್ಯನು ಕೆಲವೊಮ್ಮೆ ಭಯಪಡುತ್ತಾನೆ! ಕೀಟದ ಬಗೆಗೆ ಕೋಪಗೊಳ್ಳುತ್ತಾನೆ, ಕೈಗಳಿಂದ ಅಥವಾ ಹೊಗೆ ಹಾಕಿ ಓಡಿಸುತ್ತಾನೆ. ಪೇಪರ್‌ನಿಂದಲೋ ಅಥವಾ ಕೈಗಳಿಂದಲೋ ಬಡಿದು ಸಾಯಿಸುತ್ತಾನೆ! ಹಾಗಾದರೆ ಇದೆಂತಹ ಕೀಟ? ಎಂಬ ಪ್ರಶ್ನೆಗೆ ಉತ್ತರ : ಸೊಳ್ಳೆ!

ಎರಡಕ್ಷರದ ಒಂದು ಸಣ್ಣ ಕೀಟ ನಮ್ಮೊಡನೆ, ನಮ್ಮ ಮನೆಯಲ್ಲಿಯೇ ವಾಸಿಸುತ್ತಾ ನಮ್ಮನ್ನೇ ಕಚ್ಚಿ ನೋವನ್ನುಂಟುಮಾಡುತ್ತದೆ. ಮನುಷ್ಯನ ದೇಹದ ಜೀವಕೋಶಗಳು ಪ್ರತಿಕ್ಷಣ ಕಷ್ಟಪಟ್ಟು ಕೆಲಸ ಮಾಡಿ ಉತ್ಪಾದಿಸುವ 'ರಕ್ತ'ವನ್ನು ಕುಡಿದು ಹೊಟ್ಟೆ ತುಂಬಿಸಿಕೊಳ್ಳುವ ಈ ಸೊಳ್ಳೆ ಪ್ರಾಣಾಂತಿಕವಾದ ರೋಗಗಳ ಬಳುವಳಿಯನ್ನು ನೀಡುವುದರಿಂದ ಮನುಷ್ಯನ ಕಡುವೈರಿಯಾಗಿದೆ. ಹಾರಾಡುವಾಗ ರೆಕ್ಕೆ ಬಡಿತದಿಂದ ಹೊರಡಿಸುವ



'ಸಂಗೀತ' ಮನುಷ್ಯನಿಗೆ ಕಿರಿಕಿರಿಯನ್ನುಂಟುಮಾಡುತ್ತದೆ. ಕಚ್ಚಿದಾಗ ಕೋಪ ಬರುತ್ತದೆ. ಮನುಷ್ಯನಿಂದ ಹತ್ಯೆಗೀಡಾಗುತ್ತದೆ.

ಸೊಳ್ಳೆ ವಿಶ್ವವ್ಯಾಪಿ. ಹೊಂದಿರುವುದು ವಿಚಿತ್ರ ಸ್ವಭಾವ. ಆಹಾರ ಸೇವಿಸುವ ಕ್ರಮ, ನಡೆಸುವ ಜೀವನ ಶೈಲಿ ಎಲ್ಲವೂ ಸೋಜಿಗ. ಲಿಂಗಭೇದದ ಮೇಲೆ ಸೇವಿಸುವ ಆಹಾರ ಅಚ್ಚರಿಯನ್ನುಂಟುಮಾಡುತ್ತದೆ. ಗಂಡು ಸೊಳ್ಳೆಯು ನೀರಿನಲ್ಲಿ ಬೆಳೆದಿರುವ ಕೆಲವು ಜಾತಿಯ ಸಸ್ಯಗಳ ಕೆಳಭಾಗದಲ್ಲಿರುವ ಸೂಕ್ಷ್ಮಾತಿಸೂಕ್ಷ್ಮ ರಂಧ್ರಗಳಿಂದ ಆಹಾರವನ್ನು ಹೀರಿ ಸಸ್ಯಾಹಾರಿಗಳೆಂದೆನಿಸಿದೆ. ಹೆಣ್ಣು ಸೊಳ್ಳೆಯು ರಕ್ತಪಿಪಾಸಿ. ಹೆಣ್ಣು ಸೊಳ್ಳೆಯ ಒಳ ಪ್ರಭೇದಗಳಲ್ಲಿ ಕೆಲವು ಮನುಷ್ಯನ ರಕ್ತವನ್ನು, ಮತ್ತೆ ಕೆಲವು ಇತರೆ ಪ್ರಾಣಿ, ಪಕ್ಷಿಗಳ ರಕ್ತವನ್ನುಕುಡಿದು ಮಾಂಸಾಹಾರಿಗಳೆಂದೆನಿಸಿದೆ. ಕೆಲವು ಸೂಕ್ಷ್ಮ ಜೀವಾಣುಗಳ ಜೀವನ ಕ್ರಮದಲ್ಲಿಯ ಲೈಂಗಿಕ ಚಕ್ರ ಮುಂದುವರೆಯಲು ಸೊಳ್ಳೆ ತನ್ನ ಶರೀರದಲ್ಲಿ ಅವಕಾಶ ಕಲ್ಪಿಸಿಕೊಡುತ್ತದೆ. ಮನುಷ್ಯನಿಗೆ "ಪಾಳಿ" ರೂಪದಲ್ಲಿ ಕೆಲಸ ಮಾಡುವ ವಿಧಾನ ಅಥವಾ ಪದ್ಧತಿಯನ್ನು ಬಹುಶಃ ಸೊಳ್ಳೆಯೇ ಕಲಿಸಿರಬೇಕು! ರಾತ್ರಿ ವೇಳೆಯಲ್ಲಿ ಸಾಮಾನ್ಯವಾಗಿ ಕಚ್ಚುತ್ತದೆಯಾದರೂ ಕೆಲವು ಜಾತಿಯ ಸೊಳ್ಳೆಗಳು ಹಗಲಿನ



ವೇಳೆಯಲ್ಲೂ ಕಚ್ಚುತ್ತವೆ. ವಾಸಕ್ಕೆ ಮನೆಯ ಒಳ ಭಾಗದಲ್ಲಿ ವಿಶೇಷವಾಗಿ ಕತ್ತಲು ಅಥವಾ ಮಬ್ಬು ಇರುವ ಪ್ರದೇಶಗಳನ್ನು (ಉದಾ: ಕಿಟಕಿ, ಬಾಗಿಲುಗಳ ಹಿಂಭಾಗ, ಕುರ್ಚಿ, ಮಂಚ, ಮೇಜು ಇತ್ಯಾದಿಗಳ ಕೆಳ ಭಾಗಗಳು, ಹಳೆಯ ಪದಾರ್ಥಗಳನ್ನು ಇಡುವ ಅಟ್ಟ ಇತ್ಯಾದಿ) ಆಯ್ಕೆ ಮಾಡುತ್ತವೆ. ಮನೆಯ ಹೊರಭಾಗದ ಗಿಡಗಂಟೆಗಳ ಪೊದೆ, ಬಾವಿಯ ಒಳಭಾಗ, ಮರದ ಪೊಟರೆ, ಕೊಟ್ಟಿಗೆ, ಹಳ್ಳಕೊಳ್ಳಗಳು, ಸಂಧಿಗಳು, ಅಲ್ಲದೇ ಕೆಲವು ಜಾತಿಯ ಸೊಳ್ಳೆಗಳು ಬೆಟ್ಟ-ಗುಡ್ಡಗಳಲ್ಲೇ ವಾಸಿಸುತ್ತವೆ. ಮೊಟ್ಟೆ ಇಡಲು ಕೆಲವು ಜಾತಿಯ ಸೊಳ್ಳೆಗಳು ಸಿಹಿ / ತಿಳಿ ನೀರಿನ ತಾಣಗಳನ್ನು ಆರಿಸಿದರೆ ಮತ್ತೆ ಕೆಲವು ಕೊಳಕು ನೀರಿನ ತಾಣಗಳಲ್ಲಿ ಮೊಟ್ಟೆ ಇಟ್ಟು ವಂಶಾಭಿವೃದ್ಧಿ ಕ್ರಿಯೆಯಲ್ಲಿ ವಿಶೇಷತೆಯನ್ನು ತೋರುತ್ತವೆ. ಸೊಳ್ಳೆಯ ಜೀವನಕ್ರಮದಲ್ಲೂ ವೈವಿಧ್ಯಮಯ ವಿವಿಧ ಹಂತಗಳಿವೆ. ಜೀವಿತದ ಕೆಲಕಾಲ ಚಟುವಟಿಕೆ ರಹಿತವಾಗಿಯೂ ಮತ್ತೆ ಕೆಲಕಾಲ ಚಟುವಟಿಕೆಯಿಂದಲೂ ಇರುವಂತಹದ್ದಾಗಿದೆ. ಕೀಟಗಳ ಸಾಮಾನ್ಯ ನಿಯಮದಂತೆ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಆಹಾರಕ್ಕಾಗಿಯೋ ಅಥವಾ ಇತರೆ ಕಾರಣಕ್ಕಾಗಿಯೋ ಸೊಳ್ಳೆಯು ಪ್ರಯಾಣಿಸುತ್ತದೆ. ಆದರೆ ದೂರ ಪ್ರಯಾಣಿಕ ಅಲ್ಲ. ಅದರ ಪ್ರವಾಸ ಏನಿದ್ದರೂ ಹತ್ತಿರದ ಪ್ರದೇಶಗಳಿಗೆ ಮಾತ್ರ.೮ ರಿಂದ

೧೦ ಕಿ.ಮೀ. ಒಳಗೇ. ಪ್ರಯಾಣವೂ ಕೂಡ ಪ್ರಭೇದ ಆಧಾರಿತ. ವಾಹನಗಳಲ್ಲೇನಾದರೂ ಸೇರಿಕೊಂಡರೆ ಮಾತ್ರ ಅವಕ್ಕೆ ಟಿಕೆಟ್ ರಹಿತ ದೂರ ಪ್ರಯಾಣದ ಸೌಲಭ್ಯ. ವಿಮಾನ, ಹಡಗುಗಳಲ್ಲಿ ಸೇರಿಕೊಂಡರೆ ವಿಲಾಸಿತ ಪುಕ್ಕಟೆ ವಿದೇಶ ಪ್ರವಾಸ! ಹೀಗಾಗಿಯೇ ಇವು ಕೆಲವು ರೋಗಗಳನ್ನು ಪರದೇಶಗಳಿಂದ ನಮ್ಮ ದೇಶಕ್ಕೆ ತಂದಿವೆ.


ಪ್ರಭೇದ

ಪ್ರಮುಖವಾಗಿ ಅನಾಫಿಲಿನಿ ಮತ್ತು ಕ್ಯುಲಿಸಿನಿ ಎಂಬ ಎರಡು ಪ್ರಭೇದಗಳನ್ನು ಮಾಡಲಾಗಿದೆ. ಅನಾಫಿಲಿನಿಯಲ್ಲಿ ಅನಾಫಿಲಿಸ್ ಎಂಬ ಪ್ರಭೇದವನ್ನು ಮತ್ತು ಕ್ಯುಲಿಸಿನಿಯಲ್ಲಿ ಸುಮಾರು ೧೫ ಪ್ರಭೇದಗಳನ್ನು ಮಾಡಿದ್ದಾರೆ ಕೀಟತಜ್ಞರು. ಕ್ಯೂಲೆಕ್ಸ್, ಈಡಿಸ್ ಮತ್ತು ಮ್ಯಾನ್‌ಸೋನಿಯಾ ಎಂಬ ಮೂರು ಪ್ರಭೇದಗಳು ನಮ್ಮ ದೇಶದಲ್ಲಿ ಜನರಿಗೆ ಸಂಕಟ ನೀಡುತ್ತವೆ. ಒಟ್ಟಿನಲ್ಲಿ ಸುಮಾರು ೬೦ ಪ್ರಭೇದಗಳಿದ್ದು ೧೫ ರಿಂದ ೨೦ ಪ್ರಭೇದಗಳು ಮಾತ್ರ ಮನುಷ್ಯನಿಗೆ ಹಾನಿಕಾರಕಗಳಾಗಿವೆ.

ಅನಾಫಿಲಿಸ್ :- ಅನೇಕ ಒಳ ಪ್ರಭೇದಗಳನ್ನು ಹೊಂದಿರುವ ಅನಾಫಿಲಿಸ್ ಸೊಳ್ಳೆಯ ಸುಮಾರು ೪೫ ಪ್ರಭೇದಗಳು ಮಾತ್ರ ನಮ್ಮ ದೇಶದಲ್ಲಿ ಕಂಡುಬರುತ್ತವೆ. ಮೈದಾನ ಪ್ರದೇಶಗಳಲ್ಲಿ ವಾಸಿಸುವ ಅನಾಫಿಲಿಸ್, ಕ್ಯುಲಿಸಿಫಾಸಿಸ್ ಮತ್ತು ಅನಾಫಿಲಿಸ್ ಫ್ಲೇವಿಟಾಲಿಸ್‌ಗಳು ; ಮಲೆನಾಡು ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ವಾಸಿಸುವ ಅನಾಫಿಲಿಸ್ ಮಿನಿಮಸ್, ಅನಾಫಿಲಿಸ್ ಫಿಲಪೆನಿಸಿಸ್,

ಅನಾಫಿಲಿಸ್ ಸ್ಟೆಫೆನ್ಸಿ, ಅನಾಫಿಲಿಸ್ ಸುಂಡಿಕಸ್ ಸೊಳ್ಳೆಗಳು ಮಲೇರಿಯಾ ರೋಗವನ್ನು ಒಬ್ಬರಿಂದ ಮತ್ತೊಬ್ಬರಿಗೆ ಹರಡುತ್ತವೆ. ಅನಾಫಿಲಿಸ್ ಸೊಳ್ಳೆಯ ರೆಕ್ಕೆಗಳ ಮೇಲೆ ಚುಕ್ಕಿಗಳಿರುತ್ತವೆ. ಕೂರುವ ಪ್ರದೇಶದ ಸಮತಲಕ್ಕೂ ಮತ್ತು ಸೊಳ್ಳೆಯ ಶರೀರಕ್ಕೂ ಕೋನ ಉಂಟಾಗುತ್ತದೆ. ಎರಡೂ ಅಂಶಗಳಿಂದ ದೂರದಿಂದಲೇ ಸೊಳ್ಳೆಯನ್ನು ಗುರುತಿಸಲು ಸಾಧ್ಯವಾಗುತ್ತದೆ.

ಕ್ಯೂಲೆಕ್ಸ್ : "ಕಿರಿಕಿರಿ ಸೊಳ್ಳೆ" ಎಂಬ ಬಿರುದನ್ನು ಪಡೆದಿರುವ ಕ್ಯೂಲೆಕ್ಸ್ ಸೊಳ್ಳೆಯು ಭಾರತದಾದ್ಯಂತ ಕಂಡುಬರುತ್ತದೆ. ಕ್ಯೂಲೆಕ್ಸ್ ಫೆಟಿಗನ್ಸ್ ಎಂಬ ಪ್ರಭೇದವು ನಮ್ಮ ದೇಶದಲ್ಲಿದ್ದು ಬ್ಯಾಂಕ್ರಾಫ್ಟಿ ಎಂಬ ಪರಾವಲಂಬಿ ಜೀವಿಯನ್ನು ಮನುಷ್ಯನ ದೇಹದೊಳಗೆ ತೂರಿಸಿ ಆನೆಕಾಲು ರೋಗವನ್ನುಂಟುಮಾಡುತ್ತದೆ. ಕ್ಯೂಲೆಕ್ಸ್ ಸೊಳ್ಳೆಯು



ಈಡಿಸ್ ಸೊಳ್ಳೆ (ಪಟ್ಟೆ ಸೊಳ್ಳೆ) ಟೈಗರ್ ಮಸ್ಕ್ಯುಟೋ

ಕೊಳೆ / ಕೊಳಚೆ ನೀರಿನಲ್ಲಿ ಮೊಟ್ಟೆಗಳನ್ನಿಡುತ್ತದೆ. ಸುಮಾರು ೧೦ ರಿಂದ ೧೧ ಕಿ.ಮೀ. ದೂರದವರೆಗೆ ಹಾರಾಡುವ ಸಾಮರ್ಥ್ಯ ಹೊಂದಿರುವ ಇದು ಸಾಯಂಕಾಲದ ವೇಳೆಯಲ್ಲಿ 'ಗೃಹ ಪ್ರವೇಶ' ಮಾಡುತ್ತದೆ. ರಾತ್ರಿಯವರೆವಿಗೂ ಕೆಲವು ಸಾಯಂಕಾಲ ಬಂದು ಕಚ್ಚಿ ರಾತ್ರಿ ವೇಳೆ ನಮ್ಮ ಹಾಸಿಗೆ ಹೊದಿಕೆಗಳನ್ನು ಕೇಳದೇ ಗೋಡೆಯ ಮೇಲೆ ವಿಶ್ರಮಿಸಿ ಬೆಳಿಗ್ಗೆ ಹೊರಕ್ಕೆ ಹೋಗುತ್ತವೆ.

ಮನುಷ್ಯನ ಸಂಪರ್ಕಕ್ಕೆ ಬಂದು ಹೆಚ್ಚು ಕಿರಿಕಿರಿಯನ್ನುಂಟುಮಾಡುವುದರಲ್ಲಿ ಇತರೇ ಕೀಟಗಳಿಗಿಂತ 'ಸೊಳ್ಳೆ'ಗೇ ಅಗ್ರಸ್ಥಾನ. ಹಾಗಾಗಿ ಇದನ್ನು "ಕೀಟಲೋಕದ ಕೀಚಕ" ಎಂತಲೂ ಕರೆಯಬಹುದಾಗಿದೆ ! ಇಷ್ಟೆಲ್ಲಾ ಗುಣಗಳನ್ನು ಹೊಂದಿರುವ ಸೊಳ್ಳೆಯ ಜೀವಿತಾವಧಿಯ ಕಾಲ ಸುಮಾರು ೮ ರಿಂದ ೩೫ ದಿನಗಳು ಮಾತ್ರ ! ಮತ್ತೊಂದು ಸೋಜಿಗದ ಸಂಗತಿಯೆಂದರೆ ಗಂಡು ಸೊಳ್ಳೆಯ ಆಯಸ್ಸು ಮತ್ತೂ ಕಡಿಮೆ ! ಮಿಲನದ ನಂತರ ಗಂಡು ಸೊಳ್ಳೆ ಸಾಯುವುದು ಪ್ರಕೃತಿಯ ವಿಚಿತ್ರ.

ಜೀವನ ಚಕ್ರ : ಮೊಟ್ಟೆ (ತತ್ತಿ), ಲಾರ್ವಾ, ಪ್ಯೂಪ ಮತ್ತು ಮರಿಸೊಳ್ಳೆಗಳೆಂಬ ನಾಲ್ಕು ಹಂತಗಳಲ್ಲಿ ಸೊಳ್ಳೆಯ ಜೀವನ ಪೂರ್ಣಗೊಳ್ಳುತ್ತದೆ.

ಮೊಟ್ಟೆ (ತತ್ತಿ) : ಸುಮಾರು ೧೫೦ ರಿಂದ ೨೦೦ ರಷ್ಟು ಮೊಟ್ಟೆಗಳನ್ನು ಸೊಳ್ಳೆಯು ನೀರಿನ ಮೇಲಿಡುತ್ತದೆ. ಅವುಗಳ ಆಕಾರವು ಸೊಳ್ಳೆಯ ಪ್ರಭೇದವನ್ನವಲಂಬಿಸಿರುತ್ತದೆ. ಅನಾಫಿಲಿಸ್ ಸೊಳ್ಳೆಯ

ಮೊಟ್ಟೆಗಳು ವೃತ್ತಾಕಾರವಾಗಿದ್ದು ಒಂದೊಂದೆಯಾಗಿಯೂ, ಕ್ಯೂಲೆಕ್ಸ್ ಸೊಳ್ಳೆಯ ಮೊಟ್ಟೆಗಳು ಕೋಳಿಮೊಟ್ಟೆಯಾಕಾರವಾಗಿದ್ದು ಗುಂಪುಗುಂಪಾಗಿಯೂ, ಈಡಿಸ್ ಸೊಳ್ಳೆಯ ಮೊಟ್ಟೆಗಳು ಒಂದೊಂದೇ ಆಗಿದ್ದು ಚಪ್ಪಟೆಯಾಗಿದ್ದು ಸಿಗರೇಟಿನಂತೆ ಉದ್ದುದ್ದವಾಗಿಯೂ ಮಾನ್‌ಸೋನಿಯಾ ಸೊಳ್ಳೆಯ ಮೊಟ್ಟೆಗಳು ಗುಂಪಾಗಿದ್ದು ನಕ್ಷತ್ರಾಕಾರವನ್ನು ಹೋಲುತ್ತವೆ. ಮೊಟ್ಟೆಯ ಅವಧಿ ಅಥವಾ ಆಯುಷ್ಯ ೧ ರಿಂದ ೨ ದಿನಗಳು.

ಲಾರ್ವಾ : ಮೊಟ್ಟೆಯ ಒಳಭಾಗದಲ್ಲೇ ಇದ್ದುಕೊಂಡು ಬೆಳವಣಿಗೆಯನ್ನು ಹೊಂದಿ ಮೊಟ್ಟೆಯ ಕವಚವನ್ನು ಒಡೆದು ಹೊರಬಂದಿರುವ ಅವಸ್ಥೆ. ಈ ಅವಸ್ಥೆಯಲ್ಲಿ ಶರೀರದ ತುಂಬೆಲ್ಲಾ ಸಣ್ಣ ಸಣ್ಣ ರೋಮಗಳಿದ್ದು ನೋಡಲು ಕಂಬಳಿಹುಳುವಿನಂತೆ ಕಾಣುತ್ತದೆ. ಕಂಬಳಿಹುಳುವಿನಷ್ಟು ಗಾತ್ರ ಇರುವುದಿಲ್ಲ. ರುಂಡ, ಎದೆ ಮತ್ತು ಹೊಟ್ಟೆಯ ಭಾಗಗಳನ್ನು ಹೊಂದಿರುತ್ತದೆ. ನೀರಿನಲ್ಲಿರುವ ಸೂಕ್ಷ್ಮ ಜೀವಿಗಳನ್ನೇ ತಿಂದು ಬದುಕುತ್ತದೆ. ನಾಲ್ಕು ಬಾರಿ ಹೊರಕವಚವನ್ನು ಕಳಚುತ್ತದೆ ಮತ್ತು ಪ್ರತಿಬಾರಿಯೂ ಹೀಗೆ ಕಳಚಿ ಹೊಸತನಕ್ಕೆ ಬಂದಾಗ ಶಕ್ತಿಶಾಲಿಯಾಗುತ್ತದೆ (ಮೌಲ್ಟಿಂಗ್). ಆಹಾರ ಸೇವಿಸಿ ಜೀವಿಸುವಷ್ಟೇ ಪ್ರಮುಖವಾಗಿ ಉಸಿರಾಡಲೂ ಬೇಕು. ಉಸಿರಾಡಲು ಲಾರ್ವಾ ಅವಸ್ಥೆಯಲ್ಲಿ ಸೊಳ್ಳೆಗೆ ವಿಶಿಷ್ಟತೆ ಇದೆ. ಗಾಳಿಯ ಸಂಪರ್ಕಕ್ಕೆ ಬರಲು ಸಹಾಯವಾಗುವಂತೆ ಅನಾಫಿಲಿಸ್ ಸೊಳ್ಳೆಯು ನೀರಿನ ಮೇಲ್ಭಾಗದಲ್ಲಿ ತೇಲುತ್ತಿರುತ್ತವೆ. ಕ್ಯೂಲೆಕ್ಸ್, ಈಡಿಸ್ ಮತ್ತು ಮಾನ್‌ಸೋನಿಯಾ ಲಾರ್ವಾಗಳ ಉದರ

ಪ್ರದೇಶದಲ್ಲಿ ಗಾಳಿಯನ್ನು ಸೇವಿಸಲು ಒಂದು ಬಗೆಯ ನಳಿಕೆಯಂತಹ ರಚನೆಗಳಿರುತ್ತದೆ. ಇದರ ಮುಖಾಂತರ ಗಾಳಿಯನ್ನು ಸೇವಿಸಿ ಉಸಿರಾಡುತ್ತವೆ. ಈ ರಚನೆಗಳಿರುವುದರಿಂದ ಈ ಜಾತಿಯ ಸೊಳ್ಳೆಗಳ ಲಾರ್ವಾಗಳು ನೀರಿನಲ್ಲಿ ತಲೆಕೆಳಕಾಗಿ ನಿಂತಿರುತ್ತವೆ ಮತ್ತು ಅದೇ ಅವಸ್ಥೆಯಲ್ಲಿ ಅವು ಉಸಿರಾಡಬಲ್ಲವು. ಮಾನ್‌ಸೋನಿಯಾ ಲಾರ್ವಾಗಳಲ್ಲಿರುವ ಉಸಿರಾಟದ ನಳಿಕೆಗಳು ಜಲಸಸ್ಯಗಳ ಬೇರುಗಳಿಗೆ ಅಂಟಿಕೊಂಡುಬಿಡುತ್ತವೆ ಮತ್ತು ಆ ಬೇರುಗಳ ಮೂಲಕವೇ ಪ್ರಾಣವಾಯುವನ್ನು ಹೀರುತ್ತವೆ. ಬದುಕುತ್ತವೆ. ಲಾರ್ವಾದ ಜೀವಿತಾವಧಿ ಸಾಮಾನ್ಯವಾಗಿ ೭ ದಿನಗಳು.

ವಿಶ್ರಮಿಸಿ ಮಧ್ಯರಾತ್ರಿಯ ವೇಳೆಗೆ ಮನುಷ್ಯನನ್ನು ಕಚ್ಚಲು ಪ್ರಾರಂಭಿಸುತ್ತದೆ. ಇದಕ್ಕೆ ಮನುಷ್ಯನ ಕಾಲುಗಳ ಮೇಲೆ ವಿಶೇಷ ವ್ಯಾಮೋಹ. ಕಾಲುಗಳನ್ನ ಕಚ್ಚಿ ಆನೆಕಾಲು ರೋಗವನ್ನುಂಟುಮಾಡುವ ಎಳೆಕೀಟಗಳನ್ನು ನಾಜೂಕಾಗಿ ಶರೀರದೊಳಗೆ ತೂರಿಸುತ್ತದೆ. ಬೆಳಗಿನ ಸಮಯದಲ್ಲಿ ಮನೆಯ ಗೋಡೆಗಳ ಮೇಲೆ, ಪೀಠೋಪಕರಣಗಳ ಕೆಳಭಾಗದಲ್ಲಿ, ಖಾಲಿ ಮಡಿಕೆ ಕುಡಿಕೆಗಳು ಮತ್ತು ಕತ್ತಲು ಇರುವ ಪ್ರದೇಶಗಳಲ್ಲಿ ಕುಳಿತು ವಿಶ್ರಾಂತಿ ಪಡೆಯುತ್ತಿರುತ್ತದೆ. ಸೊಳ್ಳೆಯ ರೆಕ್ಕೆಗಳ ಮೇಲೆ ಚುಕ್ಕಿಗಳಿರುವುದಿಲ್ಲ.

ಈಡಿಸ್ : ಮೈ ಮತ್ತು ಕಾಲುಗಳ ಮೇಲೆ ಬಿಳಿ ಬಣ್ಣದ ಗೆರೆ (ಪಟ್ಟಿ) ಗಳನ್ನು ಹೊಂದಿರುವುದರಿಂದ ಇತರೇ ಜಾತಿಯ ಸೊಳ್ಳೆಗಳಿಗಿಂತ ಸುಲಭವಾಗಿ ದೂರದಿಂದಲೇ ಗುರುತಿಸಬಹುದಾಗಿದೆ.

ಹುಲಿಯಂತೆ ಈ ರೀತಿಯ ಪಟ್ಟಿಗಳನ್ನು ಹೊಂದಿರುವುದರಿಂದ ಇದಕ್ಕೆ ಟೈಗರ್ ಮಸ್ಕ್ಯುಟೋ (ಟೈಗರ್ ಸೊಳ್ಳೆ, ಹುಲಿಸೊಳ್ಳೆ) ಎಂದು ಹೆಸರಿಸಲಾಗಿದೆ. ಮಳೆಗಾಲದಲ್ಲಿ ಇದರ ಸಂಖ್ಯೆ ಮತ್ತು ಉಪಟಳ ಅಧಿಕ. ಈಡಿಸ್ ಈಜಿಪ್ಟ್ ಎಂಬ ಪ್ರಭೇದವು ನಮ್ಮ ದೇಶದಲ್ಲಿ ವ್ಯಾಪಕವಾಗಿದ್ದು ಡೆಂಗ್ಯೂ ಮತ್ತು ಚಿಕ್ಕೂನ್‌ಗುನ್ಯಾ ರೋಗಗಳನ್ನು ಹರಡುತ್ತದೆ. ಅತ್ಯಲ್ಪ ಪ್ರಮಾಣದಷ್ಟು ನೀರು ನಿಲ್ಲುವ ಅವಕಾಶಗಳಾದ ಹಳೆಯ ರಬ್ಬರ್ ಟೈರು, ತೆಂಗಿನ ಚಿಪ್ಪು, ಕರಟ, ಒಡೆದ ಪ್ಲಾಸ್ಟಿಕ್ ಬಾಟಲಿಗಳು, ತಗಡಿನ ಡಬ್ಬ, ಮಡಿಕೆ ಚೂರು, ಹೂಕುಂಡಗಳು ಇತ್ಯಾದಿ ಸ್ಥಳಗಳಲ್ಲಿ ಶೇಖರಗೊಂಡಿರುವ ನೀರಿನಲ್ಲಿ ಮೊಟ್ಟೆಗಳನ್ನು ಇಡುತ್ತವೆ. ಈ ಪ್ರಭೇದದಲ್ಲಿ ಹೆಣ್ಣು ಧೈರ್ಯಶಾಲಿಯಾಗಿದ್ದು ಹಗಲಿನ ವೇಳೆಯಲ್ಲೇ ಮನುಷ್ಯನನ್ನು ಕಚ್ಚುತ್ತದೆ. ಅಬ್ಬಬ್ಬಾ ಎಂದರೆ ಸುಮಾರು ೧೦೦ ಮೀಟರ್ ದೂರದವರೆಗೆ ಮಾತ್ರ ಹಾರಾಟ ಮಾಡುವ ಪ್ರವೃತ್ತಿ ಇದರದು.


ಮಾನ್‌ಸೋನಿಯಾ : ಗಾತ್ರದಲ್ಲಿ ಸ್ವಲ್ಪ ದೊಡ್ಡದಿದ್ದು ಕಪ್ಪು ಅಥವಾ ಕಂದು ಬಣ್ಣ ಹೊಂದಿರುತ್ತದೆ. ಆಹಾರಕ್ಕೆ ಮತ್ತು ವಂಶಾಭಿವೃದ್ಧಿಗೆ ಕೆಲವು ಜಲಸಸ್ಯಗಳನ್ನು ಆಶ್ರಯಿಸುತ್ತದೆ. ಮಾನ್‌ಸೋನಿಯಾ ಅನ್ನುಲಫೆರಾ, ಮಾನ್‌ಸೋನಿಯಾ ಯೂನಿಫಾರ್ಮಿಸ್, ಮಾನ್‌ಸೋನಿಯಾ ಇಂಡಿಯಾನ ಮತ್ತು ಮಾನ್‌ಸೋನಿಯಾ ಲಾಂಗಿಪಾಲಿಸ್ ಎಂಬ ನಾಲ್ಕು ಪ್ರಭೇದಗಳನ್ನೊಳಗೊಂಡಿದೆ. ಚಿಕ್ಕೂನ್‌ಗುನ್ಯಾ ಮತ್ತು ಮಲಯನ್ ಫೈಲೇರಿಯಾಸಿಸ್ ಎಂಬ ರೋಗಗಳನ್ನು ಹರಡುತ್ತದೆ.

ಸೊಳ್ಳೆಯ ಬಗೆಗಿನ ಇನ್ನಷ್ಟು ಮಾಹಿತಿಗಳು

ಸೊಳ್ಳೆಯು ವ್ಯಕ್ತಪಡಿಸುವ (ಹೊಂದಿರುವ) ಗುಣಗಳು ಜಾತಿ ಅಥವಾ ಪ್ರಭೇದಗಳನ್ನಾಧರಿಸಿವೆ. ಅವುಗಳು ಸೇವಿಸುವ ಆಹಾರಕ್ರಮ, ಸಂತಾನೋತ್ಪತ್ತಿಯ ಕ್ರಮ, ವಿಶ್ರಮಿಸುವ ಸ್ಥಳ ಇವೆಲ್ಲವುಗಳನ್ನು ಅರಿತರೆ ಮಾತ್ರ ಅವುಗಳ ಹತೋಟಿ ಸಾಧ್ಯ.

ತನ್ನ ಅಸ್ತಿತ್ವಕ್ಕಾಗಿ ಮನುಷ್ಯನ ಮತ್ತು ಇತರ ಪ್ರಾಣಿ ಪಕ್ಷಿಗಳ ರಕ್ತವನ್ನು ಹೀರುವ ಸೊಳ್ಳೆ ಈ ಪ್ರಕ್ರಿಯೆಯಲ್ಲಿ ಮನುಷ್ಯನಿಗೆ ಭಯಾನಕ ರೋಗಕಾರಕ ಕ್ರಿಮಿಗಳನ್ನು ದೇಹದೊಳಗೆ ತಳ್ಳಿ

ಸೊಳ್ಳೆಗಳ ಜೀವನ ಚಕ್ರ



ಚಿತ್ರಕೃಪೆ

Park's text book of preventive& Social Medicine

ರೋಗಗಳನ್ನುಂಟುಮಾಡುತ್ತದೆ. ಈಡಿಸ್ ಸೊಳ್ಳೆಯನ್ನು ಹೊರತುಪಡಿಸಿ ಇತರ ಜಾತಿಯ ಸೊಳ್ಳೆಗಳು ಸಾಯಂಕಾಲದ ವೇಳೆಯಲ್ಲಿ ಮನೆಯೊಳಗೆ ನುಗ್ಗಿ ಮನುಷ್ಯನನ್ನು ಕಚ್ಚಿ 'ಉಂಡು ಹೋದ ಬಿಟ್ಟು ಹೋದ' ಎಂಬಂತೆ ಬಳುವಳಿ ನೀಡಿ ನಿರ್ಗಮಿಸುತ್ತವೆ.

ಪ್ಯೂಪಾ : (ಕೋಶಾವಸ್ಥೆ) ಇದು ಲಾರ್ವಾದ ಮುಂದಿನ ಅವಸ್ಥೆ ಅಲ್ಪವಿರಾಮ (ಕಾಮಾ) ಆಕೃತಿಯನ್ನು ಹೋಲುತ್ತದೆ. ಲಾರ್ವಾ ಅವಸ್ಥೆಯಲ್ಲಿ ಗಡದ್ದಾಗಿ ತಿಂದು ತೇಗಿದ ನಂತರದ ವಿಶ್ರಾಂತಿಯ ಅವಸ್ಥೆಯಿದು. ಈ ಕಾಲದಲ್ಲಿ ಇದು ಆಹಾರ ಸೇವಿಸುವುದಿಲ್ಲ. ನೀರಿನ ಮೇಲ್ಭಾಗದಲ್ಲಿ ವಿಶ್ರಮಿಸುತ್ತದೆ. ಗುಂಡಾಗಿರುವ ಶಿರಪ್ರದೇಶ, ಎದೆ, ಹೊಟ್ಟೆಗಳನ್ನು ಹೊಂದಿರುವುದು. ಎದೆಯ ಭಾಗದಲ್ಲಿ ಉಸಿರಾಟದ ರಚನೆಗಳು ಹೊರಚಾಚಿರುತ್ತವೆ. ನೀರನ್ನು ಕದಡಿದರೆ ಈಜಾಡುತ್ತಾ ರಕ್ಷಣೆ ಪಡೆಯಲು ನೀರಿನ ತಳಭಾಗಕ್ಕೆ ಹೋಗಿಬಿಡುವುವು. ಪ್ಯೂಪಾದ ಅವಧಿ ೧ ರಿಂದ ೨ ದಿನಗಳು.

ಮರಿಸೊಳ್ಳೆ : ಕೋಶಾವಸ್ಥೆಯಲ್ಲಿ ಪೂರ್ಣ ಜೀವದ ವಿಕಾಸವುಂಟಾಗಿ (ದೈಹಿಕ ಬೆಳೆವಣಿಗೆ) ಕೀಟವು ಹೊರಬರಲು ಕೋಶದ ಬಾಹ್ಯ (ಮೇಲಿನ) ಪದರವು ಹರಿಯುವಂತಾಗಿ ಮರಿಸೊಳ್ಳೆಯು ಹೊರಬರುವುದು. ಸ್ವಲ್ಪ ಕಾಲದ ವಿಶ್ರಾಂತಿಯನ್ನು ಕೋಶದ ಮೇಲ್ಪದರಲ್ಲಿ ಪಡೆದಾಗ ರೆಕ್ಕೆಗಳು ಹಾರಲು ಬಿಚ್ಚಿಕೊಳ್ಳುವುವು. ಆಹಾರಕ್ಕಾಗಿ ಹಾರುವುದು.

ಮೊಟ್ಟೆಯಿಂದ ಪ್ರಾರಂಭಿಸಿ ಮರಿಸೊಳ್ಳೆಯಾಗಿ ಈಚೆ ಬಂದು

ಸ್ವತಂತ್ರವಾಗಿ ಹಾರಾಡಲು ಸುಮಾರು ೧೦ ದಿನಗಳು ಬೇಕು. ಉಷ್ಣವಾತಾವರಣದಲ್ಲಿ ಸುಮಾರು ೭ ದಿನಗಳಲ್ಲಿಯೂ ಶೀತವಾತಾವರಣವಿದ್ದಲ್ಲಿ ಸುಮಾರು ೧೫ ದಿನಗಳವರೆವಿಗೂ ವಿಸ್ತರಿಸಬಹುದು.

ಸೊಳ್ಳೆಗಳು ಹರಡುವ ರೋಗಗಳು

ಸೊಳ್ಳೆಗಳು ಮನುಷ್ಯನಿಗೆ ವೈರಾಣುಜನಿತ ಸೋಂಕನ್ನು ಮತ್ತು ಪರಾವಲಂಬಿಜನಿತ ರೋಗವನ್ನು ಉಂಟುಮಾಡುವ ಶಕ್ತಿಯುಳ್ಳವುಗಳಾಗಿವೆ. ಮಲೇರಿಯಾ ಮತ್ತು ಆನೆಕಾಲು ರೋಗಗಳನ್ನು ಪರಾವಲಂಬಿ (ಪ್ಯಾರಾಸೈಟ್) ಗಳಿಂದಲೂ ಮಿಕ್ಕ ಸೋಂಕುಗಳು ವೈರಾಣುಗಳಿಂದಲೂ ಉಂಟಾಗುತ್ತವೆ.

ಸೊಳ್ಳೆಗಳು ಹರಡುವ ರೋಗಗಳು

ಸೊಳ್ಳೆಯ ಪ್ರಕಾರ / ಭೇದ	ಹರಡುವ ರೋಗ
೧. ಅನಾಫಿಲಿಸ್	ಮಲೇರಿಯಾ
೨. ಕ್ಯೂಲೆಕ್ಸ್	• ಬಾಂಕ್ರಾಫ್ಟಿ ಕ್ರಿಮಿಯಿಂದುಂಟಾಗುವ ಆನೆಕಾಲುರೋಗ (ಫೈಲೇರಿಯಾಸಿಸ್) • ಜಪಾನಿನ ಮೆದುಳು ಜ್ವರ • ಪಶ್ಚಿಮ ನೈಲ್ ನದಿಯ ಜ್ವರ

	● ವೈರಾಣುವಿನಿಂದುಂಟಾಗುವ ಕೀಲುನೋವು (ವೈರಲ್ ಆರ್ಥರೈಟಿಸ್)
೩. ಈಡಿಸ್	● ಡೆಂಗ್ಯೂ ಜ್ವರ ● ರಕ್ತಸ್ರಾವಯುಕ್ತ ಡೆಂಗ್ಯೂ ಜ್ವರ ● ಚಿಕ್ಯೂನ್ ಗುನ್ಯಾ ಜ್ವರ ● ಆನೆಕಾಲು ರೋಗ
೪. ಮಾನ್‌ಸೋನಿಯಾ	● ಚಿಕ್ಯೂನ್‌ಗುನ್ಯಾ ಜ್ವರ ● ಮಲೆಯನ್ ಪ್ರಭೇದದ ಆನೆಕಾಲು ರೋಗ

ಮಲೇರಿಯಾ

ಸಾಮಾನ್ಯವಾಗಿ 'ಚಳಿಜ್ವರ' ಎಂದೇ ಪರಿಚಿತವಾಗಿರುವ ಮಲೇರಿಯಾ ಜ್ವರವು ಕೆಟ್ಟ ಹವೆಯಿಂದ ಹರಡುತ್ತದೆ ಎಂದು ಈ ಹಿಂದೆ ಭಾವಿಸಲಾಗಿತ್ತು. ಭಾರತದಲ್ಲಿ ಜನಿಸಿದ ರೊನಾಲ್ಡ್‌ರಾಸ್ (೧೮೫೭-೧೯೩೨) ಎಂಬ ವಿಜ್ಞಾನಿಯು ಮಲೇರಿಯಾ ರೋಗಕ್ಕೆ ಪ್ಲಾಸ್ಮೋಡಿಯಂ ಎಂಬ ಪರಾವಲಂಬಿ ಸೂಕ್ಷ್ಮಜೀವಿಯು ಕಾರಣ ಮತ್ತು ಈ ಪರಾವಲಂಬಿಯು ಸೊಳ್ಳೆಯ ಮುಖಾಂತರ ಮನುಷ್ಯನ ದೇಹವನ್ನು ಪ್ರವೇಶಿಸಿ ರೋಗಲಕ್ಷಣಗಳನ್ನುಂಟುಮಾಡುತ್ತದೆ ಎಂದು ಪರಿಚಯಿಸಿದನು.

ಸ್ವಲ್ಪ ಅಂಕಿಅಂಶ : ವಿಶ್ವದ ಸುಮಾರು ನೂರು ರಾಷ್ಟ್ರಗಳಲ್ಲಿ ವ್ಯಾಪಿಸಿರುವ ಮಲೇರಿಯಾ ಪ್ರತಿವರ್ಷ ಅಂದಾಜು ೩೦೦ ರಿಂದ ೫೦೦ ಮಿಲಿಯನ್ ಪ್ರಕರಣಗಳು ದಾಖಲಾಗುತ್ತಿವೆ. ೧ ರಿಂದ ೩ ಮಿಲಿಯನ್ ಜನರ ಸಾವಿಗೆ ಕಾರಣವೆಂದೂ ಅದರಲ್ಲಿ ೧ ಮಿಲಿಯನ್ ಸಂಖ್ಯೆಯಷ್ಟು ೫ ವರ್ಷದೊಳಗಿನ ಮಕ್ಕಳೇ ಆಗಿದ್ದಾರೆ ಎಂಬ ಅಂದಾಜು ಗಾಬರಿಪಡಿಸುವಂತಹದ್ದಾಗಿದೆ. ದಕ್ಷಿಣ ಏಷ್ಯಾ ರಾಷ್ಟ್ರಗಳಲ್ಲಿ ಪ್ರತಿ ೧ ಲಕ್ಷ ಜನಸಂಖ್ಯೆಗೆ ಸುಮಾರು ೩೩ ರಿಂದ ೧೧೧೦ ಪ್ರಕರಣಗಳು ಕಂಡುಬರುತ್ತಿದೆ. ನೇಪಾಳದಲ್ಲಿ ಪ್ರತಿ ೧ ಲಕ್ಷ ಜನಸಂಖ್ಯೆಗೆ ೩೩ ಪ್ರಕರಣಗಳು, ಬಾಂಗ್ಲಾದೇಶದಲ್ಲಿ ೪೦, ಥೈಲ್ಯಾಂಡ್‌ನಲ್ಲಿ ೧೩೦, ಭೂತಾನ್ ೨೮೫, ಮೈಮನಾರ್ ೨೨೪, ಇಂಡೋನ್ಯೇಶಿಯಾ ೬೨೦, ಶ್ರೀಲಂಕಾದಲ್ಲಿ ೧೧೧೦ ಪ್ರಕರಣಗಳು ದಾಖಲಾಗಿವೆ. ಭಾರತದಲ್ಲಿ ೧೯೯೬ ರಲ್ಲಿ ೩.೦೪ ಮಿಲಿಯನ್ ಇದ್ದು ೨೦೦೩ ರಲ್ಲಿ ೧.೯೪ರ ಮಟ್ಟಿಗೆ ಇಳಿಮುಖವಾಗಿತ್ತು. ಅಸಂಖ್ಯಾತವಾಗಿ ಪಿಡುಗುರೂಪದಲ್ಲಿ ಗೋಚರಿಸುತ್ತಿದ್ದ ಪ್ರಕರಣಗಳನ್ನು ಗಮನಿಸಿದ ಸರ್ಕಾರ ೧೯೫೩ ರಲ್ಲಿ ರಾಷ್ಟ್ರೀಯ ಮಲೇರಿಯಾ ನಿಯಂತ್ರಣ ಕಾರ್ಯಕ್ರಮಗಳನ್ನು ಜಾರಿಗೆ ತಂದಿತು. ೫ ವರ್ಷದ ಅವಧಿಯವರೆಗೆ ಜಾರಿಯಲ್ಲಿದ್ದ ಕಾರ್ಯಕ್ರಮದಿಂದ ಸುಮಾರು ೭೫ ಮಿಲಿಯನ್‌ನಷ್ಟಿದ್ದ ಮಲೇರಿಯಾ ಪ್ರಕರಣಗಳು ೧೯೫೮ ರ ವೇಳೆಗೆ ಕೇವಲ ೨ ಮಿಲಿಯನ್‌ಗೆ ಇಳಿಯಿತು. ೧೯೬೧ ರ ವೇಳೆಗೆ ೫೦ ಸಾವಿರದಷ್ಟು ಆಯಿತು. ಆದರೆ ದುರದೃಷ್ಟವಶಾತ್ ಎಲ್ಲೋ ಲೋಪವಾದಂತಾಗಿ ೧೯೭೬ ರ ವೇಳೆಗೆ ಪ್ರಕರಣಗಳು ಮತ್ತೆ

ಏರಿಕೆಯಾಗಿ ೬.೫ ಮಿಲಿಯನ್‌ನಷ್ಟಾಯಿತು. ಕಾರ್ಯಕ್ರಮದಲ್ಲಿದ್ದ DDT ಸಿಂಪಡಿಸುವಿಕೆ ಮಾತ್ರ ಸೊಳ್ಳೆಗಳ ಹತೋಟಿ ಮಾಡಲು ಸಾಧ್ಯವಿಲ್ಲ. ಇನ್ನಿತರ ಕ್ರಮಗಳನ್ನು ಕಾರ್ಯಕ್ರಮದಲ್ಲಿ ಅಳವಡಿಸಬೇಕೆಂದು ಯೋಚನೆಗಳಿಗೆ ನಾಂದಿ ಹಾಡಿತು.

ರೋಗಕಾರಕ ಕ್ರಿಮಿ : ಪ್ಲಾಸ್ಮೋಡಿಯಂ ಸೂಕ್ಷ್ಮಕ್ರಿಮಿಯು ವೈವಾಕ್ಸ್, ಫಾಲ್ಸಿಫಾರಂ, ಮಲೇರಿಯೆ ಮತ್ತು ಓವಲೆ ಎಂಬ ೪ ಪ್ರಭೇದಗಳನ್ನು ಹೊಂದಿದೆ. ನಮ್ಮ ದೇಶದಲ್ಲಿ ಹೆಚ್ಚಿನ ಮಲೇರಿಯಾ ಪ್ರಕರಣಗಳು ವೈವಾಕ್ಸ್‌ನಿಂದುಂಟಾಗುತ್ತವೆ. ಪ್ಲಾಸ್ಮೋಡಿಯಂ ಕ್ರಿಮಿಯು ಜೀವಿಸಲು ಮನುಷ್ಯ ಮತ್ತು ಸೊಳ್ಳೆ ಎರಡೂ ಜೀವಿಗಳಲ್ಲಿ ಆಶ್ರಯ ಪಡೆಯುತ್ತದೆ.

ಮಲೇರಿಯಾ ಜ್ವರದಿಂದ ಪೀಡಿತ ವ್ಯಕ್ತಿಯ ದೇಹವನ್ನು ಕಚ್ಚಿ ರಕ್ತವನ್ನು ಹೀರಿದಾಗ ರಕ್ತದಲ್ಲಿರುವ ಪ್ಲಾಸ್ಮೋಡಿಯಂ ಸೂಕ್ಷ್ಮಜೀವಿಗಳು ಸೊಳ್ಳೆಯ ಉದರವನ್ನು ಸೇರುವುವು. ಸೊಳ್ಳೆಯ ಉದರದಲ್ಲಿ ಗಂಡು ಮತ್ತು ಹೆಣ್ಣು ಸೊಳ್ಳೆಗಳ ಮಿಲನದಿಂದ ಊಕೈನೇಟ್ ಎಂಬ ಅಂಡಾಣು ಬೆಳೆಯುವುವು. ಊಕೈನೇಟ್ ಅಂಡಾಣುಗಳು ಕೆಲಸಮಯದ ನಂತರ ಪಕ್ವವಾಗಿ ತನ್ನೊಡಲಿನಲ್ಲಿ ಬೆಳೆದಿರುವ ಅಸಂಖ್ಯಾತ ಸ್ಪೊರೋಜಾಯಿಟ್ಸ್ ಎಂಬ ಮರಿ ಅಂಡಾಣುಗಳನ್ನು ಸೊಳ್ಳೆಯ ಶರೀರದಲ್ಲಿ ಹರಡುವಂತೆ ಹೊರಬಿಡುತ್ತವೆ. ಮರಿಅಂಡಾಣು / ಸ್ಪೊರೋಜಾಯಿಟ್ಸ್‌ಗಳು ಹೆಚ್ಚಿನ ಪ್ರಮಾಣದಲ್ಲಿ ಸೊಳ್ಳೆಯ ಬಾಯಿಯಲ್ಲಿರುವ ಲಾಲಾಸ್ರಾವದಲ್ಲಿ ಶೇಖರಗೊಳ್ಳುತ್ತವೆ. ಹೀಗೆ ಈ ರೀತಿಯಲ್ಲಿ



ರೊನಾಲ್ಡ್ ರಾಸ್ (1857 - 1932)

ಚಿತ್ರಕೃಪೆ

ಡಾ. ಹೆಚ್.ಡಿ. ಚಂದ್ರಪ್ಪಗೌಡ ಬರೆದಿರುವ ವಿಶ್ವವಿಖ್ಯಾತ ವೈದ್ಯ ವಿಜ್ಞಾನಿಗಳು ಎಂಬ ಪುಸ್ತಕ

ಲಾಲಾಗ್ರಂಥಿ ಮತ್ತು ಲಾಲಾಸ್ರಾವಗಳಲ್ಲಿ ಸ್ಪೊರೋಜಾಯಿಟ್ಸ್‌ಗಳನ್ನು ಅಡಗಿಸಿಟ್ಟುಕೊಂಡಿರುವ ಸೊಳ್ಳೆಯು ಮನುಷ್ಯನಿಗೆ ಹಾನಿಕಾರಕವಾಗುತ್ತದೆ. ಈ ಸೊಳ್ಳೆಯು ಆರೋಗ್ಯವಂತ ಮನುಷ್ಯನನ್ನು ಕಚ್ಚಿ ರಕ್ತವನ್ನು ಹೀರುವ ಮೊದಲು ಕಚ್ಚಿದ ಸ್ಥಳದಲ್ಲಿ ತನ್ನ ಲಾಲಾಸ್ರಾವದಲ್ಲಿರುವ ಸ್ಪೊರೋಜಾಯಿಟ್ಸ್‌ಗಳನ್ನು ದೇಹಕ್ಕೆ ತೂರಿಸುತ್ತದೆ. ಹೀಗೆ ಸ್ಪೊರೋಜಾಯಿಟ್ಸ್‌ಗಳು ದೇಹವನ್ನು ಸೇರಿದ ನಂತರದಲ್ಲಿ ವೃದ್ಧಿಗೊಂಡು ರೋಗೋತ್ಪತ್ತಿ ಕ್ರಿಯೆಯನ್ನು ಪ್ರಾರಂಭಿಸುತ್ತವೆ. ಲಿವರ್ (ಯಕೃತ್) ಮತ್ತು ಕೆಂಪುರಕ್ತಕಣಗಳನ್ನೇ ಗುರಿಯಾಗಿರಿಸಿಕೊಂಡು ಘಾಸಿಗೊಳಿಸುತ್ತವೆ. ಲಕ್ಷಣಗಳ ಪ್ರಾದುರ್ಭಾವಕ್ಕೆ ನಾಂದಿ ಹಾಡುತ್ತವೆ. ಜ್ವರವೇ ಪ್ರಧಾನ ಲಕ್ಷಣವಾಗಿರುವ ಈ ರೋಗದಲ್ಲಿ ಜ್ವರದಲ್ಲಿಯೂ ವೈಶಿಷ್ಟ್ಯತೆಗಳನ್ನು ತೋರುತ್ತದೆ. ಪ್ಲಾಸ್ಮೋಡಿಯಂನ ವಿವಿಧ ಪ್ರಭೇದಗಳಿಗೆ ಅನುಸಾರವಾಗಿ ದಿನಕ್ಕೆ ಒಂದರಿಂದ ಎರಡು ಬಾರಿ, ಎರಡು

ದಿನಗಳಿಗೊಮ್ಮೆ ಅಥವಾ ಮೂರು ದಿನಗಳಿಗೊಮ್ಮೆ ಬಿಟ್ಟು ಬಿಟ್ಟು ಬರುವಂತಹ ಜ್ವರ ಇದಾಗಿದೆ. ಹೀಗೆ ಜ್ವರವಿದ್ದಾಗ ಪ್ಲಾಸ್ಮೋಡಿಯಂ ಪರಾವಲಂಬಿ ಕ್ರಿಮಿಗಳು ಶರೀರದ ತುಂಬೆಲ್ಲಾ ಪಸರಿಸಿರುತ್ತವೆ. ಸೊಳ್ಳೆಯು ಮನುಷ್ಯನನ್ನು ಕಚ್ಚಿ ರಕ್ತವನ್ನು ಹೀರಿದಾಗ ಕ್ರಿಮಿಗಳು ರಕ್ತದೊಂದಿಗೆ ಸೊಳ್ಳೆಯ ಹೊಟ್ಟೆಯನ್ನು ಸೇರಿ ಮತ್ತೆ ಜೀವನಚಕ್ರ ಮುಂದುವರೆಯುತ್ತದೆ.

ರೋಗದ ಸ್ವಭಾವ : ಮಲೇರಿಯಾ ರೋಗವು ತನ್ನಿಂದ ತಾನೇ ಕಡಿಮೆಯಾಗುವುದಿಲ್ಲ. ಔಷಧೋಪಚಾರ ಅತ್ಯಗತ್ಯ. ಸಕಾಲದಲ್ಲಿ ಸೂಕ್ತ ಔಷಧ ದೊರೆಯದಿದ್ದರೆ ರೋಗಿಗೆ ಪ್ರಾಣಾಪಾಯವನ್ನುಂಟುಮಾಡುತ್ತದೆ. ಕ್ರಿಮಿಯು ದೇಹವನ್ನು ಪ್ರವೇಶಿಸಿದ ೧೦ ದಿನಗಳಲ್ಲಿ ರೋಗ ಲಕ್ಷಣಗಳು ವ್ಯಕ್ತವಾಗುತ್ತವೆ.

ರೋಗದ ಲಕ್ಷಣಗಳು : ಮಲೇರಿಯಾ ರೋಗದ ಲಕ್ಷಣಗಳು ಬಹಳ ನಿರ್ದಿಷ್ಟವಾಗಿವೆ. ಮೂರು ಹಂತಗಳಲ್ಲಿ ಗೋಚರಿಸುವ ಲಕ್ಷಣಗಳೆಂದರೆ :

೧. ಮೊದಲನೆಯ ಚಳಿಯ ಹಂತ : ಮೈಕೈ ನೋವು, ಆಲಸ್ಯ, ವಾಕರಿಕೆ ಮತ್ತು ತಲೆನೋವಿನೊಂದಿಗೆ ಪ್ರಾರಂಭವಾಗುವ ಈ ಹಂತದಲ್ಲಿ ಮೈಮನದಲ್ಲಿ ಚಳಿಯ (ನಡುಕದ) ಅನುಭವವನ್ನೇ ನೀಡುತ್ತದೆ. ಚಳಿಯು ಪ್ರಾರಂಭವಾದ ೧ ಘಂಟೆಯೊಳಗಾಗಿ ತಲೆನೋವು ತೀವ್ರವಾಗುತ್ತದೆ. ಪ್ರಾರಂಭದಲ್ಲಿ ಚರ್ಮವು ತಣ್ಣಗಿದ್ದು ಕ್ರಮೇಣ ತಾಪ ಏರುತ್ತಾ ಬರುತ್ತದೆ. ವಾಂತಿಯೂ ಆಗಬಹುದು. ಚಳಿಯ ಹಂತದಲ್ಲಿ ಚಳಿಯ ತೀವ್ರತೆ ಎಷ್ಟರಮಟ್ಟಿಗೆ ಎಂದರೆ ;

ರೋಗಿಯ ಶರೀರ ಸಂಪೂರ್ಣ ನಡುಗುತ್ತಿರುತ್ತದೆ. ಎರಡು ಅಥವಾ ಮೂರು ಉಣ್ಣೆ ಕಂಬಳಿಗಳನ್ನು ಹೊದ್ದಿಸಿದ್ದರೂ ನಿಲ್ಲದ ನಡುಕ, ರೋಗಿಯನ್ನು ಒತ್ತಿಹಿಡಿದರೂ ಹಿಡಿದವನೇ ನಡುಗುವಷ್ಟು ಚಳಿ ಇರುತ್ತದೆ. ನೋಡುಗರಿಗೆ ಗಾಬರಿ ಹುಟ್ಟಿಸುತ್ತದೆ. ಚಳಿಯ ಹಂತವು ೨೦ ನಿಮಿಷದಿಂದ ೧ ಘಂಟೆಯವರೆವಿಗೂ ವಿಸ್ತರಿಸಬಹುದು.

೨. ಎರಡನೆಯ ಬಿಸಿಯ ಹಂತ (ಜ್ವರದ ಹಂತ) : ಮೈ ಶಾಖವು ಕ್ರಮೇಣ ಏರುತ್ತಾ ಚಳಿಯ ಅನುಭವ ಕಡಿಮೆಯಾಗುತ್ತಾ ಬರುವುದು. ಸುಮಾರು ೬ ರಿಂದ ೮ ಘಂಟೆಯ ಕಾಲದವರೆವಿಗೂ ಜ್ವರವು ಇದ್ದು ಶಾಖದಿಂದಾಗಿ ಪ್ರಾರಂಭಿಕ ಹಂತದಲ್ಲಿ ಹೊಂದಿದ್ದ ಕಂಬಳಿ ಇತ್ಯಾದಿಗಳನ್ನು ದೂರ ತಳ್ಳುವಂತಾಗುತ್ತದೆ. ಉಸಿರಾಟವು ಹೆಚ್ಚುತ್ತದೆ ಮತ್ತು ಬಿಸಿಯಾಗಿರುತ್ತದೆ. ಜ್ವರವು ೧೦೪ ^{0}F ರಿಂದ ೧೦೫ ^{0}F ರವರೆವಿಗೂ ಏರಿ ಬಾಯಾರಿಕೆ, ಮೈದಾಹ, ತುಟಿ, ಅಂಗಳು ಬಾಯಿಗಳು ಒಣಗುವಿಕೆ ಅನುಭವಕ್ಕೆ ಬರುವುದು. ಅಧಿಕ ಜ್ವರದ ತಾಪ ತಾಳದೇ ಹತೋಟಿಯಿಲ್ಲದ ಮಾತು ಕೂಡಾ ವ್ಯಕ್ತವಾಗಬಹುದು.

೩.ಮೂರನೆಯ ಬೆವರುವಿಕೆಯ ಹಂತ : ಸುಮಾರು ೬ ಘಂಟೆಗಳವರೆಗೆ ಇರುವ ಜ್ವರ ಕ್ರಮೇಣ ಕಡಿಮೆಯಾಗುತ್ತಾ ಬರುವುದು. ಮೈ ಬೆವರಲು ಪ್ರಾರಂಭವಾಗುವುದು. ಇದೂ ಕೂಡ ಅತಿರೇಕವೇ. ಮೈಮೇಲಿನ ಬಟ್ಟೆ, ಹಾಸಿಗೆ, ಹೊದಿಕೆಗಳೂ ಕೂಡಾ ಒದ್ದೆಯಾಗುವಷ್ಟು ರೋಗಿಯು ಬೆವರುತ್ತಾನೆ. ಹೀಗೆ ಚಳಿಯ ಹಂತ, ಜ್ವರದ ಹಂತ ಮತ್ತು ಬೆವರುವಿಕೆಯ ಹಂತಗಳು ಮತ್ತೊಮ್ಮೆ ಮಗದೊಮ್ಮೆ ನಿರ್ದಿಷ್ಟ ಸಮಯಾನಂತರ

ಪುನರಾವರ್ತನೆಗೊಳ್ಳುವುವು. ಪ್ಲಾಸ್ಮೋಡಿಯಂ ಪರಾವಲಂಬಿ ಕ್ರಿಮಿಯ ಪ್ರಭೇದವನ್ನಾಧರಿಸಿ ಬಿಟ್ಟು ಬಿಟ್ಟು ಬರುವ ಜ್ವರವು ದಿನಕ್ಕೊಮ್ಮೆ, ಎರಡು ದಿನಕ್ಕೊಮ್ಮೆ, ಮೂರರಿಂದ ನಾಲ್ಕು ದಿನಗಳಿಗೊಮ್ಮೆ ಗೋಚರಿಸುತ್ತದೆ. ಇದು ಮಲೇರಿಯಾ ಜ್ವರದ ವಿಶಿಷ್ಟತೆ, ಪ್ಲಾಸ್ಮೋಡಿಯಂ ಕ್ರಿಮಿಯು ದೇಹದಲ್ಲಿರುವ ಕೆಂಪು ರಕ್ತಕಣಗಳನ್ನು ನಾಶಗೊಳಿಸುತ್ತದೆ. ದೇಹದ ಪ್ರಾಣದ ಮೂಲ ಮತ್ತು ಶಕ್ತಿಯ ಆಕರವಾಗಿರುವ ಕೆಂಪುರಕ್ತಕಣಗಳ ನಾಶದಿಂದ ಶರೀರದಲ್ಲಿ ದೌರ್ಬಲ್ಯ, ಇಂದ್ರಿಯಗಳ ಪಟುತ್ವದಲ್ಲಿ ಹೀನತೆಗಳುಂಟಾಗುತ್ತವೆ. ಚರ್ಮದ ಕಾಂತಿ ನಾಶವಾಗುತ್ತದೆ. ನಾಶವಾಗುತ್ತಿರುವ ಕೆಂಪುರಕ್ತಗಳ ಪ್ರಮಾಣವನ್ನು ಸರಿದೂಗಿಸಲು ಯಕೃತ್ತು ಮತ್ತು ಪ್ಲೀಹಾಗಳು ಹೆಚ್ಚು ಕಾರ್ಯ ಮಾಡುವ ಪರಿಸ್ಥಿತಿಯನ್ನು ತಂದೊಡ್ಡುವುದರಿಂದ ಆ ಅಂಗಗಳು ಊದಿಕೊಳ್ಳುವುವು. ಗರ್ಭಿಣಿಯರಲ್ಲಿ ಮಲೇರಿಯಾ ಉಂಟಾದರೆ ಗರ್ಭಪಾತವುಂಟಾಗಬಹುದು. ಮಕ್ಕಳಲ್ಲಿ ಸೆಳೆತ ಅಥವಾ / ಮತ್ತು ಪ್ರಜ್ಞಾಹೀನ ಅವಸ್ಥೆಗಳು ಉಂಟಾಗುವುದು.

ಘಾತುಕತೆ : ಪ್ಲಾಸ್ಮೋಡಿಯಂ ಫಾಲ್ಸಿಫಾರಂ ರೋಗಾಣುಗಳು ಶರೀರದಲ್ಲಿರುವ ಲೋಮನಾಳಗಳಲ್ಲಿ ಸಂಚರಿಸುತ್ತಿರುವಾಗ ರಕ್ತಸಂಚಾರಕ್ಕೆ ಅಡೆತಡೆಯನ್ನುಂಟುಮಾಡುತ್ತದೆ. ವೃದ್ಧಿಹೊಂದುತ್ತಿರುವ ಎಳೆ ಕೀಟಗಳು ಪರಸ್ಪರ ಒಂದಕ್ಕೊಂದು ಬೆಸೆದುಕೊಂಡು ಲೋಮನಾಳಗಳ ಒಳಗೋಡೆಗಳಲ್ಲಿ ಅಂಟಿಕೊಂಡುಬಿಡುತ್ತವೆ. ರಕ್ತಕಣಗಳ ಸಂಪರ್ಕಕ್ಕೆ ಬರುವ ಇವು ಕೆಂಪುರಕ್ತಕಣಗಳನ್ನು ಸಹ ಒಂದಕ್ಕೊಂದು ಅಂಟಿಕೊಳ್ಳುವಂತೆ ಮಾಡಿಬಿಡುತ್ತವೆ. ರಕ್ತನಾಳಗಳಲ್ಲಿ ಸರಾಗವಾಗಿ ರಕ್ತಸಂಚರಿಸಲು

ಬಿಡುವುದಿಲ್ಲ. ರಕ್ತದ ಸಂಚಾರದಲ್ಲಿ ಏರುಪೇರಾದರೆ ಶರೀರಕ್ಕೆ ಹಾನಿಯುಂಟಾಗುತ್ತದೆ. ಪ್ರಮುಖ ಅಂಗಗಳಾದ ಮಿದುಳು, ಮೂತ್ರಪಿಂಡಗಳು, ಯಕೃತ್‌ಗಳು ವಿಶೇಷವಾಗಿ ರಕ್ತದ ಕೊರತೆಯಿಂದ ನರಳುತ್ತವೆ. ಮಿದುಳಿಗೆ ಆಘಾತವಾಗುತ್ತದೆ. ಸಕಾಲದಲ್ಲಿ ಸೂಕ್ತ ಚಿಕಿತ್ಸೆ ದೊರೆಯದಿದ್ದರೆ ಮರಣ ಖಂಡಿತ.

ಪ್ರಭೇದಗಳು : ಲಕ್ಷಣಗಳ ಆಧಾರದ ಮೇಲೆ ಮಲೇರಿಯಾವನ್ನು ಮೂರು ವಿಧಗಳಾಗಿ ವಿಂಗಡಿಸಬಹುದಾಗಿದೆ.

೧. ಮಿದುಳಿನ ಮಲೇರಿಯಾ (ಸೆರಿಬ್ರಲ್ ಮಲೇರಿಯಾ) : ತೀವ್ರಜ್ವರ, ಮೂರ್ಛೆ, ಯಾವುದಾದರೊಂದು ಅಂಗಕ್ಕೆ (ಕೈ ಅಥವಾ ಕಾಲು) ಲಕ್ವ ಹೊಡೆಯುವುದು ಪ್ರಮುಖ ಲಕ್ಷಣಗಳಾಗಿರುತ್ತವೆ.

೨. ಶೀತದ ಮಲೇರಿಯಾ (ಆಲ್‌ಜಿಡ್ ಮಲೇರಿಯಾ) : ಸ್ಪರ್ಶಕ್ಕೆ ಶೀತವೆನಿಸುವಂತಹ ಚರ್ಮ, ರಕ್ತಸಂಚಾರದಲ್ಲಿ ವ್ಯತ್ಯಯ, ವಾಂತಿ, ಅತಿಸಾರ ಅಥವಾ ಆಮಶಂಕೆಗಳು ವ್ಯಕ್ತವಾಗುವುವು.

೩.ನಂಜಿನ ಮಲೇರಿಯಾ : ಸತತವಾಗಿ ಕಾಡುವ ಜ್ವರ, ರಕ್ತಕಣಗಳು ಕಡಿಮೆಯಾಗುವಿಕೆ ಮತ್ತು ಸುಸ್ತು ಬಳಲಿಕೆಗಳು ತೀವ್ರತರವಾಗಿ ವ್ಯಕ್ತವಾಗುವುವು.

ರೋಗ ಪತ್ತೆಹಚ್ಚುವಿಕೆ : ಜ್ವರದಿಂದ ಬಳಲುತ್ತಿರುವ ರೋಗಿಯ ಇತಿಹಾಸವನ್ನು ಕೂಲಂಕಷವಾಗಿ ಆಲಿಸಿ ಜ್ವರ ಬರುವ ವಿವಿಧ ಹಂತಗಳನ್ನು, ಜೊತೆಗೂಡಿರುವ ಇತರ ಲಕ್ಷಣಗಳನ್ನು, ರೋಗದ ಪ್ರಕರಣಗಳೇನಾದರೂ ಆ ಪ್ರದೇಶದಲ್ಲಿದ್ದರೆ ಎಲ್ಲವನ್ನೂ

ಒಟ್ಟಾಗಿ ವಿಮರ್ಶಿಸಿದಾಗ ಮಲೇರಿಯಾ ರೋಗದ ಇರುವಿಕೆಯನ್ನು ವೈದ್ಯರು ಹಾಸಿಗೆ ಬಳಿಯಲ್ಲೇ ೯೦ ಪ್ರತಿಶತ ಶಂಕಿಸಬಹುದು. ರೋಗಿಯ ರಕ್ತವನ್ನು ಪರೀಕ್ಷೆ ಮಾಡುವುದರಿಂದ ಶಂಕಿತ ರೋಗವನ್ನು ನಿರ್ಧರಿಸಬಹುದು. ಬೆರಳು ತುದಿಯಲ್ಲಿ ರಕ್ತವನ್ನು ತೆಗೆದು ಗಾಜಿನ ಪಟ್ಟಿಯಲ್ಲಿ ಲೇಪಿಸಿ ಸೂಕ್ಷ್ಮದರ್ಶಕ ಯಂತ್ರದಿಂದ ನೋಡಿದಾಗ ಕ್ರಿಮಿಗಳು (ಪ್ಲಾಸ್ಮೋಡಿಯಂ) ಗೋಚರವಾದರೆ ರೋಗ ನಿಶ್ಚಯವಾದಂತೆಯೇ ಸರಿ. ಕ್ಷಕಿರಣ ಮತ್ತು ಮಲ ಪರೀಕ್ಷೆ, ಮೂತ್ರ ಪರೀಕ್ಷೆಗಳಿಂದ ರೋಗ ನಿರ್ಣಯವಾಗುವುದಿಲ್ಲ. ರಕ್ತ ಪರೀಕ್ಷೆಯಿಂದ ಪ್ಲಾಸ್ಮೋಡಿಯಂ ಕ್ರಿಮಿಗಳ ಪ್ರಭೇದಗಳನ್ನು ಕೂಡಾ ಪತ್ತೆಹಚ್ಚಬಹುದಾಗಿದೆ.

ಚಿಕಿತ್ಸಾ ವಿಧಾನಗಳು : ಮಲೇರಿಯಾ ರೋಗದ ಚಿಕಿತ್ಸೆ ಮಾಡಬೇಕಾದರೆ ಯೋಜಿತವಾಗಿ ಕ್ರಿಯೆಗಳನ್ನು ಆರಂಭಿಸಬೇಕು. ಎರಡು ರೀತಿಯಲ್ಲಿ ವಿಧಾನಗಳನ್ನು ರೂಪುಗೊಳಿಸಲಾಗಿದೆ. ಶಂಕಾಸ್ಪದ ಚಿಕಿತ್ಸಾ ಕ್ರಮ ಮತ್ತು ನಿಶ್ಚಯಾತ್ಮಕ ಚಿಕಿತ್ಸಾ ಕ್ರಮಗಳು (ಸಂಪೂರ್ಣ ಚಿಕಿತ್ಸಾ ಕ್ರಮ)

1) ಶಂಕಾಸ್ಪದ ಚಿಕಿತ್ಸಾ ಕ್ರಮ (ಪೂರ್ವಭಾವೀ ಚಿಕಿತ್ಸೆ, ಊಹಾತ್ಮಕ ಚಿಕಿತ್ಸೆ) : ಶಂಕಿತ ರೋಗಿಯ ರಕ್ತವನ್ನು ತೆಗೆದು ಪ್ರಯೋಗಾಲಯಕ್ಕೆ ಕಳುಹಿಸಿದ ತಕ್ಷಣದಿಂದಲೇ ಫಲಿತಾಂಶ ಬರುವವರೆಗೂ ಕಾಯದೇ ಮಲೇರಿಯಾ ರೋಗವು ಇರಬೇಕೆಂದು ಊಹಿಸಿ (ಶಂಕಿಸಿ) ಚಿಕಿತ್ಸೆ ಪ್ರಾರಂಭಿಸಬೇಕು. ಈ ಕ್ರಮದಲ್ಲಿ ಪ್ರಮುಖವಾದ ಕ್ಲೋರೋಕ್ವಿನ್ ಎಂಬ ಔಷಧಿಯನ್ನು ಮಾತ್ರೆಯ ರೂಪದಲ್ಲಿ ರೋಗಿಯು ಸೇವಿಸಲು ನೀಡಲಾಗುತ್ತದೆ.

ಕ್ಲೋರೋಕ್ವಿನ್ ಪ್ರಮಾಣವು ರೋಗಿಯ ವಯಸ್ಸಿಗೆ ಅನುಗುಣವಾಗಿ ನಿರ್ಧರಿಸಲಾಗುತ್ತದೆ. ಪ್ರತಿ ಮಾತ್ರೆಯಲ್ಲಿ ೧೫೦ ಮಿಲಿ ಗ್ರಾಂ. ನಷ್ಟು ಪ್ರಮಾಣದ ಕ್ಲೋರೋಕ್ವಿನ್ ಇರುತ್ತದೆ. ಕೆಳಕಂಡ ಪ್ರಮಾಣದಲ್ಲಿ ಪೂರ್ವಭಾವಿ ಚಿಕಿತ್ಸೆ ನೀಡಬೇಕು.

ವಯಸ್ಸು	ಕ್ಲೋರೋಕ್ವಿನ್ ಪ್ರಮಾಣ	ಮಾತ್ರೆ ರೂಪ (ಪ್ರಮಾಣ)
೧ ವರ್ಷದ ಕೆಳಗೆ	೭೫ ಮಿಲಿಗ್ರಾಂ	೧ / ೨
೧ ರಿಂದ ೪ ವರ್ಷ	೧೫೦ ಮಿಲಿಗ್ರಾಂ	೧
೫ ರಿಂದ ೮ ವರ್ಷ	೩೦೦ ಮಿಲಿಗ್ರಾಂ	೨
೯ ರಿಂದ ೧೪ ವರ್ಷದವರೆಗೆ	೪೫೦ ಮಿಲಿಗ್ರಾಂ	೩
೧೪ ಮತ್ತು ಅದಕ್ಕಿಂತ ಮೇಲ್ಪಟ್ಟು	೬೦೦ ಮಿಲಿಗ್ರಾಂ	೪

ಒಂದೇ ಬಾರಿಗೆ ನಿಗದಿತ (ನಿರ್ಧರಿಸಿದ) ಪ್ರಮಾಣದಲ್ಲಿ ಮಾತ್ರೆಗಳನ್ನು ಸೇವಿಸಬೇಕು. ಪೂರ್ವಭಾವಿ ಚಿಕಿತ್ಸೆಯನ್ನು ಗರ್ಭಿಣಿಯ ಅವಸ್ಥೆಯಲ್ಲಿ ಕೂಡಾ ನೀಡಬಹುದು.

ಪ್ರಕರಣ ಕಂಡುಬಂದ ಪ್ರದೇಶದ ಜನರಿಗೆಲ್ಲಾ ೧ ವರಸೆ ಪೂರ್ವಭಾವಿ ಚಿಕಿತ್ಸೆ ನೀಡಬೇಕು. ರೋಗಿಯ ಮನೆಯಲ್ಲಿ ವಾಸಿಸುವ ಇತರರಿಗೂ ೧ ವರಸೆ ನೀಡಬೇಕು. ಇದಕ್ಕೆ ಸಂಪರ್ಕ ಚಿಕಿತ್ಸೆ (ಕಾಂಟಾಕ್ಟ್ ಟ್ರೀಟ್‌ಮೆಂಟ್) ಎಂದು ಹೆಸರು

ರಕ್ತ ಪರೀಕ್ಷೆಯಿಂದ ಮಲೇರಿಯಾ ರೋಗವು ಖಚಿತವಾದರೆ ಪೂರ್ವಭಾವೀ ಚಿಕಿತ್ಸೆಯಷ್ಟೇ ಸಾಕಾಗುವುದಿಲ್ಲ. ರೋಗಿಯ

ದೇಹದಲ್ಲಿರುವ ರೋಗಾಣುಗಳನ್ನು ನಾಶಪಡಿಸಲು ಕ್ಲೋರೋಕ್ವಿನ್ ಔಷಧವು ಅಷ್ಟೊಂದು ಯಶಸ್ವಿಯಾಗಿ ಕೆಲಸ ಮಾಡುವುದಿಲ್ಲ. ಆದ ಕಾರಣ ರೋಗಿಗೆ ಕ್ಲೋರೋಕ್ವಿನ್ ಜೊತೆಗೆ ಪ್ರೈಮಾಕ್ವಿನ್ ಎಂಬ ಮತ್ತೊಂದು ಔಷಧಿಯನ್ನು ಕೂಡಾ ನೀಡಿ ಚಿಕಿತ್ಸೆ ಮಾಡಬೇಕು. ಕ್ಲೋರೋಕ್ವಿನ್ ಔಷಧಿಗೆ ಬಗ್ಗದ ಕ್ರಿಮಿಗಳನ್ನು ನಾಶಮಾಡಲು ಪ್ರೈಮಾಕ್ವಿನ್ ಸಹಾಯಕಾರಿಯಾಗಿದೆ. ರೋಗಿಗೆ ದೇಹದಲ್ಲಿರಬಹುದಾದ ಕ್ರಿಮಿಗಳು ಮತ್ತು ಅವುಗಳಿಂದುಂಟಾಗುವ ರಕ್ತಕಣಗಳ ಆಘಾತ, ದುಷ್ಪರಿಣಾಮಗಳನ್ನು ಸಂಪೂರ್ಣವಾಗಿ ತೊಡೆದುಹಾಕಲು ಈ ರೀತಿಯ ಔಷಧ ಸೇವನಾ ವಿಧಿಯು ಹೆಚ್ಚು ಪರಿಣಾಮಕಾರಿಯಾದುದರಿಂದ ಮತ್ತು ಒಂದು ಬಾರಿ (ವರಸೆ) ಗಿಂತ ಹೆಚ್ಚು ಬಾರಿ ನೀಡುವುದರಿಂದ ಈ ಕ್ರಿಯಾಕ್ರಮಕ್ಕೆ ಸಂಪೂರ್ಣ ಚಿಕಿತ್ಸೆ (ರಾಡಿಕಲ್ ಟ್ರೀಟ್‌ಮೆಂಟ್) ಎಂದು ಹೆಸರಿಸಲಾಗಿದೆ. ರೋಗಿಗೆ ಮತ್ತು ರೋಗಿಯ ಸಂಪರ್ಕಕ್ಕೆ ಬರುವ ಜನಕ್ಕೆ ಮತ್ತು ಆ ಸ್ಥಳದಲ್ಲಿ ವಾಸಿಸುವ ಜನರಿಗೆಲ್ಲಾ ೧ ವರಸೆ ಮುನ್ನೆಚ್ಚರಿಕೆಯಾಗಿ ಕ್ಲೋರೋಕ್ವಿನ್ ಮಾತ್ರೆ ನೀಡುವುದನ್ನು ಕೂಡಾ ಈ ಕ್ರಿಯಾಯೋಜನೆಯಲ್ಲಿ ಅಂತರ್ಗತ ಮಾಡಲಾಗಿದೆ.

ಸಂಪೂರ್ಣ ಚಿಕಿತ್ಸೆಗಾಗಿ ಔಷಧ ನಿರ್ಧಾರ (ವಯಸ್ಸಿಗೆ ಅನುಗುಣವಾಗಿ)

ವಯಸ್ಸು	ಕ್ಲೋರೋಕ್ವಿನ್ (೧೫೦ ಮಿಲಿಗ್ರಾಂ ಆಧಾರಿತ)		ಪ್ರೈಮಾಕ್ವಿನ್ (೨.೫ ಮಿಗ್ರಾಂ)	
	ಮಿಗ್ರಾಂ	ಮಾತ್ರೆಗಳ ಸಂಖ್ಯೆ	ಮಿಗ್ರಾಂ.	ಮಾತ್ರೆಗಳ ಸಂಖ್ಯೆ
೧ ವರ್ಷದ ಕೆಳಗೆ	--	--	--	--
೧ ರಿಂದ ೪ ವರ್ಷ	೧೫೦	೧	೨.೫	೧
೫ ರಿಂದ ೮ ವರ್ಷ	೩೦೦	೨	೫.೦	೨
೯ ರಿಂದ ೧೪ ವರ್ಷ	೪೫೦	೩	೧೦.೦	೪
೧೫ ರಿಂದ ಮೇಲ್ಪಟ್ಟು	೬೦೦	೪	೧೫.೦	೬

ಫಾಲ್ಸಿಫಾರಂನಿಂದುಂಟಾಗಿರುವ ಮಲೇರಿಯಾಕ್ಕೆ ಸಂಪೂರ್ಣ ಚಿಕಿತ್ಸೆಗಾಗಿ ವಯಸ್ಕರಲ್ಲಿ ೬೦೦ ಮಿಗ್ರಾಂ ಕ್ಲೋರೋಕ್ವಿನ್ ಮತ್ತು ೪೫ ಮಿಗ್ರಾಂ ಪ್ರೈಮಾಕ್ವಿನ್‌ಗಳನ್ನು ಒಂದೇ ವರಸೆಯಲ್ಲಿ ಒಮ್ಮೆಗೇ ನೀಡಬೇಕು.

ಕೆಲವೊಮ್ಮೆ ಕೆಲವು ಪ್ರದೇಶಗಳಲ್ಲಿ ಕ್ಲೋರೋಕ್ವಿನ್‌ನ ಪ್ರಮಾಣವನ್ನೇ ಹೆಚ್ಚಿಸಿ ಚಿಕಿತ್ಸೆ ಮಾಡಲಾಗುವುದು. ಗರ್ಭಿಣಿಯರಿಗೆ ಮತ್ತು ಮಕ್ಕಳಿಗೆ ಪ್ರೈಮಾಕ್ವಿನ್ ಕೊಡಬಾರದು.

ಮಲೇರಿಯಾ ಜೊತೆಗೆ ಅಥವಾ ಸಂಯುಕ್ತವಾದ ಇತರೆ

ಸೋಂಕುಗಳ ಶಂಕೆ ಇದ್ದರೆ ಪ್ರೈಮಾಕ್ವಿನ್ ಜೊತೆಗೆ 'ಸಲ್ಫ' ಔಷಧಿಗಳನ್ನು ಕೂಡಾ ನೀಡಲಾಗುತ್ತದೆ.

ಪ್ರಮುಖವಾಗಿ ವಯಸ್ಕರಲ್ಲಿ ಮೊದಲನೆಯ ದಿನ ೬೦೦ ಮಿ.ಗ್ರಾಂ. ಕ್ಲೋರೋಕ್ವಿನ್ ಮತ್ತು ೧೫ ಮಿಗ್ರಾಂ ಪ್ರೈಮಾಕ್ವಿನ್‌ನನ್ನು ಒಂದೇ ಬಾರಿಗೆ ನುಂಗಿಸಲಾಗುವುದು. ನಂತರದ ದಿನಗಳಲ್ಲಿ (ನಾಲ್ಕು ದಿನಗಳು) ಪ್ರತಿದಿನ ೧೫ ಮಿ.ಗ್ರಾಂ. ಪ್ರೈಮಾಕ್ವಿನ್ ಔಷಧಿಯನ್ನು ನುಂಗಿಸಲಾಗುವುದು. ಇತರೇ ವಯಸ್ಸಿನವರಿಗೆ ಮೇಲಿನ ಕೋಷ್ಟಕದ ಸೂಚನೆಯಂತೆ ಔಷಧಿಗಳ ಪ್ರಮಾಣವನ್ನು ನಿರ್ಧರಿಸಬೇಕು. ಇತರೇ ಚಿಕಿತ್ಸಾ ಕ್ರಮಗಳಾದ

೧) ಆಸ್ಪತ್ರೆಯಲ್ಲಿ ದಾಖಲು ಮಾಡಿ ಚಿಕಿತ್ಸೆ ನೀಡುವುದು.

೨) ರೋಗಿಗೆ ಸ್ವಚ್ಛ ಗಾಳಿ ಬೆಳಕು ಇರುವಂತೆ ನೋಡಿಕೊಳ್ಳುವುದು.

೩) ದ್ರವಾಹಾರಗಳನ್ನೇ ಅಧಿಕವಾಗಿ ಸೇವಿಸಲು ಕೊಡುವುದು.

೪) ಜ್ವರ ಕಡಿಮೆ ಮಾಡುವಂತಹ ಇತರ ಉಪಾಯಗಳಾದ ಹಣೆಯ ಮೇಲೆ ಒದ್ದೆ ಬಟ್ಟೆ ಇಡುವುದು.

೫) ಸೊಳ್ಳೆಯಿಂದ ಕಚ್ಚಿಸಿಕೊಳ್ಳುವುದರಿಂದ ತಪ್ಪಿಸಲು ಸೊಳ್ಳೆ ಪರದೆಯನ್ನು ಕಟ್ಟಿ ಅದರೊಳಗೆ ರೋಗಿಯನ್ನು ಮಲಗಿಸುವುದು.

ಇವೆಲ್ಲವುಗಳನ್ನು ತಪ್ಪದೇ ಪಾಲಿಸಬೇಕು.

ಮಲೇರಿಯಾ ಬಾರದಂತೆ ಮುನ್ನೆಚ್ಚರಿಕೆ ಕ್ರಮಗಳು

- ಯಾವುದೇ ನಿರ್ದಿಷ್ಟ ಪ್ರದೇಶದಲ್ಲಿ ಪ್ರಕರಣವೇನಾದರೂ ಕಂಡುಬಂದರೆ ತಕ್ಷಣ ಆರೋಗ್ಯ ಇಲಾಖೆಗೆ ತಿಳಿಸಬೇಕು.

- ರಕ್ತಲೇಪನ ತೆಗೆದು ಪೂರ್ವಭಾವಿ ಚಿಕಿತ್ಸೆ ಮತ್ತು ಪ್ರಕರಣ ನಿಶ್ಚಯವಾದರೆ ಸಂಪೂರ್ಣ ಚಿಕಿತ್ಸೆಗೆ ರೋಗಿ ಒಳಪಡಬೇಕು.

- ಪ್ರಕರಣ ಕಂಡುಬಂದ ಪ್ರದೇಶದ ಜನರಿಗೆ ೧ ವರಸೆ ಮುನ್ನೆಚ್ಚರಿಕೆ ಕ್ರಮವಾಗಿ ಕ್ಲೋರೋಕ್ವಿನ್ ನೀಡಬೇಕು. ದೂರದ ಊರಿಗೆ ಪ್ರಯಾಣ ಬೆಳೆಸುವವರಿಗೆ ಅತ್ಯಾವಶ್ಯಕ ಕ್ರಮ.

ಜೊತೆಗೆ

ಮಲೇರಿಯಾ ರೋಗವನ್ನು ಹರಡುವ ಸೊಳ್ಳೆಗಳ ಮೇಲೆ ಯುದ್ಧ ಸಾರಬೇಕು. ಮನೆಯ ಒಳಭಾಗಕ್ಕೆ ಡಿಡಿಟಿ ಸಿಂಪರಣೆ, ವಾತಾವರಣದಲ್ಲಿ ಹೊಗೆ (ಫಾಗಿಂಗ್) ಬಿಡುವುದು. ಇವುಗಳಿಂದ ಪ್ರೌಢ ಸೊಳ್ಳೆಗಳನ್ನು, ನೀರಿನ ಆಸರೆಗಳನ್ನು ಶುಚಿಯಾಗಿಡುವುದು; ಮೀನು, ಕಪ್ಪೆಗಳನ್ನು ಸಾಕುವುದು, ಹಳ್ಳಕೊಳ್ಳಗಳನ್ನು ಮುಚ್ಚುವುದು ಇವೆಲ್ಲವುಗಳನ್ನು ಕಾಲಕಾಲಕ್ಕೆ ಮಾಡುತ್ತಿರಬೇಕು. ಸೊಳ್ಳೆಗಳಿಂದ ಕಚ್ಚಿಸಿಕೊಳ್ಳದಂತೆ ವೈಯಕ್ತಿಕ ರಕ್ಷಣೆ ಮಾಡಿಕೊಳ್ಳಬೇಕು.

ಚಿಕೂನ್ ಗುನ್ಯಾ

ಕಳೆದ ವರ್ಷ ರಾಜ್ಯದ ಜನತೆಯಲ್ಲಿ ಆತಂಕ ಮತ್ತು ಗಾಬರಿಯನ್ನುಂಟುಮಾಡಿ ಅನೇಕ ಮೂಢನಂಬಿಕೆಗಳಿಗೆ ಮತ್ತು ಮೋಸಕ್ಕೆ ಬಲಿಯಾಗುವಂತಹ ಪರಿಸ್ಥಿತಿಯನ್ನುಂಟುಮಾಡಿರುವ ರೋಗವೇ "ಚಿಕೂನ್ ಗುನ್ಯಾ" ವಿಚಿತ್ರವಾದ ಹೆಸರಿನಿಂದ ಉಚ್ಛಾರಣೆಯಲ್ಲಿಯೂ ತೊಡಕನ್ನು ಮೂಡಿಸಿದ, ರಾಜ್ಯದ ವಿಧಾನ ಸಭಾ ಕಲಾಪಗಳಲ್ಲಿಯೂ ಕೋಲಾಹಲವನ್ನೆಬ್ಬಿಸಿ ಮಾನ್ಯ ಆರೋಗ್ಯ ಸಚಿವರೇ ಉತ್ತರಿಸಲು ಇರಿಸುಮುರಿಸು ಮಾಡಿದಂತಹ ಕೀರ್ತಿ (ಅಪಕೀರ್ತಿ) 'ಚಿಕೂನ್ ಗುನ್ಯಾ'ದ್ದಾಗಿದೆ.

೧೯೫೨ -೫೩ ರಲ್ಲಿ ಆಫ್ರಿಕಾದ ತಾಂಜೇನಿಯಾ ಪ್ರದೇಶದಲ್ಲಿ ವಾಸಿಸುವ ಜನರಿಗೆ ಒಮ್ಮೊಂದೊಮ್ಮೆಗೇ ಕಾಣಿಸಿಕೊಂಡ ಜ್ವರ ಏರುತ್ತಾ ಹೋದಂತೆ ಜೊತೆಯಲ್ಲಿ ಕೇವಲ ಎರಡುಮೂರು ದಿನಗಳಲ್ಲೇ ದೇಹದ ಕೀಲುಗಳಲ್ಲಿ ಅಸಾಧ್ಯವಾದ ನೋವು, ಊತ, ಸಂಧಿಗಳು ಚಲಿಸದಂತಾಗುವಿಕೆ, ಮಾಂಸಖಂಡಗಳಲ್ಲಿ ನೋವು ಓಡಾಡಲು ಸಾಧ್ಯವಿಲ್ಲದಂತಾಗುವುದು ಮೊದಲಾದ ಲಕ್ಷಣಗಳಿಂದ ಕಾಣಿಸಿಕೊಂಡವು. ಲಕ್ಷಣಗಳು ಅದರಲ್ಲಿಯೂ ವಿಶೇಷವಾಗಿ ಸಂದು, ಕೀಲುಗಳಲ್ಲಿನ ನೋವು ಮತ್ತು ಊತ ರೋಗಿಯನ್ನು ಶೌಚಾಲಯಕ್ಕೂ ಹೋಗದಂತೆ ಮಾಡಿದ್ದವು. ಹೀಗೆ ಅತೀವ ತೀವ್ರವಾದ ವೇದನೆಯಿಂದ ಕೂಡಿದ ಕೀಲುನೋವು ಸಹಿತವಾಗಿರುವಂತಹ ಜ್ವರಕ್ಕೆ ಅವರಾಡುವ ಭಾಷೆಯಲ್ಲಿ ಅವರಿಟ್ಟ ಹೆಸರು "ಚಿಕೂನ್ ಗುನ್ಯಾ" "ತಕ್ಷಣ ಆಸ್ಪತ್ರೆಗೆ

ಚಿಕಿತ್ಸೆಗೆ ಬರಬೇಕೆಂಬ ಹೆದರಿಕೆಯನ್ನುಂಟುಮಾಡಿ ಅಕ್ಷರಶಃ ಮತ್ತೊಬ್ಬರು ರೋಗಿಯನ್ನು ಹೊತ್ತುಕೊಂಡು ಹೋಗುವಂತೆ ಮಾಡುವುದು" ಎಂಬುದು ಚಿಕೂನ್‌ಗುನ್ಯಾ ಪದದ ಮತ್ತೊಂದು ಅರ್ಥ.

ಭಾರತದಲ್ಲಿ ಮೊದಲ ಬಾರಿ ೧೯೬೪ ರಲ್ಲಿ ಕೋಲ್ಕತ್ತಾ ಮತ್ತು ಮದ್ರಾಸ್ ನಗರಗಳಲ್ಲಿ ಈ ರೀತಿಯ ಜ್ವರ ಕಾಣಿಸಿತ್ತು. ಅಲ್ಲಿಂದ ಇಲ್ಲಿಯವರೆಗೆ (೨೦೦೬) ರೋಗದ ಪ್ರಕರಣಗಳು ದಾಖಲಾಗಿರಲಿಲ್ಲ. ಈ ಕಾರಣದಿಂದಾಗಿಯೇ ನಮ್ಮ ಪೀಳಿಗೆಯ ಜನರಿಗೆ "ಚಿಕೂನ್ ಗುನ್ಯಾ" ಬಗ್ಗೆ ಕಲ್ಪನೆಯಾಗಲೀ ವೈದ್ಯ ಪಠ್ಯಗ್ರಂಥಗಳಲ್ಲಿ ಹೆಚ್ಚಿನ ಮಾಹಿತಿಗಳಾಗಲೀ ಇರಲಿಲ್ಲ. ಇಂತಹ ಸನ್ನಿವೇಶದಲ್ಲಿ ನಮ್ಮ ರಾಜ್ಯದಲ್ಲಿ "ಚಿಕೂನ್ ಗುನ್ಯಾ"ವು ಪಿಡುಗು ರೂಪದಲ್ಲಿ ಕಾಣಿಸಿಕೊಂಡು ವೈದ್ಯರಿಗೆ, ಇಲಾಖೆಗೆ ಮತ್ತು ಸರ್ಕಾರಕ್ಕೆ ತನ್ನ ಸಾಹಸವನ್ನು ಪ್ರದರ್ಶಿಸಿದೆ. ಆತಂಕಗೊಳಿಸಿದೆ. ತನ್ನನ್ನು ಗೆಲ್ಲಲು ಸವಾಲನ್ನೆಸೆದಿದೆ.

ಚಿಕೂನ್‌ಗುನ್ಯಾವು ಒಂದು ಬಗೆಯ ವೈರಾಣುವಿನಿಂದ ಉಂಟಾಗುವ ಸೋಂಕಿನ ವ್ಯಾಧಿಯಾಗಿದೆ. ಆರ್ಬೋವೈರಸ್ಸು ಎಂಬ ಹೆಸರಿನ ವೈರಾಣು ಮನುಷ್ಯನ ದೇಹವನ್ನು ಪ್ರವೇಶಿಸಲು ಸೊಳ್ಳೆಯನ್ನು ಆಶ್ರಯಿಸುತ್ತದೆ. ಅನೇಕ ವೈರಾಣುಗಳನ್ನು ತನ್ನೊಳಗೆ ತುಂಬಿಕೊಂಡು ಸೊಳ್ಳೆಯು ಆರೋಗ್ಯವಂತನನ್ನು ಕಚ್ಚಿದಾಗ ವೈರಾಣುಗಳನ್ನು ತೂರಿಸುತ್ತದೆ. ದೇಹದಲ್ಲಿ ವೈರಾಣುಗಳ ಚಟುವಟಿಕೆಗಳಿಂದ ರೋಗದ ಲಕ್ಷಣಗಳು ವ್ಯಕ್ತವಾಗುತ್ತವೆ.

ವೈಜ್ಞಾನಿಕವಾದ ಈ ಸತ್ಯಕ್ಕೆ ಸೆಡ್ಡುಹೊಡೆದಂತೆ ಜನಸಾಮಾನ್ಯರಲ್ಲಿ ಈ ರೋಗದ ಹೆಸರಿನಲ್ಲಿರುವ ಹೊಸತನ, ಉಚ್ಚಾರಣೆಯಲ್ಲಿನ ತೊಡಕು ಜನಕ್ಕೆ ಒಂದು ರೀತಿಯ ವಿನೂತನ ಅನುಭವವನ್ನೇ ನೀಡಿದೆ.

ಕಳೆದ ವರ್ಷದ ಆದಿಯಲ್ಲಿ ಕೆಲವೊಂದು ರಾಷ್ಟ್ರಗಳಲ್ಲಿ ಕೋಳಿಗಳಿಗೆ ವಿಚಿತ್ರವಾದ ಜ್ವರವೊಂದು ಬಾಧಿಸಿತು. ವೈರಾಣು ಜನಿತ ಜ್ವರವಾಗಿತ್ತು. ಕುಕ್ಕುಟ ಸಾಮ್ರಾಜ್ಯಕ್ಕೆ ಧಾಳಿ ಮಾಡಿದ ಈ ವೈರಾಣು ಜ್ವರವು ಪಿಡುಗು ರೂಪ ತಾಳಿ ಅನೇಕ ಜೀವಿಗಳ ಪ್ರಾಣ ತೆಗೆಯಿತು. ವೈರಾಣು ಪೀಡಿತ ಕೆಲವೊಂದು ಕೋಳಿಗಳ ಮಾಂಸವನ್ನು ಭಕ್ಷಿಸುವ ಜನರಲ್ಲೂ ನೆಗಡಿ ರೂಪದ ಸೌಮ್ಯಜ್ವರ ಕಾಣಿಸಿಕೊಂಡು ಅದೂ ಕೂಡಾ ಪಿಡುಗು ರೂಪದಲ್ಲಿ ಬಹುಸಂಖ್ಯಾತ ಜನರಿಗೆ ಹರಡಿತು. ಆಯಾ ರಾಷ್ಟ್ರಗಳ ಸರ್ಕಾರ ಮತ್ತು ಆರೋಗ್ಯ ಇಲಾಖೆಗಳು ಎಚ್ಚರಿಕೆ ನೀಡಿದವು. ಆಗ ನಡೆಯಿತು ಕುಕ್ಕುಟಗಳ ಮಾರಣಹೋಮ. ಅಸಂಖ್ಯಾತ ಕೋಳಿಗಳನ್ನು ಸಾಮೂಹಿಕವಾಗಿ ಹೂಳಲಾಯಿತು. ಮಾಧ್ಯಮಗಳಲ್ಲಿ ರಂಗುರಂಗಿನ ಚಿತ್ರಗಳೊಂದಿಗೆ ಸುದ್ದಿ ಪ್ರಸಾರಗೊಂಡವು. ಜನರು ಆತಂಕಗೊಂಡರು. ಇದಿನ್ನು ಹಸಿರಾಗಿರುವಾಗಲೇ ನಮ್ಮ ರಾಜ್ಯದಲ್ಲಿ ಚಿಕೂನ್‌ಗುನ್ಯಾ ರೋಗ ಕಾಣಿಸಿಕೊಂಡಿತು. ಉತ್ತರ ಭಾಗದ ಕರ್ನಾಟಕದಲ್ಲಿ ಮೊದಲಿಗೆ ಕಾಣಿಸಿಕೊಂಡಿತು. ಮೊದಲೇ ತಿಳಿಸಿದಂತೆ ರೋಗದ ಸ್ಪಷ್ಟವಾದ ಚಿತ್ರಣ ವೈದ್ಯರನ್ನು ಸೇರಿಸಿದಂತೆ ಅನೇಕರಿಗೆ ಗೊತ್ತಿರಲಿಲ್ಲ. ಚಿಕೂನ್‌ಗುನ್ಯಾ ಇರಬಹುದೆಂದು ವೈದ್ಯ ಇಲಾಖೆ ಊಹಿಸಿದ್ದೇ ತಡ, ಜನರು ಕೋಳಿ (ಚಿಕನ್) ಯನ್ನು ದೂಷಿಸಿ ಇದನ್ನು ತಿನ್ನುವುದರಿಂದಲೇ

ಬರುವುದೆಂದು ಉಹಾಪೋಹಗಳನ್ನು ಗಾಳಿಯಲ್ಲಿ ತೇಲಿಬಿಟ್ಟರು. ಊಹಾಪೋಹ ಸುದ್ದಿಯೇ ಕಾಳ್ಗಿಚ್ಚಿನಂತೆ ಬಹುಬೇಗ ಇತರ ಪ್ರದೇಶಗಳಲ್ಲೆಲ್ಲಾ ವ್ಯಾಪಿಸಿ ಚಿಕನ್ (ಕೋಳಿ ಮತ್ತು ಕೋಳಿ ಮರಿ)ಗಳಿಗೆ ಅಪಖ್ಯಾತಿಯನ್ನು ತಂದವು. ಕೋಳಿ ಮತ್ತು ಕೋಳಿ ಉತ್ಪನ್ನಗಳ ವ್ಯಾಪಾರ ವಹಿವಾಟು ಪಾತಾಳಕ್ಕಿಳಿಯಿತು.

ಪರಿಸ್ಥಿತಿಯ ಲಾಭ ಪಡೆಯಲು ದುಷ್ಟಬುದ್ಧಿಯ ಜನರು ಅಮಾಯಕರಿಂದ ವಿವಿಧ ರೀತಿಯಲ್ಲಿ ಹಣ ಕೀಳುವ ದಂಧೆಗಿಳಿದರು. ವಾಮ ಶಕ್ತಿಯನ್ನು ಆರಾಧಿಸುವವರು, ಡೋಂಗಿ ವೈದ್ಯರು, ಮಾಟಮಂತ್ರವಾದಿಗಳು ಇಲ್ಲಸಲ್ಲದ ಭೀತಿಯನ್ನು ಹುಟ್ಟಿಸಿ ವಾತಾವರಣವನ್ನು ಕಲುಷಿತಗೊಳಿಸಿದರು. ವಿಷಯ ಸಚಿವರ ಗಮನಕ್ಕೆ ಬಂದು ಸ್ವತಃ ಆರೋಗ್ಯ ಸಚಿವರೇ ಅಧಿಕ ಪ್ರಕರಣಗಳು ಕಂಡುಬಂದಿರುವ ಹಲವಾರು ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಡೊಂಗೀ ವೈದ್ಯರುಗಳನ್ನು ಶಿಕ್ಷಿಸಿ ಜಿಲ್ಲಾಡಳಿತಕ್ಕೆ ಸೂಕ್ತ ನಿರ್ದೇಶನಗಳನ್ನು ನೀಡಿ ಜ್ವರದ ತೀವ್ರತೆಯನ್ನು ಕಡಿಮೆ ಮಾಡುವಂತೆ ಕ್ರಮ ಕೈಗೊಂಡರು.

ರೋಗದ ಸಂಪೂರ್ಣ ಮಾಹಿತಿಯನ್ನು ಜನರಿಗೆ ಒದಗಿಸಿ, ಅರಿವು ಮೂಡಿಸುವಂತೆ ಮಾಡಿದ್ದರ ಫಲವಾಗಿ ರೋಗದ ಬಗ್ಗೆ ಭೀತಿ, ಶಂಕೆಗಳು ಈಗ ಕಡಿಮೆಯಾಗಿದೆ. ರೋಗವು ಈಗ ಹತೋಟಿಯಲ್ಲಿದೆ. ಕೋಳಿಜ್ವರಕ್ಕೂ ಚಿಕೂನ್‌ಗುನ್ಯಾಕ್ಕೂ ಸಂಬಂಧವೇ ಇಲ್ಲಾ. ಓದುವಾಗ ಚಿಕನ್ ಎಂದು ಓದಿ ತಪ್ಪಾಗಿ ಅರ್ಥೈಸದೇ ಚಿಕೂನ್ ಗುನ್ಯಾ (= ಚಿಕ್ಯೂನ್ ಗುನ್ಯಾ) ಎಂದು ಓದಿ ಅರ್ಥೈಸಬೇಕು.

ರೋಗ ಹರಡುವಿಕೆ : ಈ ರೋಗವು ಒಬ್ಬರಿಂದ ಮತ್ತೊಬ್ಬರಿಗೆ ಹರಡಬೇಕಾದರೆ ಈಡಿಸ್ ಎಂಬ ಸೊಳ್ಳೆಯು ವಾಹಕವಾಗಿ ಕೆಲಸ ಮಾಡುತ್ತದೆ. ರೋಗದಿಂದ ಬಳಲುತ್ತಿರುವ ವ್ಯಕ್ತಿಯನ್ನು ಸೊಳ್ಳೆಯು ಕಚ್ಚಿ ರಕ್ತವನ್ನು ಹೀರುತ್ತದೆ. ಆರ್ಬೋವೈರಾಣುಗಳನ್ನು ರಕ್ತದ ಜೊತೆ ತನ್ನಲ್ಲಿಟ್ಟುಕೊಂಡು ಮತ್ತೊಬ್ಬ ಆರೋಗ್ಯವಂತ ಮನುಷ್ಯನನ್ನು ಕಚ್ಚುತ್ತದೆ. ರಕ್ತವನ್ನು ಹೀರುವ ಮೊದಲು ಮನುಷ್ಯನ ದೇಹದೊಳಗೆ ಆರ್ಬೋವೈರಸ್ಸುಗಳನ್ನು ತೂರಿಸುತ್ತದೆ.

ರೋಗ ಲಕ್ಷಣಗಳು : ವೈರಾಣುಗಳು ಶರೀರವನ್ನು ಪ್ರವೇಶಿಸಿದ ಕೆಲದಿನಗಳಲ್ಲಿ ಸುಮಾರು ೨ ರಿಂದ ೩ ದಿನಗಳಲ್ಲಿ ರೋಗದ ಪ್ರಕ್ರಿಯೆ ಪ್ರಾರಂಭವಾಗಿ ಲಕ್ಷಣಗಳು ಗೋಚರಿಸುವುವು. ಇದ್ದಕ್ಕಿದ್ದಂತೆ ಕಾಣಿಸುವ ತೀವ್ರವಾದ ಜ್ವರ ಮತ್ತು ಸಂದು ಕೀಲುಗಳಲ್ಲಿ ಅತೀವವಾದ ನೋವು ಮತ್ತು ಊತಗಳು ಪ್ರಧಾನ ಲಕ್ಷಣಗಳಾಗಿವೆ. ಬೆನ್ನುಹುರಿಯಲ್ಲಿ ನೋವು, ಮಂಡಿ, ಮೊಣಕೈ ಸಂಧಿಗಳಲ್ಲಿ ನೋವು ಅಸಾಧ್ಯವಾಗಿರುತ್ತವೆ. ಹಾಗಾಗಿ ರೋಗಿಯು ಚಲಿಸಲು ಸಾಧ್ಯವಾಗದೇ ನರಳುತ್ತಾನೆ. ಜ್ವರದ ತಾಪದಿಂದ ತುಟಿ, ಅಂಗಳು, ಬಾಯಿ ಒಣಗುವುದು, ಆಹಾರದಲ್ಲಿ ಅನಾಸಕ್ತಿಗಳುಂಟಾಗುತ್ತವೆ. ಈ ರೀತಿಯ ವೇದನೆಯಿಂದ ನಡೆದಾಡಲು ಸಾಧ್ಯವಾಗದೇ ಚಿಕಿತ್ಸೆ ಪಡೆಯಲು ರೋಗಿಯನ್ನು ಇತರರು ಹೊತ್ತುಕೊಂಡು ವೈದ್ಯರಲ್ಲಿಗೆ ಕರೆತರುವ ಪರಿಸ್ಥಿತಿಯನ್ನುಂಟುಮಾಡುವುದು.

ರೋಗ ನಿರ್ಣಯ : ರೋಗಿಯ ರಕ್ತವನ್ನು ಪರೀಕ್ಷಿಸುವುದರಿಂದ ಹೆಚ್ಚಿನ ಮಾಹಿತಿಗಳು ಯಾವುವೂ ದೊರೆಯುವುದಿಲ್ಲ. ಆದಕಾರಣ

ಲಕ್ಷಣಗಳು ಉದ್ಭವಿಸಿದ ಕ್ರಮ ಮತ್ತು ಲಕ್ಷಣಗಳ ತೀವ್ರತೆಗಳನ್ನು ರೋಗಿ ಪರೀಕ್ಷೆಯಿಂದಲೇ ನಿರ್ಣಯಿಸಬೇಕು.

ಚಿಕಿತ್ಸೆ : ಚಿಕೂನ್‌ಗುನ್ಯಾವು ವೈರಾಣುವಿನಿಂದುಂಟಾಗುವ ಜ್ವರವಾಗಿರುವುದರಿಂದ ಒಂದು ವಾರದಲ್ಲಿ ತಾನಾಗಿಯೇ ರೋಗದ ಲಕ್ಷಣಗಳು ಇಳಿಮುಖವಾಗುತ್ತವೆ. ಆದಾಗ್ಯೂ ಜ್ವರ ಮತ್ತು ನೋವಿನ ತೀವ್ರತೆಗಳನ್ನು ಕಡಿಮೆ ಮಾಡಲು ಜ್ವರನಾಶಕ ಮತ್ತು ನೋವು ನಿವಾರಕ ಔಷಧಿಗಳನ್ನು ರೋಗಿಗೆ ನೀಡಬೇಕು. ದ್ರವಾಂಶದ ಕೊರತೆಯುಂಟಾಗದಂತೆ ಕೆಲವು ಪ್ರಕರಣಗಳಲ್ಲಿ ಗ್ಲೂಕೋಸ್ ದ್ರಾವಣಗಳನ್ನು ರಕ್ತನಾಳಗಳ ಮುಖಾಂತರ ನೀಡಲಾಗುತ್ತದೆ. ಜ್ವರದ ಅವಸ್ಥೆಯಲ್ಲಿ ಗಂಜಿ, ಹಣ್ಣಿನ ರಸ ಮೊದಲಾದ ದ್ರವಾಹಾರ ಮತ್ತು ಧಾನ್ಯಗಳಿಂದ ತಯಾರಿಸಿದ ಮೆತ್ತಗಿನ ಆಹಾರವನ್ನು ಸೇವಿಸಬೇಕು.

ಜ್ವರ ಕಡಿಮೆಯಾಗಿ ರೋಗಿಯು ಓಡಾಡಲು ಪ್ರಾರಂಭಿಸಿದರೂ ಕೆಲವು ವಾರಗಳವರೆಗೆ ಸಂಧಿಕೀಲುಗಳಲ್ಲಿ ನೋವು ಮತ್ತೆ ಮತ್ತೆ ಕಾಣಿಸುತ್ತಿರುತ್ತದೆ. ಕ್ರಮೇಣ ಕಡಿಮೆಯಾಗುತ್ತದೆ.

ಪ್ರತಿಬಂಧಕೋಪಾಯಗಳು : ಸೊಳ್ಳೆಗಳ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಬೇಕು. ವೈಯಕ್ತಿಕವಾಗಿ ಸೊಳ್ಳೆಗಳಿಂದ ಕಚ್ಚಿಸಿಕೊಳ್ಳುವುದನ್ನು ತಪ್ಪಿಸಬೇಕು.

ಸೊಳ್ಳೆ

ಡೆಂಗ್ಯೂ ಜ್ವರ

ಬಡವ, ಬಲ್ಲಿದ, ಜಾತಿ, ಮತ, ಮಕ್ಕಳು, ದೊಡ್ಡವರು, ಪುರುಷರು ಮತ್ತು ಸ್ತ್ರೀಯರು ಎಂಬ ಭೇದವಿಲ್ಲದೇ ಎಲ್ಲರನ್ನು ಪೀಡಿಸುವ ಜ್ವರವೇ ಡೆಂಗ್ಯೂಜ್ವರ (ಡೆಂಗೆ). ಮೈಕೈನೋವು ಮತ್ತು ಜ್ವರಗಳಿಂದ ಕೂಡಿದ ಸಾಮಾನ್ಯ ಡೆಂಗ್ಯೂ ಮತ್ತು ಮೈಕೈ ನೋವು, ಜ್ವರ, ಲಿವರ್ ಊತ ಮತ್ತು ರಕ್ತಸ್ರಾವಯುಕ್ತವಾಗಿರುವ ಡೆಂಗ್ಯೂ ಎಂಬ ಎರಡು ಪ್ರಭೇದಗಳಿವೆ.

ಪ್ರತೀವರ್ಷ ಮಳೆಗಾಲದಲ್ಲಿ ಸೊಳ್ಳೆಗಳ ಸಂತಾನೋತ್ಪತ್ತಿಯ ಕಾಲದಲ್ಲಿ ಹೆಚ್ಚಾಗಿ ರೋಗವನ್ನು ಹರಡುತ್ತವೆ. ಅಲ್ಲೊಂದು ಇಲ್ಲೊಂದು ಪ್ರಕರಣಗಳು ಕಾಣಿಸಿಕೊಳ್ಳುವುದರ ಜೊತೆಗೆ ಒಮ್ಮೆಲೇ ಸಾವಿರಾರು ಜನರಿಗೆ ಸೋಂಕು ಉಂಟಾಗಿ ಪಿಡುಗು ರೂಪವನ್ನು ಕೂಡಾ ತಾಳುತ್ತದೆ. ನಮ್ಮ ದೇಶಕ್ಕೆ ಈ ರೋಗ ಹೊಸದೇನಲ್ಲ. ೧೯೫೩ ರಲ್ಲಿ ಮೊದಲಬಾರಿ ಕಾಣಿಸಿಕೊಂಡಿದ್ದು ತಂದನಂತರದ ದಶಕಗಳಲ್ಲಿ ಮೇಲಿಂದ ಮೇಲೆ ಎಲ್ಲ ರಾಜ್ಯಗಳಲ್ಲಿ ಮರುಕಳಿಸುತ್ತಿದೆ. ಇದರಿಂದ ರೋಗದ ಬಗ್ಗೆ ಹೆಚ್ಚಿನ ಅಧ್ಯಯನ ಮಾಡಿ ಪ್ರಭೇದಗಳನ್ನು ಮಾಡುವುದಕ್ಕೆ ಸೋಂಕು ಹರಡದಂತೆ ಮುನ್ನೆಚ್ಚರಿಕೆ ಕ್ರಮಗಳ ಅಳವಡಿಕೆಯ ಬಗ್ಗೆ ಕ್ರಮ ಕೈಗೊಳ್ಳಲು ಸಹ ಸಾಧ್ಯವಾಗಿದೆ. ಪ್ರತೀವರ್ಷ ಸುಮಾರು ೫೦ ಮಿಲಿಯನ್ ಪ್ರಕರಣಗಳು ಪ್ರಪಂಚದಾದ್ಯಂತ ದಾಖಲಾಗುತ್ತಿದ್ದು ಅವುಗಳಲ್ಲಿ ಸುಮಾರು ೪ ಲಕ್ಷ ಪ್ರಕರಣಗಳು ರಕ್ತಸ್ರಾವದಿಂದ ಕೂಡಿರುವ ಡೆಂಗ್ಯೂ ಜ್ವರವಾಗಿದೆ. ನಮ್ಮ ದೇಶದ ರಾಜಧಾನಿ ದೆಹಲಿಯಲ್ಲಿ ೧೯೯೬ ರಲ್ಲಿ೪೦೦

ಪ್ರಕರಣಗಳು, ೬೦ ಜನರು ಕರ್ನಾಟಕ, ತಮಿಳುನಾಡು ರಾಜ್ಯಗಳಲ್ಲಿ ರೋಗಕ್ಕೆ ಬಲಿಯಾದರು. ತೀರಾ ಇತ್ತೀಚೆಗೆ ಅಂದರೆ ಅಕ್ಟೋಬರ್ ೨೦೦೬ ತಿಂಗಳಲ್ಲಿ ೩೦೦ ಪ್ರಕರಣಗಳು ದೆಹಲಿಯಲ್ಲಿ ದಾಖಲಾಗಿದೆ. ಜ್ವರದ ಮತ್ತು ಇತರ ಲಕ್ಷಣಗಳ ತೀವ್ರತೆಯಿಂದ ಸಣ್ಣ ಮಕ್ಕಳು ಬೇಗನೇ ಅಸುನೀಗುತ್ತಾರೆ. ಹಾಗಾಗಿ ಇದೊಂದು ಮಾರಕ ರೋಗವಾಗಿ ಪರಿಣಮಿಸಿದೆ.

ಡೆಂಗ್ಯೂಜ್ವರಕ್ಕೆ ಕಾರಣ ಆರ್ಬೋವೈರಸ್ಸುಗಳೆಂಬ ಗುಂಪಿನ ಒಂದು ವೈರಾಣು. ಆರ್ಬೋವೈರಸ್ಸಿನ ನಾಲ್ಕು ಪ್ರಭೇದಗಳಿಂದ ರೋಗವುಂಟಾಗುವುದು. ಸೋಂಕಿಗೆ ಮನುಷ್ಯ ದೇಹವೇ ಆಕರ. ಪಟ್ಟೆ ಸೊಳ್ಳೆ ಅಥವಾ ಟೈಗರ್ ಸೊಳ್ಳೆ ಎಂದೆನಿಸಿರುವ 'ಈಡಿಸ್ ಸೊಳ್ಳೆ'ಯು ವೈರಾಣುಗಳನ್ನು ಹೊತ್ತು ತರುತ್ತದೆ. ತಿರುಗಾಟದಲ್ಲಿ ಮನುಷ್ಯನನ್ನು ಕಚ್ಚಿ ಕ್ರಿಮಿಯನ್ನು ದೇಹದೊಳಗೆ ತಳ್ಳುತ್ತದೆ.

<u>ಲಕ್ಷಣಗಳು</u>

೧. ಸಾಮಾನ್ಯ ಡೆಂಗ್ಯೂ : ದೇಹವನ್ನು ಸೇರಿದ ವೈರಾಣುಗಳು ಚಟುವಟಿಕೆಗಳಿಂದ ೨ ರಿಂದ ೧೫ ದಿನಗಳಲ್ಲಿ ತಮ್ಮ ಪ್ರಭಾವವನ್ನು ಬೀರುತ್ತವೆ. ಒಮ್ಮೆಗೇ ಉಂಟಾಗುವ ಚಳಿಯಿಂದ ಕೂಡಿದ ಜ್ವರ, ತೀವ್ರವಾದ ತಲೆನೋವು, ಮಾಂಸಖಂಡಗಳಲ್ಲಿ ಮತ್ತು ಸಂಧಿಗಳಲ್ಲಿ ನೋವು ವ್ಯಕ್ತವಾಗುತ್ತವೆ. ರೋಗಿಯು ಒಡಾಡದಂತಾಗುತ್ತದೆ. ನಂತರದ ೨೪ ಗಂಟೆಗಳಲ್ಲಿ ಕಣ್ಣುಗುಡ್ಡೆಗಳಲ್ಲಿ ನೋವು, ಗುಡ್ಡೆಗಳು ಚಲಿಸಿದಾಗ ಅಧಿಕಗೊಳ್ಳುತ್ತದೆ. ಬೆಳಕನ್ನು ನೋಡಲು ಸಾಧ್ಯವಾಗದಿರುವಿಕೆ, ಪ್ರಮುಖ ಲಕ್ಷಣಗಳಾಗುತ್ತವೆ. ಮುಖವು

ಕೆಂಪೇರುತ್ತದೆ, ದುರ್ಬಲತೆ, ಹಸಿವಾಗದಿರುವಿಕೆ, ಊಟದಲ್ಲಿ ರುಚಿ ಇಲ್ಲದಿರುವಿಕೆ, ಗಂಟಲು ಸೋವು ಮತ್ತು ಬೇಸರಗಳು ಸಂಗಾತಿಗಳಾಗುತ್ತವೆ. ಒಂದು ಅಥವಾ ಎರಡು ದಿನಗಳಲ್ಲಿ ಕೆಲವರಿಗೆ ಜ್ವರವು ತಾನೇ ಕಡಿಮೆಯಾಗಿ ಮತ್ತೆ ಎರಡು ದಿನಗಳಲ್ಲಿ ಪುನಃ ಜ್ವರ ಬರುವುದು. ಈ ಅವಧಿಯಲ್ಲಿ ಕುತ್ತಿಗೆ, ಎದೆ ಮತ್ತು ಮುಖ ಪ್ರದೇಶಗಳಲ್ಲಿ ಸೂಜಿಯಾಕಾರದ (ಸೂಜಿ ತಲೆಯಷ್ಟು ದಪ್ಪ) ಹಲವಾರು ದದ್ದುಗಳು ಚರ್ಮದ ಮೇಲೆ ಏಳುವುದು. ಕೆಲಗಂಟೆಗಳ ಬಳಿಕ, ಕೆಲವರಿಗೆ ಎರಡು ಅಥವಾ ಮೂರು ದಿನಗಳಲ್ಲಿ ದದ್ದುಗಳು ಸ್ವಯಂ ಮಾಯವಾಗುವುವು. ಮೈಕೈನಲ್ಲಿರುವ ಮಾಂಸಖಂಡಗಳಲ್ಲಿ ಬಿರಿತ ಮತ್ತು ನೋವುಂಟಾಗುವುವು. ನೋವಿನ ತೀವ್ರತೆ ಎಷ್ಟರ ಮಟ್ಟಿಗೆ ಎಂದರೆ ರೋಗಿಯ ಮೂಳೆಗಳೂ ಮುರಿದು ಹೋಗಿದೆಯೋ ಏನೋ ಎಂಬಂತೆ ಭಾಸವಾಗುವಷ್ಟಿರುತ್ತದೆ. ಈ ರೀತಿ ಭಾಸವಾಗುವುದರಿಂದ ಡೆಂಗ್ಯೂ ಜ್ವರಕ್ಕೆ ಬ್ರೇಕ್ ಬೋನ್ ಫೀವರ್ (ಮೂಳೆ ಮುರಿತದ ಜ್ವರ) ಎಂತಲೂ ಕರೆಯುವಂತಾಗಿದೆ.

೨. **ರಕ್ತಸ್ರಾವಯುಕ್ತ ಡೆಂಗ್ಯೂಜ್ವರ :** ೨ನೆಯ ಮತ್ತು ೩ನೆಯ ಪ್ರಭೇದಗಳ ವೈರಾಣುಗಳಿಂದ ಉಂಟಾಗುವ ರೋಗ ಪ್ರಕ್ರಿಯೆಯಲ್ಲಿ ದೇಹದಲ್ಲಿರುವ ರಕ್ತವು ಹೆಚ್ಚು ಪ್ರಕೋಪಗೊಳ್ಳುತ್ತದೆ. ಕ್ರಿಮಿ ದೇಹ ಸೇರಿದ ೪ ರಿಂದ ೬ ದಿನಗಳಲ್ಲಿ ಲಕ್ಷಣಗಳು ಉದ್ಭವವಾಗುತ್ತವೆ. ತೀವ್ರಜ್ವರ, ಮುಖ ಕೆಂಪೇರುವಿಕೆ, ತಲೆನೋವು, ಹೊಟ್ಟೆನೋವು ಈ ಎಲ್ಲಾ ಲಕ್ಷಣಗಳು ವ್ಯಕ್ತವಾಗುತ್ತವೆ. ಎಲ್ಲವೂ ಒಂದನೇ ಪ್ರಭೇದವಾದ ಸಾಮಾನ್ಯ ಡೆಂಗ್ಯೂವಿನಂತೆಯೇ ಇರುತ್ತದೆ. ನಂತರ ರಕ್ತಕಣಗಳಲ್ಲಿ ವಿಶೇಷವಾಗಿ 'ಪ್ಲೇಟಲೆಟ್ಸ್' ಗಳಲ್ಲಿ

ವಿಕೃತಿಯನ್ನುಂಟುಮಾಡುತ್ತವೆ. ಇದರಿಂದ ರಕ್ತದ ಹೆಪ್ಪುಗಟ್ಟುವಿಕೆಯಲ್ಲಿ ವ್ಯತ್ಯಯಗೊಂಡು ರಕ್ತಸ್ರಾವವುಂಟಾಗುವುದು. ಚರ್ಮದ ಅಡಿಯಲ್ಲಿ, ಮೂಗು, ವಸಡು, ಬಾಯಿ ಅಥವಾ ಕಿವಿಗಳಿಂದ ರಕ್ತ ಸೋರುವುದು. ಇದು ಅಪಾಯಕಾರೀ ಲಕ್ಷಣವಾಗಿದೆ. ಶರೀರದಲ್ಲಿ ಗೋಚರಿಸುವ ಲಕ್ಷಣಗಳ ಪ್ರಾಬಲ್ಯದ ಮೇಲೆ ರಕ್ತಸ್ರಾವಯುಕ್ತ ಡೆಂಗ್ಯೂಜ್ವರವನ್ನು ಕೆಳಕಂಡಂತೆ ವಿಂಗಡಿಸಲಾಗಿದೆ.

ಪ್ರಭೇದ 1 (ಹಂತ 1) =	ಜ್ವರ, ಮೈಕೈ ನೋವು, ತಲೆನೋವು.
ಪ್ರಭೇದ 2 (ಹಂತ 2) =	ಜ್ವರ, ಮೈಕೈನೋವು, ತಲೆನೋವು ಜೊತೆಗೆ ವಸಡು, ಅನ್ನನಾಳ, ಬಾಯಿಂದ ರಕ್ತಸ್ರಾವ
ಪ್ರಭೇದ 3 (ಹಂತ 3) =	ಜ್ವರ, ಮೈಕೈನೋವು, ತಲೆನೋವು, ರಕ್ತಸ್ರಾವದ ಜೊತೆ ರಕ್ತಚಲನೆಯಲ್ಲಿ ವ್ಯತ್ಯಯ (ಶಾಕ್)
ಪ್ರಭೇದ 4 (ಹಂತ 4) =	ಜ್ವರ, ಮೈಕೈ ನೋವು, ತಲೆನೋವು, ರಕ್ತಸ್ರಾವ, ಷಾಕ್ ಜೊತೆಗೆ ಪ್ರಜ್ಞಾಶೂನ್ಯತೆ (ಕೋಮಾ)

ತೀವ್ರ ರಕ್ತಸ್ರಾವವಾದಾಗ ರಕ್ತದ ಪರಿಚಲನೆ ಕ್ರಮದಲ್ಲಿ ಹತೋಟಿ ತಪ್ಪಿ ಅಂಗಾಂಗಗಳಿಗೆ ವಿಶೇಷವಾಗಿ ಮೆದುಳಿಗೆ ಆಮ್ಲಜನಕ ಮತ್ತು ಆಹಾರಗಳ ಪೂರೈಕೆಯಾಗುವುದಿಲ್ಲ. ಕೈಕಾಲುಗಳಲ್ಲಿರುವ ಬೆರಳುಗಳ ತುದಿಯವರೆಗೆ ರಕ್ತ ಬರುವುದಿಲ್ಲ. ಬಂದಿರುವ ರಕ್ತದ ಪ್ರಮಾಣವು ಸಂಪೂರ್ಣವಾಗಿ ವಾಪಸ್ಸು ಹೃದಯಕ್ಕೆ ತಲುಪುವುದಿಲ್ಲ.

ಇವುಗಳಿಂದ ಶರೀರದ ಪ್ರಾಣಾಧಾರಣೆ ಕಷ್ಟಕರವಾಗುತ್ತದೆ. ಈ ಅವಸ್ಥೆಗೆ ಶಾಕ್ ಎಂದು ಸಂಜ್ಞೆ. ಈ ಅವಸ್ಥೆ ಮುಂದುವರೆದಿದ್ದೇ ಆದರೆ ರೋಗಿ ಪ್ರಜ್ಞಾಶೂನ್ಯನಾಗುತ್ತಾನೆ. ಆಗ ಕೋಮಾ ಎಂದು ಹೆಸರು.

ರೋಗ ನಿರ್ಣಯ : ರೋಗಿಯು ನೀಡುವ ಮಾಹಿತಿಗಳಿಂದ, ಸ್ಥಳಜನ್ಯವಾಗಿರುವ ಪ್ರಕರಣಗಳಿಂದ ಮತ್ತು ರೋಗಿಯನ್ನು ಹಾಸಿಗೆ ಬಳಿ ಪರೀಕ್ಷಿಸಿ ಲಕ್ಷಣಗಳನ್ನು ವಿವೇಚಿಸುವುದರಿಂದ ಡೆಂಗ್ಯೂಜ್ವರದ ಇರುವಿಕೆಯನ್ನು ಶಂಕಿಸಬಹುದು. ಶಂಕಿತ ವ್ಯಕ್ತಿಯ ರಕ್ತವನ್ನು ಪರೀಕ್ಷೆ ಮಾಡಿದಾಗ ಬಿಳಿಯ ಕಣಗಳಲ್ಲಿ ಇಳಿಮುಖವಾಗಿರುವುದು ರೋಗವನ್ನು ನಿರ್ಣಯಿಸಲು ಸಹಾಯ ಮಾಡುವುದು.

ಚಿಕಿತ್ಸೆ:ರೋಗಿಯನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಮಾಡಬೇಕು. ಡೆಂಗ್ಯೂ ಜ್ವರವು ವೈರಾಣುವಿನಿಂದ ಉಂಟಾಗಿರುವುದರಿಂದ ೭ ರಿಂದ ೧೦ ದಿನಗಳಲ್ಲಿ ತಾನೇ ಕಡಿಮೆಯಾಗುತ್ತದೆ. ಇರುವಷ್ಟು ದಿನಗಳಲ್ಲಿ ಲಕ್ಷಣಗಳ ತೀವ್ರತೆಯು ಅಡ್ಡಪರಿಣಾಮಗಳನ್ನುಂಟುಮಾಡದಿರಲು ಔಷಧಿಯನ್ನು ಸೇವಿಸಲು ಕೊಡಬೇಕು. ಜ್ವರ ಮತ್ತು ನೋವುಗಳನ್ನು ಕಡಿಮೆಮಾಡುವ ಔಷಧಗಳನ್ನು, ರಕ್ತಸ್ರಾವವಿದ್ದಾಗ ಸ್ಟೀರಾಯ್ಡ್ಸ ಗುಂಪಿನ ಔಷಧಿಗಳನ್ನು ಚಿಕಿತ್ಸೆಯಲ್ಲಿ ಬಳಸಬೇಕು. ರಕ್ತಸ್ರಾವ ಅಧಿಕವಾಗಿರುವಾಗ ರಕ್ತವನ್ನು (ಪ್ಲಾಸ್ಮಾ) ಪೂರೈಸಬೇಕು. ದೇಹದಲ್ಲಿರುವ ನೀರಿನ ಅಂಶವು ಕಡಿಮೆಯಾಗದಂತೆ ಮಾಡಲು ಗ್ಲೂಕೋಸ್ ದ್ರಾವಣವನ್ನು ರಕ್ತನಾಳಗಳಿಗೆ ಜೋಡಿಸಬೇಕು. ಭಯ ಭೀತಿ ದೂರಮಾಡುವ ಸಲುವಾಗಿ ರೋಗಿಗೆ ಧೈರ್ಯತುಂಬಬೇಕು.

ಆನೆಕಾಲು ರೋಗ

ಪ್ರಪಂಚದಾದ್ಯಂತ ಸುಮಾರು ೩೦೦ ಮಿಲಿಯನ್ ಜನರನ್ನು ಪೀಡಿಸುತ್ತಿರುವ ರೋಗವಾಗಿರುವ "ಎಲಿಫೆಂಟಿಯಾಸಿಸ್"ಗೆ ಕನ್ನಡದ ಹೆಸರು ಆನೆಕಾಲು ರೋಗ. ಫೈಲೇರಿಯಾಸಿಸ್ ಎಂದೂ ಕರೆಯಲ್ಪಡುವ ಈ ರೋಗವು ಉಷ್ಣವಲಯದಲ್ಲಿ ಹೆಚ್ಚಾಗಿ ವ್ಯಾಪಿಸಿದೆ. ನಮ್ಮ ರಾಜ್ಯದ ಕಡಲತೀರ ಪ್ರದೇಶಗಳಲ್ಲಿ ಇದರ ಉಪಟಳ ಅಧಿಕ. ಫೈಲೇರಿಯಾ ಎಂಬ ಪರಾವಲಂಬಿ ಸೂಕ್ಷ್ಮಾಣುಜೀವಿಯು ಶರೀರದ ಒಳಪ್ರವೇಶಿಸಿ ರೋಗವನ್ನುಂಟುಮಾಡುತ್ತದೆ. ಫೈಲೇರಿಯಾ ಕ್ರಿಮಿಯು ಉಚೇಕಿಯಾ ಬಾಂಕ್ರಾಫ್ಟಿ, ಭ್ರುಜಿಯಾಮಲಿಯಾ ಮತ್ತು ಭ್ರೂಜಿಯಾ ತಿಮರೈ ಎಂಬ ಮೂರು ಪ್ರಭೇದಗಳನ್ನು ಹೊಂದಿದ್ದು ಮೂರು ಪ್ರಭೇದಗಳಿಂದ ಉಂಟಾಗುವ ಆನೆಕಾಲು ರೋಗ ಭಾರತದಲ್ಲಿ ದಾಖಲಾಗಿವೆ.

ಪ್ರೌಢಾವಸ್ಥೆಯಲ್ಲಿರುವ ಕ್ರಿಮಿಗಳು ಶರೀರದಲ್ಲಿ ಹಾಲ್ರಸ ಸಂಚರಿಸುವ ಕಣಜಾಲ (ಲಿಂಫಟಿಕ್ ಚಾನಲ್ಸ)ಗಳಲ್ಲಿ ಮತ್ತು ಎಳೆಮಣಿ ಕೀಟಗಳು ಸೂಕ್ಷ್ಮರಕ್ತನಾಳಗಳಲ್ಲಿರುತ್ತವೆ. ಹಾಲ್ರಸ ನಾಳಗಳಲ್ಲಿ ಇದ್ದುಕೊಂಡು ವಂಶಾಭಿವೃದ್ಧಿ ಮಾಡುವುದರೊಂದಿಗೆ ನಾಳಗಳಲ್ಲಿ ಹಾಲ್ರಸದ ಸಂಚಾರಕ್ಕೆ ಅಡ್ಡಿಯುಂಟುಮಾಡುತ್ತದೆ. ಹಾಲ್ರಸ ನಾಳಗಳ ಊತಕ್ಕೂ ಕಾರಣವಾಗುತ್ತವೆ (ಲಿಂಫಾಂಜಿಯೈಟಿಸ್) ಸಂಚಾರೀ ಹಾಲ್ರಸದಲ್ಲಿ ಉಂಟಾದ ಅಡೆತಡೆಯಿಂದಾಗಿ ಹಾಲ್ರಸ ಗ್ರಂಥಿಗಳು ಊದಿಕೊಳ್ಳುತ್ತವೆ (ಲಿಂಫ್ಆಡಿನೈಟಿಸ್) ಚರ್ಮದ ಅಡಿಯಲ್ಲಿ ಸಂಭವಿಸುವುದರಿಂದ ಅಲ್ಲೆಲ್ಲಾ ಊತ ಮತ್ತು


ಕೆರಳುವಿಕೆಗಳು ಉಂಟಾಗುವುವು. ಹೀಗೆ ಮೂರು ವಿಧಗಳಲ್ಲಿ ರೋಗದ ಲಕ್ಷಣಗಳು ಗೋಚರಿಸುವುವು. ರೋಗಿಯ ದೇಹದ ಬಲವು ಉತ್ತಮವಾಗಿದ್ದರೆ ಈ ಅವಸ್ಥೆಯು ಸ್ವಯಂ ಕಡಿಮೆಯಾಗುವುವು ಮತ್ತು ರೋಗಿಯ ಬಲವು ಕಡಿಮೆಯಾಗಿದ್ದರೆ ರೋಗದ ಈ ಅವಸ್ಥೆಯು ಹಾಗೆಯೇ ಉಳಿದು ಮುಂದುವರೆದು ಉಲ್ಬಣಾವಸ್ಥೆಯನ್ನು ತಲುಪುವುದು.

ಇಂತಹ ರೋಗಿಯನ್ನು ಸೊಳ್ಳೆಯು ಕಚ್ಚುವುದು. ಕಚ್ಚಿದ ಸೊಳ್ಳೆಯು ತನ್ನ ಉದರ ಪೋಷಣೆಗೆ ರಕ್ತವನ್ನು ಹೀರಿದಾಗ ಸಂಚಾರೀ ರಕ್ತದಲ್ಲಿರುವ ಎಳೆ ಕೀಟಗಳು ಸೊಳ್ಳೆಯ ಹೊಟ್ಟೆಯನ್ನು ಸೇರುವುದು. ಅಲ್ಲಿ ಅವು ರಚನೆಯಲ್ಲಿ ಮಾರ್ಪಾಡು ಹೊಂದುವುವು. ಸೊಳ್ಳೆಯ ಬಾಯಿಯ ಜೊಲ್ಲಿನಲ್ಲಿ ಬಂದು ಸೇರುವುವು. ಆರೋಗ್ಯವಂತನ ದೇಹವನ್ನು ಸೊಳ್ಳೆಯು ಕಚ್ಚಿದಾಗ ಸೊಳ್ಳೆಯ ಬಾಯಿಯಲ್ಲಿರುವ ಜೊಲ್ಲಿನೊಂದಿಗೆ ಸೇರುತ್ತವೆ. ಕಾಲಕ್ರಮದಲ್ಲಿ ರೋಗದ ಪ್ರಕ್ರಿಯೆಯು ಶರೀರದಲ್ಲಿ ಪ್ರಾರಂಭವಾಗುತ್ತದೆ.

ರೋಗದ ಸ್ವಭಾವ ಮತ್ತು ಲಕ್ಷಣಗಳು

ಕ್ರಿಮಿಗಳು ದೇಹವನ್ನು ಪ್ರವೇಶಿಸಿದ ಅನೇಕ ದಿನಗಳವರೆಗೆ ಸುಮ್ಮನಿದ್ದುಬಿಡುವುದು. ಕ್ರಮೇಣ ಕೆಲಬದಲಾವಣೆಗಳು ಶರೀರದಲ್ಲಿ ಗೋಚರಿಸುತ್ತವೆ. ಹಾಲ್ರಸಗ್ರಂಥಿಗಳ ಊತ, ನೋವುಗಳಿಂದ ಮನುಷ್ಯ ಬಳಲುತ್ತಾನೆ. ಚರ್ಮದಲ್ಲಿ ತುರಿಕೆ ದದ್ದುಗಳು ಕಾಣಿಸಿಕೊಳ್ಳಬಹುದು. ಪ್ರಾರಂಭಿಕ ಲಕ್ಷಣಗಳಾದ ಇವುಗಳಿಂದ ರೋಗದ ನಿರ್ಣಯ ಸಾಧ್ಯವಾಗುವುದಿಲ್ಲ. ರೋಗಿ ವಾಸಿಸುವ ಪ್ರದೇಶದಲ್ಲಿ ಸೋಂಕಿನ

ಭೀತಿ ಇದ್ದರೆ, ರಕ್ತದಲ್ಲಿ ಈಸಿನೋಫಿಲ್ ಕಣಗಳು ಅಧಿಕಗೊಂಡಿದ್ದರೆ, ಮತ್ತು ಚರ್ಮದ ಪರೀಕ್ಷೆ.



ಆನೆಕಾಲು ರೋಗ ಉಂಟಾಗಿರುವ ವಿವಿಧ ಅಂಗಾಂಗಗಳು

(೧) ಕಾಲು (೨) ವೃಷಣ (೩) ಶಿಶ್ನ (೪) ಯೋನಿಯ ಹೊರ ತುಟಿ (೫) ಹೆಣ್ಮಣಿ (ಚಂದ್ರನಾಡಿ) (೬) ಸ್ತನ (೭) ಕೈ ಮುಂಭಾಗ (೮) ವಂಕ್ಷಣ ಪ್ರದೇಶದಲ್ಲಿರುವ ಹಾಲ್ರಸ ಗ್ರಂಥಿ ಮತ್ತು ಶಿಶ್ನ (೯) ವೃಷಣ ಚೀಲದ ಮೇಲೆ ಎದ್ದಿರುವ ಗುಳ್ಳೆಗಳು (೧೦) ಶುಕ್ರನಾಡಿಗೆ ಉಂಟಾಗಿರುವುದು (೧೧) ಉದರದಲ್ಲಿರುವ ಹಿಂಭಾಗದ ಗೋಡೆ (೧೨) ಎದೆಗೂಡಿನಲ್ಲಿ ನೀರಿನ ಶೇಖರಣೆ, ಉದರದಲ್ಲಿ ನೀರಿನ ಶೇಖರಣೆ.

ಚಿತ್ರಕೃಪೆ
Text Book of Parasitology by Chatterjee

ಮಾಡಿದಾಗ ಸಕಾರಾತ್ಮಕ ಫಲಿತಾಂಶ ಕಂಡುಬಂದರೆ ರೋಗ ನಿರ್ಣಯ ಸಾಧ್ಯ. ಕ್ರಿಮಿಗಳು ದೇಹದಲ್ಲಿ ಸೂಕ್ಷ್ಮರೀತಿಯಿಂದ ಚಟುವಟಿಕೆಯಿಂದಿದ್ದರೂ ಕೆಲವೊಮ್ಮೆ ಮೇಲಿನ ಯಾವುದೇ ಕುರುಹುಗಳನ್ನು ವ್ಯಕ್ತಪಡಿಸದೇ ಇರಬಹುದು. ಹಾಗಾಗಿ ಈ ರೋಗವು ಸುಳಿವಿಗೆ ಸಿಗದೇ ವೈದ್ಯರನ್ನು ಮತ್ತು ರೋಗಿಯನ್ನು ಮೋಸಗೊಳಿಸುವುದೂ ಉಂಟು.

ಆನೆಕಾಲು ರೋಗವನ್ನುಂಟುಮಾಡುವ ಫೈಲೇರಿಯಾ ಪರಾವಲಂಬಿ ಮತ್ತು ಅದನ್ನು ವಹನಮಾಡುವ ಕ್ಯೂಲೆಕ್ಸ್ ಸೊಳ್ಳೆಯು ರಾತ್ರಿಯ ವೇಳೆಯಲ್ಲೇ ಹೆಚ್ಚಾಗಿ ಚಟುವಟಿಕೆಯಿಂದ ಕೂಡಿರುತ್ತದೆ. ಮತ್ತು ಈ ಸೊಳ್ಳೆಗಳು ಮನುಷ್ಯನ ಕಾಲಿನ ಭಾಗವನ್ನೇ ಹೆಚ್ಚಾಗಿ ಪ್ರೀತಿಸುತ್ತವೆ! ಕಾಲಿನ ಭಾಗವನ್ನು ಕಚ್ಚುವುದರಿಂದ ಅದು ರೋಗದ ಪ್ರಾರಂಭಿಕ ಸ್ಥಾನವಾಗುವುದು. ತೊಡೆಯ ಪ್ರದೇಶದಲ್ಲಿ ವ್ಯಾಪಿಸಿರುವ ಕಣಜಾಲಗಳಲ್ಲಿ ಊತ, ತೊಡೆ ಮತ್ತು ಕಾಲಿನ ಪ್ರದೇಶದಲ್ಲಿರುವ ಹಾಲ್ರಸ ನಾಳಗಳಲ್ಲಿ ಊತ, ಅಡೆತಡೆ ಮತ್ತು ಹಾಲ್ರಸ ಗ್ರಂಥಿಗಳ ಊತಗಳುಂಟಾಗುವುವು. ಜೊತೆಗೆ ಚರ್ಮದಲ್ಲಿ ತುರಿಕೆ, ದದ್ದುಗಳು ಪ್ರಾಧುರ್ಭವಿಸುವುವು. ಚರ್ಮವು ಒರಟಾಗುವುದು. ಇವೆಲ್ಲವುಗಳ ಪರಿಣಾಮವಾಗಿ ಕಾಲು ದಪ್ಪವಾಗಿ ಭಾರವೆನಿಸುವುದು. ರೋಗಿಯ ಕಾಲು ಗಾತ್ರದಲ್ಲಿ ಮತ್ತು ಸ್ಪರ್ಶಕ್ಕೆ 'ಆನೆಯಕಾಲಿನಂತೆ' ಆಗುತ್ತದೆ. ಪಾದರಕ್ಷೆಗಳನ್ನು ತೊಡಲು, ಷರಾಯಿ ಧರಿಸಲು, ಓಡಾಡಲು ಕಷ್ಟವೆನಿಸುತ್ತದೆ. ಇದೇ ಆನೆಕಾಲು ರೋಗ.

ಸೂಕ್ಷ್ಮಕ್ರಿಮಿಗಳು ಕೇವಲ ಕಾಲುಗಳನ್ನು ಮಾತ್ರವಲ್ಲದೇ ಗಂಡಸರ ವೃಷಣ, ಸ್ತ್ರೀಯರ ಯೋನಿ ಪ್ರದೇಶಗಳನ್ನು, ಅಪರೂಪಕ್ಕೆ ಕೈಗಳನ್ನು ಘಾಸಿಗೊಳಿಸಬಹುದು. ವೃಷಣದಲ್ಲಾದರೆ ಸುತ್ತಲ ಚರ್ಮವು ದಪ್ಪ ಒರಟಾಗುವುದರೊಂದಿಗೆ ವೃಷಣ ಚೀಲದಲ್ಲಿ ನೀರು ಸೇರಿಕೊಳ್ಳುವುದು (ಹೈಡ್ರೋಸೀಲ್ = ಚೇರು) ಊದಿಕೊಳ್ಳುವುದು ಉಂಟಾಗಬಹುದು. ಯೋನಿಯಲ್ಲಿಯೂ ಊತ ಜೊತೆಗೆ ಚರ್ಮವು ದಪ್ಪವಾಗಿ ಜೋತು ಬೀಳುವುದು. ಸರ್ವಶರೀರದಲ್ಲಿ ಅತೀವವಾದ ಕೆರಳುವಿಕೆಯ ಪ್ರಕ್ರಿಯೆ (ಹೈಪರ್ ಸೆನ್ಸಿಟಿವಿಟಿ ರಿಯಾಕ್ಷನ್ಸ್) ಗಳು ಉಂಟಾಗುವುವು. ಎದೆಗೂಡಿನಲ್ಲಿ ಕೆರಳುವಿಕೆಯಿಂದ ಒಣಕೆಮ್ಮು ಉದ್ಭವಿಸುವುದು. ಕೆಲವೊಮ್ಮೆ ಸಂಧಿಶೂಲ (ಆರ್ಥ್‌ರೈಟಿಸ್)ವೂ ಉಂಟಾಗಬಹುದು. ಅಂಗವಿಕಲತೆ (ವಿಕಾರ), ಸಂತಾನಶಕ್ತಿಯ ಹೀನತೆಗಳು ಉಪದ್ರವಗಳಾಗಿ ಪರಿಣಮಿಸುತ್ತವೆ.

ರೋಗನಿರ್ಣಯ

ಮೇಲಿನ ಲಕ್ಷಣಗಳಿಂದಲೇ ವಿಶೇಷವಾಗಿ ಕಾಲುಗಳಲ್ಲಿನ ಹಿರಿದಾದ ಗಾತ್ರ ಮತ್ತು ಒರಟಾದ ಚರ್ಮಗಳಿಂದಲೇ ರೋಗವನ್ನು ರೋಗಿಯು ಇದು ಆನೆಕಾಲು ರೋಗವೆಂದು ಶಂಕಿಸಿಬಿಡುತ್ತಾನೆ. ಚರ್ಮದ ಮೇಲೆದ್ದಿರುವ ಮಾಯವಾಗದ ದದ್ದುಗಳು, ತುರಿಕೆಗಳು, ಹಾಲ್ರಸ ಜಾಳಗಳಲ್ಲಿ ಊತ, ಹಾಲ್ರಸ ಗ್ರಂಥಿಗಳ ಊತ, ವೃಷಣದ ಚರ್ಮದ ವಿಕೃತಿ ಮತ್ತು ನೀರು ಸೇರಿರುವುದು, ಯೋನಿಯ ಊತ, ಇವೆಲ್ಲವುಗಳ ದರ್ಶನದಿಂದಲೇ ರೋಗವನ್ನು ವೈದ್ಯರು ಊಹಿಸಬಹುದು. ಶಂಕಿತ ವ್ಯಕ್ತಿಯ ರಕ್ತವನ್ನು ಪರೀಕ್ಷೆಮಾಡಿದಾಗ

ರಕ್ತದಲ್ಲಿ ಮಿಣಿಕೀಟಗಳ ಇರುವಿಕೆ, ರೋಗಿ ವಾಸಿಸುವ ಪ್ರದೇಶದಲ್ಲಿ ಪ್ರಕರಣಗಳೇನಾದರೂ ಇದ್ದರೆ, ಸೊಳ್ಳೆಯು ಈ ಪ್ರದೇಶದಲ್ಲಿ ವ್ಯಾಪಕವಾಗಿದ್ದರೆ ಮತ್ತು ಚರ್ಮದ ಪರೀಕ್ಷೆಯಲ್ಲಿ ಸಕಾರವಾದ ಫಲಿತಾಂಶ ಬಂದರೆ ರೋಗವನ್ನು ದೃಢೀಕರಿಸಬಹುದು.

ಚಿಕಿತ್ಸೆ

ರೋಗ ನಿರ್ಣಯವಾಗುತ್ತಿದ್ದಂತೆಯೇ ವಿಳಂಬ ಮಾಡದೇ ಚಿಕಿತ್ಸೆ ಪ್ರಾರಂಭಿಸಬೇಕು. ಡೈಈಥೈಲ್ ಕಾರ್ಬಮಜಿನ್ (DEC) ಎಂಬ ರಾಸಾಯನಿಕ ಔಷಧಿಯು ಪ್ರಭಾವಶಾಲಿಯಾಗಿ ಮೈಕ್ರೋಫಿಲೇರಿಯಾ ಕ್ರಿಮಿಗಳನ್ನು ಕೊಲ್ಲುತ್ತದೆ. ವೈದ್ಯರ ಸಲಹೆಯ ಮೇರೆಗೆ ಸೇವಿಸಿದರೆ ರೋಗಾಣುಗಳ ಸಂಖ್ಯೆಯು ಶರೀರದಲ್ಲಿ ಕಡಿಮೆಯಾಗಿ ರೋಗ ಹತೋಟಿಗೆ ಬರುತ್ತದೆ.

ಪ್ರತಿಬಂಧಕೋಪಾಯಗಳು

ಜನ ಸಮುದಾಯಕ್ಕೆ ಹರಡದಂತೆ ಮಾಡುವ ಕ್ರಿಯಾಕ್ರಮಗಳನ್ನೆಲ್ಲವನ್ನು ಕೈಗೊಳ್ಳಬೇಕು. ರೋಗಿಯು ಬೇರೆ ಊರಿಗೆ ತೆರಳದಂತೆ ಹೇಳಬೇಕು. ವೈಯಕ್ತಿಕ ರಕ್ಷಣಾ ಕ್ರಮಗಳನ್ನು ಆರೋಗ್ಯವಂತ ಜನರು ಆಚರಿಸಲು ಉಪದೇಶಿಸಬೇಕು.

ಸೋಂಕು ಕಾಣಿಸಿಕೊಂಡಿರುವ ಪ್ರದೇಶದಲ್ಲಿ ವಾಸಿಸುವ ಜನರಿಗೆ DEC ಔಷಧವನ್ನು ಮುನ್ನೆಚ್ಚರಿಕೆ ಕ್ರಮವಾಗಿ ಸೇವಿಸಲು ಕೊಡಬೇಕು. ಇದಕ್ಕಾಗಿ ಆ ಪ್ರದೇಶದಲ್ಲಿರುವ ಜನರು DEC ಪುಡಿಯನ್ನು (೧ ರಿಂದ ೪ ಗ್ರಾಂ ನಷ್ಟು) ೧ ಕೆ.ಜಿ. ಅಡಿಗೆ ಉಪ್ಪಿಗೆ

(Nacl) ಮಿಶ್ರಿಸಿ ಸೇವಿಸುವಂತೆ ಮಾಡಿದಲ್ಲಿ ರೋಗಕಾರಕ ಕ್ರಿಮಿಗಳು ದೇಹವನ್ನು ಪ್ರವೇಶಿಸದಂತೆ ನೋಡಿಕೊಳ್ಳಬಹುದು. ಹೀಗೆ ಸಂಸ್ಕರಿಸಿದ ತಿಂಡಿಗೆ ಉಪ್ಪು ಲಭ್ಯ.

ಇತರೆ ಕ್ರಿಮಿಗಳಿಂದ ಸೊಳ್ಳೆಗಳ ನಿಯಂತ್ರಣ ಮಾಡಬೇಕು. ಸೊಳ್ಳೆಯ ಲಾರ್ವಾ ಅವಸ್ಥೆಯನ್ನು ನಾಶಪಡಿಸುವ ಸಲುವಾಗಿ ಪೈರೋಸಿನ್ ಎಣ್ಣೆ, ರಂಜಕದ ಮಿಶ್ರಣಗಳನ್ನು ನೀರಿಗೆ ಸಿಂಪಡಿಸಬೇಕು. ಸೊಳ್ಳೆಗಳಿಗೆ ಆಶ್ರಯ ನೀಡುವ ಪಿಸ್ತಿಯಾ ಎಂಬ ಜಲಸಸ್ಯಗಳನ್ನು ಕಿತ್ತುಹಾಕಬೇಕು. ಆನೆಕಾಲು ರೋಗ ಹರಡುವ ಬಗ್ಗೆ, ಲಕ್ಷಣಗಳು, ವ್ಯಾಧಿ ಸ್ವರೂಪ ದೊರೆಯುವ ಚಿಕಿತ್ಸೆ ಇತ್ಯಾದಿ ಮಾಹಿತಿಗಳನ್ನು ಜನರಿಗೆ ತಿಳಿಸಬೇಕು.

ಮಿದುಳು ಜ್ವರ

ಒಬ್ಬ ರಾಜ ಸುತ್ತಮುತ್ತಲ ಪ್ರದೇಶಗಳಿಗೆ ದಂಡೆತ್ತಿಹೋಗಿ ಅಲ್ಲಿ ತನ್ನ ಪ್ರಾಬಲ್ಯ ಮೆರೆದು ಸಾಮ್ರಾಜ್ಯ ಸ್ಥಾಪಿಸುವಂತೆ ಕೆಲವು ರೋಗಗಳು ಕೂಡಾ ವರ್ತಿಸುತ್ತವೆ. ರೋಗಗಳ ರಾಜ್ಯದಲ್ಲಿ ಈ ರೀತಿ ಬಲವಾದ ಪ್ರಭಾವವನ್ನು ಬೀರಿ ಮೆರೆದ ರೋಗವೇ "ಮಿದುಳು ಜ್ವರ". ಜಪಾನ್ ದೇಶದಲ್ಲಿ ತನ್ನ ಅಸ್ಥಿತ್ವವನ್ನು ೧೮೭೧ ರಲ್ಲಿ ತೋರಿದ ಈ ರೋಗವು ೧೯೩೫ ರ ವೇಳೆಗೆ ಪಿಡುಗು ರೂಪ ತಾಳಿ ಸಾವಿರಾರು ಮಂದಿಯನ್ನು ಮುಗಿಸಿತು. ಪೂರ್ವ ಏಷ್ಯಾ ಖಂಡದಲ್ಲಿ ಉದ್ಭವಿಸಿದ ಈ ಸೋಂಕು ಈಗ ದಕ್ಷಿಣ ಏಷ್ಯಾ ರಾಷ್ಟ್ರಗಳಲ್ಲಿಯೂ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿಕೊಂಡಿದೆ.

"ಫ್ಲೇವಿ ವೈರಾಣು" ರೋಗಕಾರಕವಾಗಿದ್ದು ಪ್ರಾಣಿಗಳಿಂದ ಮನುಷ್ಯನಿಗೆ ಕ್ಯುಲಿಸಿನಿ ಜಾತಿಯ ಸೊಳ್ಳೆಗಳಿಂದ ಹರಡುತ್ತದೆ. ವೈರಾಣುವಿಗೆ ಮನುಷ್ಯದೇಹದಲ್ಲಿರುವ ಮಿದುಳು ಮತ್ತು ನರಮಂಡಲಗಳ ಮೇಲೆ ಅತೀವ ಮೋಹ. ಹಾಗಾಗಿ ಇವು ಮಿದುಳನ್ನೇ ಗುರಿಯಾಗಿಟ್ಟುಕೊಂಡು ಹಾನಿಗೊಳಿಸುವುದರಿಂದ ಮಿದುಳುಜ್ವರವೆಂದೆನಿಸಿದೆ. ರೋಗವು ಗಂಭೀರ ಸ್ವರೂಪದ್ದಾಗಿರುವುದರಿಂದ ಸಕಾಲದಲ್ಲಿ ಸೂಕ್ತ ಚಿಕಿತ್ಸೆ ದೊರೆಯದಿದ್ದರೆ ಸಾವು ಅಥವಾ ಮಿದುಳಿಗೆ ಆಘಾತವಾಗಿ ಶಾಶ್ವತ ಜಡತ್ವ, ಬುದ್ಧಿಮಾಂದ್ಯತೆ, ಲಕ್ವಗಳನ್ನುಂಟುಮಾಡುತ್ತದೆ. ಬದುಕುಳಿದರೂ ಅಂಗವಿಕಲತೆಯ ಭೀತಿ ಸೃಷ್ಟಿಸುತ್ತದೆ. ಹಾಗಾಗಿ ಇದೊಂದು ಭಯಾನಕವಾದ ಸೋಂಕುರೋಗ. ದೊಡ್ಡವರನ್ನು

ಪೀಡಿಸಿದರೂ ಹೆಚ್ಚಿನ ವೇಳೆ ಹೆಚ್ಚು ಪ್ರಕರಣಗಳಲ್ಲಿ ಇದು ಮಕ್ಕಳನ್ನು ಪೀಡಿಸುವ ರೋಗ. ಸಾಂಕ್ರಾಮಿಕ ರೂಪ ತಾಳಿ ಒಮ್ಮೆಲೇ ಹಲವಾರು ಜೀವಿಗಳ ಪ್ರಾಣ ತೆಗೆಯಬಲ್ಲದು. ನಮ್ಮ ದೇಶದಲ್ಲಿ ಮೊದಲಬಾರಿಗೆ ೧೯೫೨ ರಲ್ಲಿ ವೆಲ್ಲೂರಿನಲ್ಲಿರುವ ಕ್ರಿಶ್ಚಿಯನ್ ಮೆಡಿಕಲ್ ಕಾಲೇಜಿನಲ್ಲಿ ಪತ್ತೆಯಾಯಿತು. ತದನಂತರದ ಅವಧಿಯಲ್ಲಿ ದೇಶದ ಎಲ್ಲಾ ಭಾಗಗಳಲ್ಲಿ ಪ್ರಕರಣಗಳು ಗೋಚರಿಸುತ್ತಾ ಇವೆ.

ವಿಶ್ವದಾದ್ಯಂತ ಪ್ರತಿ ವರ್ಷ ಸುಮಾರು ೪೩೦೦೦ ಪ್ರಕರಣಗಳು ದಾಖಲಾಗುತ್ತಿವೆ. ೧೧೦೦೦ ರೋಗಿಗಳು ಮರಣವನ್ನಪ್ಪಿದ್ದಾರೆ. ಸುಮಾರು ೯೦೦ ರೋಗಿಗಳು ವಿಕಲಾಂಗರಾಗುತ್ತಾರೆ. ದಾಖಲಾಗುವ ಸುಮಾರು ೮೫% ಪ್ರಕರಣಗಳಲ್ಲಿ ೧೫ ವರ್ಷದೊಳಗಿನ ಮಕ್ಕಳೇ ಆಗಿರುವುದು ಆತಂಕ ಹಾಗೂ ಬೇಸರದ ಅಂಶಗಳಾಗಿವೆ.

ಜಪಾನಿನ ಕೆಲವು ಜಾತಿಯ ಹಕ್ಕಿಗಳಲ್ಲಿ ವೈರಾಣುಗಳು ಮೊದಲಬಾರಿಗೆ ಕಾಣಿಸಿಕೊಂಡವು. ಸೊಳ್ಳೆಗಳ ಮುಖಾಂತರ ಇತರ ಪ್ರಾಣಿ-ಪಕ್ಷಿಗಳ ದೇಹ ಸೇರಿದವು. ಇಂತಹ ಪಕ್ಷಿಗಳು ಭಾರತಕ್ಕೆ ವಲಸೆ ಬಂದಾಗ ನಮ್ಮ ದೇಶದ ಪಕ್ಷಿ ಮತ್ತು ಪ್ರಾಣಿ ಸಂಕುಲಗಳಿಗೆ ಅವೇ ಸೊಳ್ಳೆಗಳ ಮುಖಾಂತರ ಹರಡಿದವು. ಹೀಗೆ ಭಾರತದ ಜಾನುವಾರು ಮತ್ತು ಪಕ್ಷಿಗಳು ರೋಗದ ಆಕರಗಳಾದವು. ಜಪಾನಿನಲ್ಲಿ ಮೊದಲು ಕಾಣಿಸಿದ್ದುದರಿಂದ ಜಪಾನಿನ ಮಿದುಳುಜ್ವರ (ಜಪನೀಸ್ ಎನ್‌ಕೆಫಲೈಟಿಸ್) ಎಂದೆನಿಸಿತು. ಪ್ರಾಣಿ ಪಕ್ಷಿಗಳ ವಲಯಕ್ಕೇ ಹೆಚ್ಚು ಸೀಮಿತವಾಗಿದ್ದು ಅಕಸ್ಮಾತ್ತಾಗಿಯೋ ಅಥವಾ ಕಾಕತಾಳೀಯ

ಎಂಬಂತೆ ಮನುಷ್ಯನಿಗೆ ಸೋಂಕು ತಗಲುತ್ತದೆ. ಹಂದಿಗಳನ್ನೇ ಹೆಚ್ಚಾಗಿ ಆಶ್ರಯಿಸಿರುವ ಈ ವೈರಾಣುಗಳು ಒಂದು ಹಂದಿಯಿಂದ ಇನ್ನೊಂದು ಹಂದಿಗೆ ವರ್ಗಾವಣೆಯಾಗಲು 'ಸೊಳ್ಳೆ' ಮಧ್ಯವರ್ತಿಯಾಗಿ ಕಾರ್ಯನಿರ್ವಹಿಸುತ್ತದೆ. ವೈರಾಣುಗಳನ್ನು ಹೊಂದಿರುವ ಹಂದಿಯನ್ನು ಸೊಳ್ಳೆಯು ಕಚ್ಚಿದಾಗ ರೋಗಕಾರಕ ವೈರಾಣುಗಳು ಸೊಳ್ಳೆಯ ಶರೀರವನ್ನು ಸೇರುವುವು. ಈ ಸಮಯದಲ್ಲಿ ಸೊಳ್ಳೆಗಳು ಮನುಷ್ಯನನ್ನು ಕಚ್ಚಿದರೆ ಸೋಂಕು ವರ್ಗಾವಣೆಯಾಗುತ್ತದೆ.

ಪ್ರಭೇದಗಳು

ಫ್ಲೇವಿ ವೈರಸ್ಸುಗಳ ಒಳ ಪ್ರಭೇದಗಳನ್ನು ಆಧಾರವಾಗಿರಿಸಿ ಕೊಂಡು ಅವು ಉಂಟುಮಾಡುವ ಮಿದುಳು ಜ್ವರವನ್ನು ಐದು ಪ್ರಭೇದಗಳಾಗಿ ವಿಂಗಡಿಸಲಾಗಿದೆ.

೧. ಸೆಂಟ್ ಲೂಯಿಸ್ ಮಿದುಳು ಜ್ವರ

೨. ಪೂರ್ವತಟ್ಟಿನ ಮಿದುಳು ಜ್ವರ

೩. ಪಶ್ಚಿಮ ತಟ್ಟಿನ ಮಿದುಳು ಜ್ವರ

೪. ಕ್ಯಾಲಿಫೋರ್ನಿಯಾ ಮಿದುಳು ಜ್ವರ

೫. ಜಪಾನಿನ ಮಿದುಳು ಜ್ವರ

ನಮ್ಮ ದೇಶದಲ್ಲಿ ವ್ಯಾಪಕವಾಗಿ ಕಂಡುಬಂದು ಕಂದಮ್ಮಗಳನ್ನು ಬಲಿತೆಗೆದುಕೊಂಡು ಸಂಕಟಕ್ಕೀಡುಮಾಡಿರುವುದು ಜಪಾನಿನ ಮಿದುಳುಜ್ವರವೇ ಆಗಿದೆ. ನಮ್ಮ ರಾಜ್ಯದಲ್ಲಿ

ಮೊದಲಬಾರಿ ಬಳ್ಳಾರಿ ಜಿಲ್ಲೆಯಲ್ಲಿ ವ್ಯಾಪಿಸಿ ನಂತರ ತನ್ನ ಕದಂಬ ಬಾಹುಗಳನ್ನು ಇತರ ಪ್ರದೇಶಗಳಿಗೆ ವಿಸ್ತರಿಸಿತು. ಪಿಡುಗು ರೂಪದಲ್ಲಿ ವ್ಯಾಪಿಸಲು ಶಕ್ತಿ ಇರುವ ಈ ರೋಗವು ಸಾಮಾನ್ಯವಾಗಿ ಸೆಪ್ಟೆಂಬರ್‌ನಿಂದ ಜನವರಿ ಮಾಹೆಗಳಲ್ಲಿ ಹೆಚ್ಚಾಗಿ ಕಾಡುತ್ತವೆ.

ರೋಗವಾಹಕದ ವಿಶಿಷ್ಟತೆ

ಭಾರತದಲ್ಲಿ ಜಪಾನಿನ ಮಿದುಳುಜ್ವರವನ್ನುಂಟುಮಾಡುವ ವೈರಾಣುಗಳನ್ನು ವಹನ ಮಾಡುವ ಕ್ಯುಲೆಕ್ಸ್ ಟ್ರಿಟನಿಯೊರಿಂಕಸ್ ಜಾತಿಯ ಸೊಳ್ಳೆಗಳು ವಿಶಿಷ್ಟ ಸ್ವಭಾವವುಳ್ಳದ್ದಾಗಿವೆ. ಈ ಸೊಳ್ಳೆಗಳು ನೀರು ಇರುವ ಗದ್ದೆಗಳಲ್ಲಿ, ನಿಂತ ನೀರಿರುವ ತಾಣಗಳಲ್ಲಿ ಮೊಟ್ಟೆಗಳನ್ನಿಟ್ಟು ಸಂತಾನಾಭಿವೃದ್ಧಿ ಮಾಡುತ್ತವೆ.

ರೋಗ ಲಕ್ಷಣಗಳು

ದೇಹವನ್ನು ಸೇರಿದ ವೈರಾಣುಗಳು ರೋಗಲಕ್ಷಣಗಳನ್ನು ಉತ್ಪನ್ನಮಾಡುವ ಕಾಲವನ್ನು ೫ ರಿಂದ ೧೫ ದಿನಗಳು ಎಂದು ಅಂದಾಜಿಸಲಾಗಿದೆ. ಮೂರು ವಿವಿಧ ಹಂತಗಳಲ್ಲಿ ರೋಗಲಕ್ಷಣಗಳನ್ನು ವಿಂಗಡಿಸಬಹುದಾಗಿದೆ.

೧. **ಪ್ರಾಥಮಿಕ ಹಂತ :** ಸುಮಾರು ೧ ರಿಂದ ೬ ದಿನಗಳವರೆಗೆ ವಿಸ್ತರಿಸಿರುವ ಈ ಅವಸ್ಥೆಯಲ್ಲಿ ತಲೆನೋವು, ಜ್ವರ ಮತ್ತು ಬಳಲಿಕೆಗಳೇ ಪ್ರಮುಖ ಲಕ್ಷಣಗಳು. ಇವುಗಳನ್ನು ಆಧರಿಸಿ ರೋಗ ನಿರ್ಣಯ ಮಾಡುವುದು ಸಾಧ್ಯವಿಲ್ಲ.

೨. **ಮಿದುಳು ಸೋಂಕಿನ ಹಂತ :** ಜ್ವರ ಪ್ರಾರಂಭವಾದ ೨೪ ಘಂಟೆಗಳಲ್ಲಿ ತೀವ್ರತೆ ಅಧಿಕವಾಗುತ್ತದೆ. ಕುತ್ತಿಗೆಯ ಭಾಗದಲ್ಲಿ ನೋವು, ಸೆಳೆತಗಳೊಂದಿಗೆ ಮಿದುಳಿನಲ್ಲಿ ಉರಿಯೂತಗಳುಂಟಾಗುತ್ತದೆ. ಇದರ ಲಕ್ಷಣಗಳಾಗಿ ಕುತ್ತಿಗೆಯು ಸೆಟೆಯುವುದು, ಮಾನಸಿಕ ಅಸ್ಥಿರತೆಗಳು, ಅಸಂಬದ್ಧ ಮಾತು ಇತ್ಯಾದಿಗಳು ಗೋಚರಿಸುತ್ತವೆ. ಮುಂದುವರೆದಲ್ಲಿ ಜ್ಞಾನ ತಪ್ಪುವುದು. ಈ ಹಂತದಲ್ಲಿ ರೋಗದ ನಿರ್ದಿಷ್ಟತೆ ಸಂಪೂರ್ಣವಾಗಿ ಮಾಡಲು ಕಷ್ಟವಾದರೂ ರೋಗದ ಸಂಭವನೀಯತೆಯನ್ನು ಶಂಕಿಸಬಹುದಾಗಿದೆ.

೩. **ಉಪದ್ರವದ ಹಂತ :** ಜ್ವರದ ತೀವ್ರತೆಯಿಂದ ಮಿದುಳಿನ ಪೊತಿಯ ಉರಿಯೂತ ತಾರಕಕ್ಕೇರಿ ಮಿದುಳನ್ನು ಘಾಸಿಗೊಳಿಸಿ ಹಾನಿಗೊಳಿಸಿರುತ್ತದೆ. ಹಾನಿಗೊಂಡ ಮಿದುಳಿನ ಕ್ರಿಯೆಗಳಿಂದ ಉಂಟಾಗಿರುವ ಮೂರ್ಛೆ, ಸೆಳೆತ ಉತ್ತಮಗೊಳ್ಳಬಹುದು. ಮರಳಿ ಪ್ರಜ್ಞೆ ಬರಬಹುದು ಅಥವಾ ರೋಗಲಕ್ಷಣಗಳು ಅಷ್ಟಕ್ಕೇ ಮಿತಗೊಳ್ಳಬಹುದು. ಅಂಗವಿಕಲತೆಯ ಬಳುವಳಿ ನೀಡಿಬಿಡಬಹುದು. ಪ್ರತಿಶತ ೫೦ ಪ್ರಕರಣಗಳಲ್ಲಿ ಮರಣ ಸಂಭವಿಸುವುದು. ಮರಣ ಸಂಭವಿಸುವ ಸಾಮಾನ್ಯ ಅವಧಿ ೯ ರಿಂದ ೧೦ ದಿನಗಳು.

ರೋಗ ನಿರ್ಣಯ

ಸೆಪ್ಟೆಂಬರ್‌ನಿಂದ ಜನವರಿ ತಿಂಗಳುಗಳಲ್ಲಿ ಕಾಣಿಸಿಕೊಳ್ಳುವ ತೀವ್ರಜ್ವರ, ಸ್ಥಳಜನ್ಯ ಪ್ರಕರಣಗಳ ಪತ್ತೆಯಾಗುವಿಕೆ ಮತ್ತು ವಿಶೇಷವಾಗಿ ರೋಗಿಯಲ್ಲಿ ಕಾಣಿಸುವ ಲಕ್ಷಣಗಳಾದ ತಲೆನೋವು, ತಲೆಭಾರ, ಕುತ್ತಿಗೆ ಪ್ರದೇಶದಲ್ಲಿ ನೋವು, ಚಲನೆಯಲ್ಲಿ ವೇದನೆ, ಮೂರ್ಛೆ, ನಡುಕ, ಮಾನಸಿಕ ಅಸ್ಥಿರತೆ, ಅಸಂಬದ್ಧ ಮಾತು ಇತ್ಯಾದಿಗಳು ರೋಗ ನಿರ್ಣಯದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಮಿದುಳಿನ ಆಘಾತದಿಂದ ಉಂಟಾಗಿರುವ ರಚನೆ ಮತ್ತು ಕ್ರಿಯೆಗಳಲ್ಲಿ ನ್ಯೂನತೆ (ಅಂಗವಿಕಲತೆ, ಬುದ್ಧಿಮಾಂದ್ಯತೆ, ಕೆಲವೊಮ್ಮೆ ಸಾವು) ಇವುಗಳಿಂದ ರೋಗ ನಿರ್ಣಯ ಮಾಡುವಂತಾಗುತ್ತದೆ. ಮಿದುಳಿನ ರಸ (CSF) ದ ಪರೀಕ್ಷೆ. ರಕ್ತಪರೀಕ್ಷೆಗಳು ಸಹಕಾರಿಯಾಗುತ್ತವೆ.

ಚಿಕಿತ್ಸೆ

ವೈರಾಣುಜನ್ಯ ಸೋಂಕಾಗಿರುವುದರಿಂದ ಯಾವುದೇ ನಿರ್ದಿಷ್ಟ ವೈರಾಣು ನಾಶಪಡಿಸುವಂತಹ ಔಷಧಿಗಳಿಲ್ಲ. ಸೋಂಕಿನ ತೀವ್ರತೆಯನ್ನು ಕಡಿಮೆ ಮಾಡಲು, ಯಾವುದೇ ಅಡ್ಡ ಪರಿಣಾಮಗಳು ಉಂಟಾಗದಿರಲು ಲಾಕ್ಷಣಿಕ ಚಿಕಿತ್ಸೆ ನೀಡಲಾಗುವುದು. ಜ್ವರ ಕಡಿಮೆ ಮಾಡಲು ರೋಗಿಗೆ ಶೀತೋಪಚಾರ, ಜ್ವರ ಕಡಿಮೆ ಮಾಡುವ ಔಷಧಗಳನ್ನು ನೀಡಲಾಗುವುದು. ಆಸ್ಪತ್ರೆಯಲ್ಲಿ ದಾಖಲಿಸಿ ಚಿಕಿತ್ಸೆ ನೀಡಬೇಕು. ಗ್ಲೂಕೋಸು ದ್ರಾವಣವನ್ನು ರಕ್ತನಾಳಗಳಿಗೆ ಜೋಡಿಸಬೇಕು.

ನಿಯಂತ್ರಣ ಕ್ರಮಗಳು

೧. ರೋಗ ಪತ್ತೆಯಾದರೆ ಕೂಡಲೇ ಮನುಷ್ಯ ವಾಸಿಸುವ ಪ್ರದೇಶದಿಂದ ಸುಮಾರು ೩ ಮೈಲಿ ದೂರದವರೆಗೆ ಹಂದಿಗಳನ್ನು ಅಟ್ಟಬೇಕು. ಮರಿ ಹಂದಿಗಳು ಕೂಡಾ ಹತ್ತಿರ ಇರಬಾರದು. ಜಾನುವಾರುಗಳನ್ನು ಮನೆಯಿಂದ ದೂರ ಕಟ್ಟಬೇಕು.

೨. ಸೊಳ್ಳೆಗಳಿಂದ ರಕ್ಷಣೆ, ಕಚ್ಚಿಸಿಕೊಳ್ಳದಂತೆ ಮೈತುಂಬಾ ಬಟ್ಟೆ ಧರಿಸುವುದು, ಸೊಳ್ಳೆ ಪರದೆಯನ್ನು ಕಟ್ಟಿಕೊಂಡು ಮಲಗುವುದು ಇತ್ಯಾದಿ ಕ್ರಮಗಳನ್ನು ಕೈಗೊಳ್ಳಬೇಕು.

೩. ಲಸಿಕೆ ತೆಗೆದುಕೊಳ್ಳುವುದು : ಈ ರೋಗವು ಬಾರದಂತೆ ತಡೆಗಟ್ಟಲು ಈಗ ಲಸಿಕೆ (ವಾಕ್ಸೀನು)ಯನ್ನು ಕಂಡುಹಿಡಿಯಲಾಗಿದೆ. ಸೋಂಕು ಉಂಟಾಗುವ ಶಂಕೆ ಇರುವ ಪ್ರದೇಶದ ಜನರಿಗೆ ೧ ಮಿಲಿ ಲಸಿಕೆಯನ್ನು ಚುಚ್ಚುಮದ್ದು ಮೂಲಕ ಚರ್ಮದ ಕೆಳಗೆ ಕೊಡಲಾಗುವುದು. ನಿಗದಿತ ದಿನದಂದು ಒಂದು ವರಸೆ (ಡೋಸ್) ನೀಡಿ ನಂತರದ ೭ ರಿಂದ ೧೪ ದಿನಗಳಲ್ಲಿ (ಎರಡು ವಾರಗಳಲ್ಲಿ) ಮತ್ತೆ ಎರಡು ವರಸೆಗಳನ್ನು ನೀಡಬೇಕು.೦.೫ ಮಿಲಿ ಪ್ರಮಾಣದಷ್ಟು ಲಸಿಕೆಯು ಮೂರು ವರ್ಷದೊಳಗಿನ ಮಕ್ಕಳಿಗೆ ಸಾಕು. ಲಸಿಕೆಯನ್ನು ಮನುಷ್ಯ ಆರೋಗ್ಯವಂತನಾಗಿರುವಾಗ ನೀಡಬೇಕು ಮತ್ತು ಜನಸಮೂಹದಲ್ಲಿ ಪ್ರಕರಣಗಳು ಪಿಡುಗು ತಾಳುವುದಕ್ಕಿಂತ ಮುಂಚಿತವಾಗಿ ನೀಡಬೇಕು. ನಿಗದಿತ ಪ್ರಮಾಣ ಮತ್ತು ವರಸೆಯನ್ನು ನೀಡಿದರೆ ಯಶಸ್ವಿಯಾಗಿ ರೋಗದ ಸೋಂಕನ್ನು ತಡೆಗಟ್ಟಬಹುದು.

ಪಶ್ಚಿಮ ನೈಲ್ ನದಿಯ ಜ್ವರ

ವೈರಾಣುಜನಿತವಾದ ಸೋಂಕುರೋಗವಾಗಿದ್ದು ಆರ್ಬೋ ವೈರಸ್ಸುಗಳಲ್ಲಿನ 'ಬಿ' ಗುಂಪಿಗೆ ಸೇರಿದೆ. ಮಿದುಳು ಜ್ವರವನ್ನುಂಟುಮಾಡುವ ವೈರಾಣುವಿಗೂ ಸದರಿ ವೈರಾಣುವಿಗೂ ಸಾಮ್ಯತೆ ಇದೆ. ನಮ್ಮ ದೇಶದಲ್ಲಿ ಆಗಾಗ್ಗೆ ಅಲ್ಲೊಂದು ಇಲ್ಲೊಂದು ಪ್ರಕರಣಗಳು ಕಾಣಿಸಿಕೊಳ್ಳುತ್ತಿರುವ ಈ ಸೋಂಕು ಆಫ್ರಿಕಾ ಖಂಡದಲ್ಲಿ ಪಿಡುಗು ರೂಪವಾಗಿ ಗೋಚರಿಸುತ್ತದೆ. ೧೯೩೭ರ ವೇಳೆಯಲ್ಲಿ ಮೊದಲಬಾರಿಗೆ ಈಜಿಪ್ಟ್ ದೇಶದಲ್ಲಿ ವೈರಾಣುವನ್ನು ಪತ್ತೆಮಾಡಿ ಬೇರ್ಪಡಿಸಲಾಯಿತು. ಇಸ್ರೇಲ್‌ನಲ್ಲಿ ೧೯೫೦ ರಲ್ಲಿ ಸಾಂಕ್ರಾಮಿಕ ರೂಪದಲ್ಲಿ ಕಾಡಿತ್ತು.

ಸೋಂಕಿನ ಮೂಲ ಆಕರಗಳಾಗಿ ಪಕ್ಷಿಗಳು ಪಾತ್ರವಹಿಸಿರುವುದನ್ನು ವೈದ್ಯಕ್ಷೇತ್ರ ಗಮನಿಸಿದೆ. ಪಕ್ಷಿಗಳಿಂದ ಮನುಷ್ಯನಿಗೆ ಸೋಂಕು ಹರಡುತ್ತದೆ. ಕ್ಯುಲಿಸಿನಿ ಸೊಳ್ಳೆಗಳು ರೋಗ ಪ್ರಸಾರವನ್ನು ಮಾಡುತ್ತವೆ. ಆಶ್ಚರ್ಯಕರ ಸಂಗತಿಯೆಂದರೆ ಮನುಷ್ಯನಿಂದ ಮನುಷ್ಯನಿಗೆ ರೋಗ ಹರಡುವುದಿಲ್ಲ.

ರೋಗದ ಲಕ್ಷಣಗಳು

ವೈರಾಣುಗಳು ಶರೀರವನ್ನು ಪ್ರವೇಶಿಸಿದ ೨ ರಿಂದ ೬ ದಿವಸಗಳಲ್ಲಿ ಇದ್ದಕ್ಕಿದ್ದಂತೆಯೇ ಜ್ವರ ಪ್ರಾರಂಭವಾಗುವುದು. ಜೊತೆಗೆ ದುರ್ಬಲತೆ ಮತ್ತು ಸುಸ್ತು ಸೇರಿರುತ್ತವೆ. ತೀವ್ರತರವಾದ ತಲೆನೋವು ರೋಗಿಯನ್ನು ನರಳಿಸುತ್ತದೆ. ಗಂಟಲುನೋವು, ಕೆಮ್ಮು ಕಾಣಿಸಿಕೊಳ್ಳುವುವು. ಹಾಲ್ರಸಗ್ರಂಥಿಗಳು ಊದಿಕೊಳ್ಳುತ್ತವೆ. ಜೊತೆಗೆ

ಮೈಮೇಲೆ ಬೊಕ್ಕೆಗಳು ಉಂಟಾಗುವುವು. ಉದರ ಪ್ರದೇಶದ ಅಂಗಗಳಾದ ಯಕೃತ್ ಮತ್ತು ಪ್ಲೀಹಾಗಳು ಊದಿಕೊಳ್ಳುವುವು. ಮೊದಲನೆಯ ವಾರದ ಅಂತ್ಯದ ವೇಳೆಗೆ ಅಥವಾ ೨ ನೇ ವಾರದ ಪ್ರಾರಂಭದಲ್ಲಿ ಜ್ವರ ಕಡಿಮೆಯಾಗಿ ಇತರ ಲಕ್ಷಣಗಳು ಕಡಿಮೆಯಾಗುತ್ತಾ ಬರುವುವು. ವೃದ್ಧರಲ್ಲಿ ಸೋಂಕು ಮಿದುಳು ಮತ್ತು ಮಿದುಳಿನ ಕವಚಗಳಿಗೆ ಹರಡಿ ಅಲ್ಲಲ್ಲಿ ಉರಿಯೂತವನ್ನುಂಟುಮಾಡುವುದು.

ರೋಗ ನಿರ್ಣಯ : ರೋಗಿಯು ವ್ಯಕ್ತಪಡಿಸುವ ಲಕ್ಷಣಗಳ ಆಧಾರದ ಮೇಲಿಂದ, ಜ್ವರದ ತೀವ್ರಾವಸ್ಥೆಯಲ್ಲಿ ಬಿಳಿರಕ್ತ ಕಣಗಳ ಸಂಖ್ಯೆಯಲ್ಲಿ ಇಳಿಮುಖವಾಗಿರುವುದು ಮತ್ತು ೧೦ ರಿಂದ ೧೪ ದಿನಗಳಲ್ಲಿ ಶರೀರದಲ್ಲಿ ಉತ್ಪತ್ತಿಯಾಗಿರುವ ನಿರ್ದಿಷ್ಟ ಪ್ರತೀಕಾಯವಸ್ತುಗಳು ರಕ್ತದಲ್ಲಿ ಗೋಚರಿಸುವುದು. ಇವೆಲ್ಲವುಗಳ ಸಹಾಯದಿಂದ ರೋಗವನ್ನು ದೃಢೀಕರಿಸಬೇಕಾಗುವುದು.

ಚಿಕಿತ್ಸೆ : ಉದ್ಭವಿಸಿರುವ ಲಕ್ಷಣಗಳನ್ನು ಕಡಿಮೆಮಾಡುವ ಔಷದೋಪಚಾರ ಮಾಡಬೇಕು. ಜ್ವರ, ನೋವು ಕಡಿಮೆಮಾಡುವ ಔಷಧಿ ಸೇವಿಸಬೇಕು. ವಿಶ್ರಾಂತಿ, ದ್ರವಾಹಾರ ಸೇವನೆ, ದುರ್ಬಲತೆ ಕಡಿಮೆಮಾಡಲು ಗ್ಲೂಕೋಸು ದ್ರಾವಣವನ್ನು ನರಗಳಿಗೆ ಜೋಡಿಸುವುದು ಇತರ ಕ್ರಮಗಳು.

ಪ್ರತಿಬಂಧಕೋಪಾಯಗಳು : ಸೊಳ್ಳೆಗಳಿಂದ ಕಚ್ಚಿಸಿಕೊಳ್ಳದಂತೆ ಎಚ್ಚರ ವಹಿಸಬೇಕು.

ಹಳದೀ ಜ್ವರ

ಪ್ರಾಣಿಗಳನ್ನೇ ಹೆಚ್ಚಾಗಿ ಕಾಡುತ್ತಾ ಅಕಸ್ಮಾತ್ತಾಗಿ ಮನುಷ್ಯನಿಗೆ ಉಂಟಾಗುವ ವೈರಾಣುಜನಿತ ಸೋಂಕು ರೋಗಗಳಲ್ಲಿ 'ಹಳದೀಜ್ವರ'ವೂ ಒಂದು. ಬಹುತೇಕ ಕೋತಿಗಳನ್ನೇ ಪೀಡಿಸುವ ಸೋಂಕು ಇತರ ಪ್ರಾಣಿಗಳನ್ನು ಸಹ ಸಂಕಷ್ಟಕ್ಕೀಡುಮಾಡಬಹುದು. ಒಂದು ಪ್ರಾಣಿಯಿಂದ ಮತ್ತೊಂದು ಪ್ರಾಣಿಗೆ ರೋಗವನ್ನು ಹರಡುವುದು ಕ್ಯುಲಿಸಿನಿ ಜಾತಿಯ ಸೊಳ್ಳೆಗಳು. ಭಾರತದಲ್ಲಿ ಈ ಸೋಂಕು ಇಲ್ಲದಿರುವುದು ಸ್ವಲ್ಪ ನೆಮ್ಮದಿಯ ಅಂಶವಾಗಿದೆ. ಬೊಲಿವಿಯಾ, ಬ್ರೆಜಿಲ್, ಕೊಲಂಬಿಯಾ, ಪೆರು ಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಕರಣಗಳು ದಾಖಲಾಗುತ್ತವೆ. ಸಾಂಕ್ರಾಮಿಕ ರೂಪದಲ್ಲಿ ತಲೆದೋರಿ ನೂರಾರು ಜನರ ಸಾವುನೋವುಗಳಿಗೆ ಕಾರಣವಾಗುತ್ತದೆ. ಜಾತಿ, ಮತ, ಲಿಂಗ ಮತ್ತು ವಯಸ್ಸಿನ ಭೇದ ಮಾಡದೇ ಎಲ್ಲ ಜನರನ್ನು ಪೀಡಿಸುವ ಶಕ್ತಿಯುಳ್ಳ ಈ ಸೋಂಕು ಕಾಡಿನಲ್ಲಿ ಓಡಾಡುವ ಜನರನ್ನು ಮೊದಲು ಸಂಕಷ್ಟಕ್ಕೀಡುಮಾಡುತ್ತದೆ. ನಂತರ ಇತರರಿಗೆ ಹರಡುತ್ತದೆ.

ರೋಗಕಾರಕ ವೈರಾಣು

ಕೋತಿಗಳನ್ನೇ ಹೆಚ್ಚಾಗಿ ಸೋಂಕಿಗೆ ಬಲಿತೆಗೆದುಕೊಳ್ಳುವ ಈ ವೈರಾಣು ಫ್ಲೇವಿವೈರಸ್ ಫಿಬ್ರಿಕಸ್ ಎಂದು ಗುರುತಿಸಲ್ಪಟ್ಟಿದೆ. ಡೆಂಗ್ಯೂಜ್ವರ ಮತ್ತು ಪಶ್ಚಿಮ ನೈಲ್ ನದಿಯ ಜ್ವರವನ್ನುಂಟು ಮಾಡುವ ವೈರಾಣುಗಳಿಗೂ ಮತ್ತು ಈ ವೈರಾಣುವಿಗೂ ಸ್ವಲ್ಪ

ಮಟ್ಟಿನ ಸಾಮ್ಯತೆ ಇದೆ. ಕೋತಿಗಳಷ್ಟೇ ಅಲ್ಲದೇ ಗುಡ್ಡಬೆಟ್ಟ ಮತ್ತು ಕಾಡುಗಳಲ್ಲಿ ವಾಸಿಸುವ ಸೊಳ್ಳೆಗಳೂ ಕೂಡಾ ವೈರಾಣುಗಳ ಆಕರಗಳಾಗಿವೆ.

ಸೋಂಕಿನ ಮೂಲ

ಪಿಡುಗು ಉದ್ಭವಿಸುವ ರೀತಿಯಿಂದ ವಿಶ್ಲೇಷಿಸಿ ಸೋಂಕಿನ ಮೂಲವನ್ನು ಪ್ರಮುಖವಾಗಿ ಎರಡು ಎಂದು ವಿಂಗಡಿಸಿದ್ದಾರೆ ವೈದ್ಯಶಾಸ್ತ್ರಜ್ಞರು.

೧. ಅರಣ್ಯ ಮೂಲ : ಅರಣ್ಯದಲ್ಲಿ ವಾಸಿಸುವ ಕೋತಿಗಳು ಸೋಂಕಿನಿಂದ ಬಳಲುತ್ತವೆ. ಅಮೆರಿಕಾ ಅರಣ್ಯ ಪ್ರದೇಶದಲ್ಲಿ ವ್ಯಾಪಿಸಿರುವ ಹೀಮೋಗಾಗಸ್ ಪ್ರಭೇದದ ಸೊಳ್ಳೆಗಳು ಮತ್ತು ಆಫ್ರಿಕಾ ಖಂಡದಲ್ಲಿನ ಅರಣ್ಯ ಪ್ರದೇಶಗಳಲ್ಲಿನ ಈಡಿಸ್ ಜಾತಿಯ ಸೊಳ್ಳೆಗಳು ಕೋತಿಯಿಂದ ಕೋತಿಗೆ ರೋಗವನ್ನು ಹರಡುತ್ತವೆ. ರೋಗಿಷ್ಠ ಕೋತಿಯನ್ನು ಸೊಳ್ಳೆಗಳು ಕಚ್ಚಿದಾಗ ಅಸಂಖ್ಯಾತ ವೈರಾಣುಗಳು ಸೊಳ್ಳೆಯ ಉದರವನ್ನು ಸೇರುತ್ತವೆ. ಇಂತಹ ಸೊಳ್ಳೆಗಳು ಕಾಡಿನಲ್ಲಿ ಓಡಾಡುವ ಜನರಿಗೆ ಕಚ್ಚಿ ವೈರಾಣುಗಳನ್ನು ದೇಹದೊಳಗೆ ತೂರಿಸುತ್ತವೆ. ಕಾಡಿನಿಂದ ಸೌದೆ, ಜೇನು, ಗೆಡ್ಡೆ-ಗೆಣಸುಗಳನ್ನು ತರುವಾಗ ತನಗರಿಯದ ರೀತಿಯಲ್ಲಿ ವೈರಾಣುಗಳನ್ನು ಕೂಡಾ ತಂದಿರುತ್ತಾರೆ! ಇತರ ಜನರಿಗೆ ಸೊಳ್ಳೆಯ ಮುಖಾಂತರ ರೋಗ ವರ್ಗಾವಣೆಯಾಗುತ್ತದೆ. ಈ ಪ್ರಕಾರದ ಸೋಂಕಿಗೆ 'ಜಂಗಲ್ ಹಳದೀ ಜ್ವರ' ಎಂದು ಹೆಸರಿಸಲಾಗಿದೆ.

೨. ನಗರಮೂಲ : ನಗರ ಪ್ರದೇಶದಲ್ಲಿ ವಾಸಿಸುವ ಮನುಷ್ಯರಿಗೆ ಆಕಸ್ಮಿಕವಾಗಿ ಅದ್ಯಾವುದೋ ರೀತಿಯಲ್ಲಿ ಸೋಂಕು ಉಂಟಾಗಿಬಿಡುತ್ತದೆ. ಬೇಗನೇ ಈಡಿಸ್ ಸೊಳ್ಳೆಗಳು ರೋಗಿಯನ್ನು ಕಚ್ಚಿ ರೋಗ ಪ್ರಸಾರ ಮಾಡಿಬಿಡುವುವು. ಒಮ್ಮೊಮ್ಮೆ ಕೋತಿಗಳು ಕಾಡಂಚಿನಿಂದ ನಾಡಿಗೆ ಬಂದು ಬಿಟ್ಟಿರುತ್ತವೆ. ಸೋಂಕು ಇರುವ ಕೋತಿಯ ಆಗಮನದಿಂದ ಪ್ರದೇಶದ ಜನರಿಗೆ ಸೋಂಕಿನ ಬಳುವಳಿವುಂಟಾಗಿ ಬಿಡುತ್ತದೆ.

ರೋಗ ಲಕ್ಷಣಗಳು


ವೈರಾಣುಗಳು ದೇಹವನ್ನು ಸೇರಿದ ೩ ರಿಂದ ೬ ದಿನಗಳಲ್ಲಿ ರೋಗದ ಲಕ್ಷಣಗಳು ವ್ಯಕ್ತವಾಗುತ್ತವೆ. ಮೈಕೈನೋವು, ತಲೆನೋವು ಜ್ವರಗಳಿಂದ ಪ್ರಾರಂಭವಾಗುವ ವ್ಯಾಧಿ ಸ್ವರೂಪದಲ್ಲಿ ವಾಂತಿ ಕೂಡಾ ಸಂಗಾತಿಯಾಗಿರುತ್ತದೆ. ಕಣ್ಣು ಕೆಂಪಾಗುವಿಕೆ. ಮುಖ ಕೆಂಪೇರುವುದು ಸಾಮಾನ್ಯ. ಜ್ವರವು ತೀವ್ರ ಸ್ವರೂಪದ್ದಾಗಿದ್ದು ನಾಡೀಗತಿಯ ಕಡಿಮೆಯಾಗಿರುತ್ತದೆ. ಜ್ವರದ ವೇಗಕ್ಕೆ ನಾಡೀ ಗತಿಯು ತಾಳೆ ಹೊಂದುವುದಿಲ್ಲ. ಇದೊಂದು ವೈಶಿಷ್ಟತೆ ಈ ಸೋಂಕಿನಲ್ಲಿರುತ್ತದೆ. ಹೃದಯದ ಬಡಿತಕ್ಕೂ ಜ್ವರಕ್ಕೂ ಅಸಮಾನತೆ ಇರುವುದು. ಮಕ್ಕಳಲ್ಲಾಗಿದ್ದರೆ ಸೆಳೆತ, ಬಾಯಿಹುಣ್ಣು, ವಸಡು, ಮೂಗಿನಿಂದ ರಕ್ತಸ್ರಾವ, ಹೊಟ್ಟೆ ಮತ್ತು ಕರುಳುಗಳಲ್ಲಿ ರಕ್ತಸ್ರಾವವುಂಟಾಗುವುದು. ವಾಂತಿಯು ಕಾಫಿ ಬಣ್ಣದ್ದೂ ಮಲವು ಕಪ್ಪು ಮಿಶ್ರಿತವಾಗಿರುತ್ತವೆ. ಮೇಲಿನ ಕೆಲವು ಲಕ್ಷಣಗಳು ಡೆಂಗ್ಯೂ ಜ್ವರದ ಲಕ್ಷಣಗಳನ್ನೇ ಹೋಲುತ್ತವೆ. ದೇಹದೊಳಗೆ ಸೇರಿದ ಕ್ರಿಮಿಗಳು (ವೈರಾಣುಗಳು) ಹಾಲ್ರಸ ಗ್ರಂಥಿಗಳ ಸ್ರಾವದೊಂದಿಗೆ ಸೇರಿಕೊಂಡು ಸರ್ವಶರೀರದಲ್ಲಿ

ಸಂತರಿಸುತ್ತಾ ರಕ್ತದೊಂದಿಗೆ ಮಿಶ್ರವಾಗಿ ಯಕೃತ್, ಮೂತ್ರಪಿಂಡಗಳು ಮತ್ತು ಮೂಳೆಗಳ ಒಳಭಾಗದಲ್ಲಿರುವ ಮಜ್ಜೆಗಳಲ್ಲಿ ಆಶ್ರಯಪಡೆದು ಅಲ್ಲೆಲ್ಲಾ ಹಾನಿಯನ್ನುಂಟುಮಾಡುತ್ತವೆ. ಚರ್ಮ ಮತ್ತು ಶ್ಲೇಷ್ಮಲ ಪೊರೆಗಳು ಹಳದಿ ಬಣ್ಣಕ್ಕೆ ತಿರುಗುತ್ತವೆ. ಅಭ್ಯಂತರ ರಕ್ತಸ್ರಾವವಾಗುವುದು. ಹೀಗಾಗಿ ಇದಕ್ಕೆ ಹಳದಿಜ್ವರ ಎಂದು ಹೆಸರಿಟ್ಟಿದ್ದಾರೆ. ಮೂರ್‍ನಾಲ್ಕು ದಿನಗಳಲ್ಲಿ ಜ್ವರಾದಿ ಲಕ್ಷಣಗಳು ಸ್ವಯಂ ಕಡಿಮೆಯಾಗುವುವು. ಒಂದೆರೆಡು ದಿನಗಳ ಬಳಿಕ ಜ್ವರ ಮತ್ತೆ ಪುನರಾರಂಭವಾಗುವುದು. ಶರೀರದಿಂದ ಲವಣಾಂಶಗಳು ಅಧಿಕವಾಗಿ ಮೂತ್ರದ ಮುಖಾಂತರ ಹೊರಹೋಗುವುವು. ಮೂತ್ರದ ಪ್ರಮಾಣದಲ್ಲಿ ಇಳಿಮುಖವಾಗುವುದು. ಹೆಂಗಸರಲ್ಲಿ ಯೋನಿಯಿಂದ ರಕ್ತಸ್ರಾವವಾಗಬಹುದು. ಸಕಾಲದಲ್ಲಿ ರೋಗ ನಿರ್ಣಯವಾಗದೇ ಸೂಕ್ತ ಔಷಧೋಪಚಾರ ದೊರೆಯದಿದ್ದರೆ ಲಕ್ಷಣಗಳ ತೀವ್ರತೆಯಿಂದ ರೋಗಿ ನಿತ್ರಾಣ ಹೊಂದಿ ಜ್ಞಾನ ತಪ್ಪಬಹುದು. ಮುಂದುವರೆದಲ್ಲಿ ಮರಣವೂ ಸಂಭವಿಸಬಹುದು.

ರೋಗ ನಿಶ್ಚಯ : ಸೋಂಕು ತೀವ್ರವಾಗಿದ್ದಾಗ ಡೆಂಗ್ಯೂ ಜ್ವರದ ಲಕ್ಷಣಗಳನ್ನೇ ಹೋಲುತ್ತದೆಯಾದುದರಿಂದ ಮೂತ್ರ ಮತ್ತು ರಕ್ತ ಪರೀಕ್ಷೆಗಳನ್ನು ಮಾಡಿ ನಿಶ್ಚಯ ಮಾಡಬೇಕಾದ ಪರಿಸ್ಥಿತಿಯಿದೆ. ಮೂತ್ರದಲ್ಲಿ ಉಪ್ಪು ಮತ್ತು ಪ್ರೋಟೀನಿನ ಅಂಶಗಳು ಇರುವಿಕೆ, ಮೂತ್ರದ ಒಟ್ಟಾರೆ ಪ್ರಮಾಣದಲ್ಲಿ ಇಳಿಮುಖವಾಗಿರುವುದು, ಬಿಳಿರಕ್ತಕಣಗಳ ಪ್ರಮಾಣದಲ್ಲಿ ಕಡಿಮೆಯಾಗಿರುವುದು. ಹಾಲ್ರಸ ಕಣಗಳು ಕೂಡಾ ಕಡಿಮೆಯಾಗಿರುವುದು ಎಲ್ಲವೂ ರೋಗ ನಿರ್ಣಯದ ಹತ್ತಿರಕ್ಕೆ ಕೊಂಡೊಯ್ಯುತ್ತದೆ. ಆದಾಗ್ಯೂ ಪ್ರಯೋಗಾಲಯದಲ್ಲಿ

ರಕ್ತದಿಂದ ವೈರಾಣುಗಳನ್ನು ಪ್ರತ್ಯೇಕಿಸುವುದು ಮತ್ತು ಶರೀರದಲ್ಲಿರುವ ರೋಗದ ವಿರುದ್ಧ ಹೋರಾಡುವ ಪ್ರತಿಕಾಯಗಳ (ಆಂಟಿಬಾಂಡೀಸ್) ಉತ್ಪತ್ತಿ ಮತ್ತು ಉಪಸ್ಥಿತಿಗಳಿಂದ ರೋಗದ ದೃಢನಿರ್ಧಾರ ಸಾಧ್ಯ.

ಚಿಕಿತ್ಸೆ : ರೋಗಿಯನ್ನು ಆಸ್ಪತ್ರೆಗೆ ದಾಖಲಿಸಿ ಉಪಚರಿಸಬೇಕು. ವಿಶ್ರಾಂತಿ, ದ್ರವಾಹಾರ ಪೂರೈಕೆ, ಗ್ಲೂಕೋಸು ದ್ರಾವಣದ ಅಳವಡಿಕೆಗಳಿಂದ ಪ್ರಾರಂಭಿಸುವ ಚಿಕಿತ್ಸಾಕ್ರಮಗಳನ್ನು ಮುಂದುವರೆಸಬೇಕು. ಸೋಂಕು ವೈರಾಣುಜನಿತವಾದುದರಿಂದ ವೈರಾಣು ನಾಶಪಡಿಸುವಂತಹ ಔಷಧಿ ಚಿಕಿತ್ಸೆ ಇಲ್ಲ. ಸೋಂಕಿನ ತೀವ್ರತೆಯಿಂದ ಉಂಟಾಗುವ ಅಡ್ಡಪರಿಣಾಮಗಳನ್ನು ತಡೆಗಟ್ಟುವ ಸಲುವಾಗಿ ರೋಗಿಗೆ ೧ ವರಸೆ (ಕೋರ್ಸ್) ನಂಜು ನಿವಾರಕ ಔಷಧಿಗಳನ್ನು ನೀಡಲಾಗುವುದು. ಮಿಕ್ಕಂತೆ ಲಕ್ಷಣಗಳಿಗೆ ಚಿಕಿತ್ಸೆ ಮಾಡಬೇಕು. ಜ್ವರ ಕಡಿಮೆಮಾಡಲು ಜ್ವರಹರ, ನೋವು ನಿವಾರಕ ಔಷಧಿಗಳನ್ನು ನೀಡಬೇಕು.



ಮುನ್ನೆಚ್ಚರಿಕೆ ಕ್ರಮಗಳು

1. ಸೊಳ್ಳೆಗಳ ಕಡಿತದಿಂದ ತಪ್ಪಿಸಿಕೊಳ್ಳಬೇಕು.
2. ಈ ಸೋಂಕು ಬಾರದಂತೆ ತಡೆಗಟ್ಟುವ ಯಶಸ್ವೀ ಲಸಿಕೆಯು ಲಭ್ಯವಿದೆ. ಲಸಿಕೆಗಳನ್ನು ತೆಗೆದುಕೊಳ್ಳಬೇಕು.
3. ಕಾಡಿನಿಂದ ನುಸುಳುವ ಕೋತಿಗಳನ್ನು ಓಡಿಸಬೇಕು.

ಸೊಳ್ಳೆಗಳ ನಿಯಂತ್ರಣ ಕ್ರಮಗಳು

ಮಲೇರಿಯಾ ಮೊದಲಾದ ರೋಗಗಳಿಂದ ನಾವು ತಪ್ಪಿಸಿಕೊಳ್ಳಬೇಕಾದರೆ ರೋಗಕಾರಕ ಕ್ರಿಮಿಗಳನ್ನು ತನ್ನೊಡನೆ ಹೊತ್ತುಕೊಂಡು ಹಾರಾಡುವ ಸೊಳ್ಳೆಗಳ ಮೇಲೆ ನಿಯಂತ್ರಣ ಅಥವಾ ಹತೋಟಿಯನ್ನು ಸಾಧಿಸಲೇಬೇಕಾದ ಅನಿವಾರ್ಯತೆ ಮನುಷ್ಯನಿಗಿದೆ. ಹತೋಟಿಗೆ ಮನುಷ್ಯ ರೂಪಿಸಿರುವ ವಿಧಾನಗಳನ್ನು ಸೊಳ್ಳೆಗಳು ಕೆಲಮಟ್ಟಿಗೆ ಅರಿತುಕೊಂಡು ತಪ್ಪಿಸಿಕೊಂಡು ಬದುಕುವ ರೀತಿಯನ್ನು ಕಂಡುಕೊಂಡುಬಿಟ್ಟಿವೆ! ಹಾಗಾಗಿ ನಾವು ಕೈಗೊಳ್ಳುವ ಕ್ರಮಗಳಲ್ಲಿ ಕಾಲಕಾಲಕ್ಕೆ ಬದಲಾವಣೆಗಳನ್ನು ಮತ್ತು ಒಂದೇ ಕಾಲದಲ್ಲಿ ಒಂದಕ್ಕಿಂತ ಹೆಚ್ಚು ಹತೋಟಿ ಕ್ರಮಗಳನ್ನು ಒಟ್ಟಿಗೇ ಅಳವಡಿಸಬೇಕಾಗಿದೆ. ಸೊಳ್ಳೆಗಳ ನಿಯಂತ್ರಣ ಕ್ರಮಗಳನ್ನು ಫಲಕಾರಿಯನ್ನಾಗಿ ಮಾಡಬೇಕಾದರೆ ಸೊಳ್ಳೆಯ ಜೀವನ ಶೈಲಿ, ಚಕ್ರಗಳ ಜ್ಞಾನ ಅತ್ಯಾವಶ್ಯಕ. ಮೂರು ವಿಧಾನಗಳಿಂದ ಸೊಳ್ಳೆಗಳ ಮೇಲೆ ಹತೋಟಿ ಸಾಧಿಸಬಹುದು. ಅವುಗಳೆಂದರೆ,

I. ಲಾರ್ವಾ ಅವಸ್ಥೆಯ ಮೇಲೆ ಸಾಧಿಸುವ ನಿಯಂತ್ರಣ : ಈಗಾಗಲೇ ತಿಳಿದಿರುವಂತೆ ಲಾರ್ವಾ ಅವಸ್ಥೆಯಿಂದ ಪ್ಯೂಪಾ ಅಲ್ಲಿಂದ ಮುಂದೆ ಮರಿಸೊಳ್ಳೆ ಹಂತಗಳುಂಟಾಗುತ್ತವೆ. ಮರಿಸೊಳ್ಳೆಯಾಗಿ ಪ್ರೌಢವಾಗಿ ನಮ್ಮನ್ನು ಕಚ್ಚುವ ಮೊದಲೇ ಸಾಯಿಸುವ ಯೋಜನೆಯೇ ಇದು. ಇದಕ್ಕಾಗಿ ರಾಸಾಯನಿಕ ಪದಾರ್ಥಗಳನ್ನು ಉಪಯೋಗಿಸುವುದು; ಮತ್ತು ಕೆಲವು ನೈಸರ್ಗಿಕ ಕ್ರಮಗಳನ್ನು ಅಳವಡಿಸುವುದು.

ರಾಸಾಯನಿಕ ಪದಾರ್ಥಗಳ ಬಳಕೆ : ಕೆಳ ಕಾಣಿಸಿದ ರಾಸಾಯನಿಕ ಪದಾರ್ಥಗಳನ್ನು ಸೂಕ್ತ ರೀತಿಯಲ್ಲಿ ಬಳಸಿದರೆ ಲಾರ್ವಾಗಳನ್ನು ನಿರ್ಮೂಲನೆ ಮಾಡಬಹುದು.

೧. ಖನಿಜ ತೈಲ : ಲಾರ್ವಾಗಳು ವಾಸಿಸುವ ನೀರಿನ ಆಕರಗಳಿಗೆ ಖನಿಜ ತೈಲವನ್ನು ಸಿಂಪಡಿಸುವಿಕೆ. ಇದರಿಂದ ನೀರಿನ ಮೇಲ್ಭಾಗದಲ್ಲಿ ಒಂದು ತೆಳುವಾದ ತೈಲದ ಪದರ ಉಂಟಾಗುವುದು. ಈ ಪದರವು ಆಮ್ಲಜನಕವನ್ನು ನೀರಿನೊಳಗೆ ಹೋಗದಂತೆ ತಡೆಯುವುದು. ಇದರಿಂದ ಲಾರ್ವಾಗಳು ಉಸಿರಾಟಕ್ಕೆ ತೊಂದರೆಯುಂಟಾಗಿ ನಾಶಗೊಳ್ಳುತ್ತವೆ. ಸೀಮೆಎಣ್ಣೆ, ಡೀಸೆಲ್ ಅಥವಾ ಯಾವುದೇ ಬಗೆಯ ಎಣ್ಣೆಯನ್ನು ನೀರಿನಲ್ಲಿ ಸಿಂಪಡಿಸಬಹುದು. ನೀರನ್ನು ಕುಡಿಯುವ ಸಲುವಾಗಿ ಬಳಸುವಂತಹದ್ದಾಗಿದ್ದರೆ ಅಥವಾ ಬೇರೆ ಇತರ ಪ್ರಾಣಿಗಳು ಜಲಚರಗಳು ವಾಸಿಸುತ್ತಿದ್ದರೆ ಇಂತಹ ನೀರಿನ ಆಸರೆಗೆ ತೈಲವನ್ನು ಬಳಸಬಾರದು.

೨. ಪ್ಯಾರಿಸ್‌ಗ್ರೀನ್ ಪುಡಿ (ಕಾಪರ್ ಅಸಿಟೋ ಆರ್ಸನೈಟ್) : ೯೮ ಕೆ.ಜಿ. ಸುಣ್ಣದ ಪುಡಿಗೆ ೨೦ ಗ್ರಾಂ ಪ್ಯಾರಿಸ್ ಗ್ರೀನ್ ಪುಡಿಯನ್ನು ಮಿಶ್ರಮಾಡಿ ನೀರಿಗೆ ಸಿಂಪಡಿಸಬೇಕು. ಈ ಪುಡಿಯು ನೀರಿನಲ್ಲಿ ಕರಗುವುದಿಲ್ಲ. ಸೂಕ್ಷ್ಮ ಪುಡಿಯು ಸೊಳ್ಳೆಯ ಲಾರ್ವಾಗಳನ್ನು ಆಕರ್ಷಿಸುತ್ತವೆ. ಪುಡಿಯ ಕಣಗಳನ್ನು ತಿಂದ ಲಾರ್ವಾಗಳ ಉದರದಲ್ಲಿ ವಿಷದ ಪ್ರಭಾವವುಂಟಾಗಿ ಲಾರ್ವಾಗಳು ನಾಶಹೊಂದುತ್ತವೆ. ಪ್ಯಾರಿಸ್‌ಗ್ರೀನ್ ಪುಡಿಯನ್ನು ೧ ಹೆಕ್ಟೇರ್ ನೀರಿನ ಸೆಲೆಗೆ ೧ ಕೆ.ಜಿ. ಪ್ರಮಾಣದಲ್ಲಿ ಉಪಯೋಗಿಸಬೇಕಾಗುತ್ತದೆ. ಈ ಪ್ರಮಾಣವು

ಲಾರ್ವಾಗಳಿಗೆ ಮಾರಕವಾಗಿದೆ. ಈ ಪ್ರಮಾಣವು ನೀರಿನಲ್ಲಿರುವ, ಮೀನು ಕಪ್ಪೆಗಳಿಗಾಗಲೀ ಮತ್ತು ಮನುಷ್ಯನಿಗಾಗಲೀ ಅಥವಾ ದನಕರುಗಳಿಗಾಗಲೀ ಹಾನಿಕರವಾಗಿರುವುದಿಲ್ಲ. ಆದುದರಿಂದ ಇದರ ಬಳಕೆ ಯಶಸ್ವಿಯಾಗಿ ಲಾರ್ವಾಗಳನ್ನು ನಾಶಪಡಿಸುತ್ತದೆ.

೩. **ಕೃತ್ರಿಮ ರಾಸಾಯನಿಕ ಪದಾರ್ಥಗಳ (ಸಿಂಥೆಟಿಕ್ ಪದಾರ್ಥಗಳು) ಬಳಕೆ :** ಫೆಂಥಿಯಾನ್, ಕ್ಲೋರೋಪೈರಿಫಾಸ್, ಅಬೇಟ್ ಎಂಬ ಪದಾರ್ಥಗಳು ನಿಗದಿತ ಪ್ರಮಾಣದಲ್ಲಿ ಬಳಕೆ ಮಾಡಿದರೆ ಪರಿಣಾಮಕಾರಿಯಾಗಿ ಲಾರ್ವಾಗಳನ್ನು ನಾಶಪಡಿಸುತ್ತವೆ. ಮನುಷ್ಯನಿಗೆ ಪ್ರಾಣಾಪಾಯವನ್ನುಂಟು ಮಾಡುವುದರಿಂದ ಮತ್ತು ಬಲು ಬೇಗನೇ ನೀರು ಕಲುಷಿತಗೊಳ್ಳುವುದರಿಂದ ಸಿಂಥೆಟಿಕ್ ಪದಾರ್ಥಗಳನ್ನು ಹೆಚ್ಚಾಗಿ ಬಳಸಲು ಶಿಫಾರಸ್ಸು ಮಾಡುವುದಿಲ್ಲ.

II ಪರಿಸರವನ್ನು ಶುಚಿಯಾಗಿಡುವುದು : ಸೊಳ್ಳೆಗಳು ಸಾಮಾನ್ಯವಾಗಿ ವಾಸಿಸುವ ತಗ್ಗುಪ್ರದೇಶಗಳು, ಹಳ್ಳ ಗುಂಡಿಗಳು, ಬಿಲ ಪೊಟರೆಗಳನ್ನು ಮುಚ್ಚಬೇಕು. ತ್ಯಾಜ್ಯಗಳನ್ನು ಸೂಕ್ತ ಸ್ಥಳಗಳಲ್ಲಿ ಶೇಖರಿಸಿ ಸಕಾಲದಲ್ಲಿ ವಿಲೇವಾರಿ ಮತ್ತು ನಾಶಮಾಡಬೇಕು. ವಾಸಿಸುವ ಮನೆಯ ಒಳಭಾಗಗಳು, ಕಿಟಕಿ, ಬಾಗಿಲು, ಪೀಠೋಪಕರಣಗಳ ಸಂಧಿಗೊಂದಿಗಳು, ಹೂದಾನಿ, ಕಾರಂಜಿಗಳು, ಕತ್ತಲೆ ಪ್ರದೇಶಗಳು ಎಲ್ಲವನ್ನು ಶುಚಿಗೊಳಿಸುತ್ತಿರಬೇಕು. ಸುತ್ತಮುತ್ತಲ ಪ್ರದೇಶಗಳನ್ನೇ ಶುಚಿಯಾಗಿಡಬೇಕು. ಪರಿಸರದಲ್ಲಿ ಒಡೆದ ಮಡಿಕೆ ಚೂರು, ಪ್ಲಾಸ್ಟಿಕ್ ಚೂರು, ಹಳೆಯ ಟೈರು, ತೆಂಗಿನ ಚಿಪ್ಸ್ (ಕಂಟ) ಇತ್ಯಾದಿಗಳು ಇರದಂತೆ ಶುಚಿಗೊಳಿಸುತ್ತಿರಬೇಕು.

ದನದಕೊಟ್ಟಿಗೆ, ನೀರಿನ ತೊಟ್ಟಿಗಳನ್ನು ಆಗಾಗ್ಗೆ ಶುಚಿಗೊಳಿಸುತ್ತಿರಬೇಕು. ಸುತ್ತಮುತ್ತಲಲ್ಲಿ ನೀರು ನಿಲ್ಲದಂತೆ ಎಚ್ಚರವಹಿಸಬೇಕು ಕೆರೆ ಹೊಂಡಗಳಲ್ಲಿ ಜಲಸಸ್ಯಗಳನ್ನು (ಪಾಚಿ ಇತ್ಯಾದಿ) ಕಿತ್ತು ಹಾಕಬೇಕು. ಮೇಲೆ ತಿಳಿಸಿರುವ ಪ್ರದೇಶ ಅವಕಾಶಗಳನ್ನೆಲ್ಲಾ ಸೊಳ್ಳೆಯ ಆಕರ (Source) ಗಳೆಂದೇ ಪರಿಗಣಿಸಬೇಕು. ಆಕರಗಳ ನೈರ್ಮಲ್ಯವನ್ನು ಕಾಪಾಡಿದರೆ ಅಥವಾ ಕೆಲವು ಸಂದರ್ಭಗಳಲ್ಲಿ ಅವುಗಳನ್ನು ನಾಶಮಾಡುವುದೇ ಆದರೆ ಮಾತ್ರ ಸೊಳ್ಳೆ ನಿಯಂತ್ರಣ ಸಾಧ್ಯ.

III ಜೈವಿಕ ನಿಯಂತ್ರಣ : ಕಪ್ಪೆ, ಗಂಬೂಸಿಯಾ ಮತ್ತು ಲೆಬಿಸ್ಟರ್ ಎಂಬ ಜಾತಿಯ ಮೀನುಗಳು ಸೊಳ್ಳೆಯ ಲಾರ್ವಾಗಳನ್ನು ತಿಂದು ಬದುಕುತ್ತವೆ. ಇಂತಹ ಮೀನುಗಳನ್ನು ಕಾರಂಜಿ, ಬುಗ್ಗೆ, ತೋಟದ ಬಾವಿ, ನೀರಿನ ತೊಟ್ಟಿ, ಹಳ್ಳಕೊಳ್ಳ, ಕೆರೆ ಬಾವಿಗಳಲ್ಲಿ ಸಾಕುವುದರಿಂದ ಲಾರ್ವಾಗಳನ್ನು ನಾಶಪಡಿಸಬಹುದು.

ಪ್ರೌಢ ಸೊಳ್ಳೆಗಳ ನಿಯಂತ್ರಣ

ಮನೆಯ ಒಳಭಾಗ ಮತ್ತು ಹೊರಗಿನ ವಾತಾವರಣದಲ್ಲಿರುವ ಪ್ರೌಢ ಸೊಳ್ಳೆಗಳನ್ನು ನಾಶಮಾಡಲು ಕ್ರಮ ಕೈಗೊಳ್ಳಬೇಕು.

(ಅ) ಮನೆಯ ಒಳಭಾಗದಲ್ಲಿರುವ ಸೊಳ್ಳೆಗಳ ನಿಯಂತ್ರಣ : ೧ ಚದರ ಮೀಟರ್ ವ್ಯಾಪ್ತಿ ಪ್ರದೇಶಕ್ಕೆ ೧ ರಿಂದ ೨ ಗ್ರಾಂನಷ್ಟು ಪ್ರಮಾಣದ ಶುದ್ಧ ಡಿಡಿಟಿಯನ್ನು ಮಿಶ್ರಿಸಿ ವಾಸಿಸುವ ಮನೆಯ ಒಳಭಾಗಗಳಲ್ಲಿ ಮತ್ತು ದನದ ಕೊಟ್ಟಿಗೆಗೆ ವರ್ಷಕ್ಕೆ ಕನಿಷ್ಠ ೩

ಬಾರಿಯಂತೆ ಸಿಂಪಡಿಸಬೇಕು ಇದು ಫಲಪ್ರದವಾಗಿ ಕೆಲಸಮಾಡುತ್ತದೆ. ಡಿಡಿಟಿಗೆ ಸೊಳ್ಳೆಗಳು ಬಗ್ಗದಿದ್ದರೆ ಮೆಲಾಥಿನ್ ಅಥವಾ ಪ್ರೊಪಕ್ಸರ್ ರಾಸಾಯನಿಕಗಳನ್ನು ಬಳಸಬೇಕು.

(ಆ) ಹೊರವಾತಾವರಣದಲ್ಲಿರುವ ಸೊಳ್ಳೆಗಳನ್ನು ಕೊಲ್ಲಲು ಪೈರಥ್ರಿಮ್ ಎಂಬ ಹೂಗಳು ಸಹಕಾರಿಯಾಗಿವೆ. ಹೂಗಳನ್ನು ಚೆನ್ನಾಗಿ ಒಣಗಿಸಿ ಪುಡಿಮಾಡಿ ವಾತಾವರಣದಲ್ಲಿ ಸಿಂಪಡಿಸಬೇಕು. ಕೈಪಂಪು ಮೂಲಕ ಸಿಂಪಡಿಸಿದಾಗ ಪುಡಿಕಣಗಳು ಅತ್ಯಂತ ಸೂಕ್ಷ್ಮವಾಗಿರುವುದರಿಂದ ವಾತಾವರಣದಲ್ಲಿ ಹರಡಿಕೊಂಡು ಒಂದು ರೀತಿಯ ಮಂಜು ಕವಿದಂತೆ ಅಥವಾ ಹೊಗೆ ಹಾಕಿದ ರೀತಿ ಕಾಣಿಸುತ್ತದೆ. ಹೂಗಳ ಪುಡಿಯಲ್ಲಿರುವ ಪೈರಿಥ್ರಿನ್ ಎಂಬ ಪದಾರ್ಥವು ಸೊಳ್ಳೆಗಳ ಮಿದುಳು ಮತ್ತು ನರಕೋಶಗಳನ್ನು ಘಾಸಿಗೊಳಿಸಿ ಸಾಯಿಸುತ್ತದೆ. ಒಮ್ಮೆಗೇ ಸಿಂಪಡಿಸುವುದರಿಂದ ಅಸಂಖ್ಯಾತ ಸೊಳ್ಳೆಗಳನ್ನು ನಾಶಪಡಿಸಬಹುದು. ಬಹಳಕಾಲದವರೆಗೆ ಇದರ ತೀವ್ರತೆ ವಾತಾವರಣದಲ್ಲಿರುವುದಿಲ್ಲ. ಬೇಗನೇ ತೀವ್ರತೆ ಕಡಿಮೆಯಾಗುವುದರಿಂದ ಬೇರೆ ಪ್ರದೇಶಗಳಿಂದ ಬರುವಂತಹ ಸೊಳ್ಳೆಗಳ ಮೇಲೆ ಪುಡಿಯ ಸಿಂಪರಣೆಯ ಪ್ರಭಾವ ಬೀರುವುದಿಲ್ಲ. ಮೆಲಾಥಿನ್ ಮತ್ತು ಫೆವಿಟ್ರೋಥಿಯಾನ್‌ಗಳನ್ನು ಕೂಡಾ ಇದೇರೀತಿ ಸಿಂಪಡಿಸಬಹುದು. ಈ ಕ್ರಿಯೆಗೆ ಫಾಗಿಂಗ್ ಎಂದು ಹೆಸರು.

(ಇ) ವಂಶವಾಹಿ (ಜೀನ್, Gene) ಗಳ ಮೇಲೆ ಹತೋಟಿ ಸಾಧಿಸಿ ಸೊಳ್ಳೆಗಳ ನಿಯಂತ್ರಣ ಮಾಡುವ ವಿಧಾನವು ಆಧುನಿಕ ವೈಜ್ಞಾನದ ಪ್ರಯೋಗಗಳಲ್ಲೊಂದಾಗಿದೆ. ಸೊಳ್ಳೆಯ ಶರೀರದಲ್ಲಿರುವ

ನಿರ್ದಿಷ್ಟ ವಂಶವಾಹಿ ಕೋಶಗಳನ್ನೇ ಮಾರ್ಪಡಿಸಿ ಸೊಳ್ಳೆಯ ಲೈಂಗಿಕ ಶಕ್ತಿಯನ್ನು ಕುಂಠಿತಗೊಳಿಸಿ ಸಂತಾನ ನಿಯಂತ್ರಣ ಮಾಡುವಿಕೆ ಈ ಪ್ರಯೋಗಗಳ ಗುರಿ.


ವೈಯಕ್ತಿಕ ರಕ್ಷಣೆ

ಹೀಗೆ ಏನೆಲ್ಲಾ ಉಪಾಯಗಳನ್ನು ಅಳವಡಿಸುತ್ತಾ ಬಂದಿದ್ದರೂ ಮನುಷ್ಯನಿಗೆ ಸವಾಲು ಎಸೆಯುವಂತೆ ಸೊಳ್ಳೆಗಳ ಕಡಿತದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಲಾರ್ವಾಗಳ ಸಂಪೂರ್ಣ ನಾಶಪಡಿಸುವಿಕೆಯಾಗಲಿ, ಪ್ರೌಢಸೊಳ್ಳೆಗಳ ನಾಶ ಮತ್ತು ರೋಗ ಹರಡುವಿಕೆಯನ್ನು ತಡೆಗಟ್ಟುವಿಕೆಗಳು ಎಲ್ಲವೂ ಮನುಷ್ಯನ ಕೈಗೆ ಸಂಪೂರ್ಣವಾಗಿ ನಿಲುಕಿಲ್ಲ. ಪ್ರೌಢ ಸೊಳ್ಳೆಗಳಿಂದ ಕಚ್ಚಿಸಿಕೊಳ್ಳುವುದರಿಂದ ತಪ್ಪಿಸಿಕೊಳ್ಳಲು ಕೆಲವು ಇತರ ಕ್ರಮಗಳನ್ನು ಕೈಗೊಳ್ಳಲೇಬೇಕು.

ಮೈತುಂಬಾ ಬಟ್ಟೆ ಧರಿಸುವುದು : ಸೊಳ್ಳೆಗಳು ಚರ್ಮದ ಮೇಲೆ ಕುಳಿತು ಕಚ್ಚುವುದರಿಂದ ಸಾಧ್ಯವಾದಷ್ಟು ವೇಳೆ ಮೈ ತುಂಬಾ ಬಟ್ಟೆ ಧರಿಸಬೇಕು.




ಸೊಳ್ಳೆ ಪರದೆಯ ಒಳಗೆ ಮಲಗುವುದು



ಹಳ್ಳ-ಗುಂಡಿಗಳನ್ನು ಮುಚ್ಚುತ್ತಿರುವುದು



ನೀರಿನ ಆಸರೆಗೆ ಗಂಬೂಸಿಯಾ, ಗಪ್ಪಿ ಮೀನುಗಳನ್ನು
ಬಿಡುತ್ತಿರುವುದು



ಮನೆಯ ಉಪಕರಣಗಳನ್ನು ಶುಚಿಗೊಳಿಸುತ್ತಿರುವುದು

ಸೊಳ್ಳೆಪರದೆಯ ಉಪಯೋಗ : ಸುಲಭವಾದ ಮತ್ತು ಹೆಚ್ಚು ಪರಿಣಾಮಕಾರಿಯಾದ ವಿಧಾನ. ಹಗಲಿನ ವೇಳೆಯಲ್ಲಾಗಲೀ ಅಥವಾ ರಾತ್ರಿವೇಳೆಯಲ್ಲಾಗಲೀ ಮನೆಯ ಒಳಗಡೆ ಮಲಗುವಾಗ ಸೊಳ್ಳೆಪರದೆಯನ್ನು ಕಟ್ಟಿ ಅದರೊಳಗೆ ಮಲಗಬೇಕು.

ಜಾಲರಿಗಳನ್ನು ಜೋಡಿಸುವುದು : ಕಟ್ಟಡಗಳಲ್ಲಿರುವ ಕಿಟಕಿ ಬಾಗಿಲುಗಳಿಗೆ ಮತ್ತು ಗಾಳಿ ಆಡುವ ಅವಕಾಶವಿರುವೆಡೆಯಲ್ಲೆಲ್ಲಾ ಸೂಕ್ಷ್ಮ ರಂಧ್ರಗಳಿರುವ ಕಬ್ಬಿಣದ ಅಥವಾ ಪ್ಲಾಸ್ಟಿಕ್‌ಗಳಿಂದ

ಸೊಳ್ಳೆಗಳ ನಿಯಂತ್ರಣ ಕ್ರಮಗಳು

ಮಲೇರಿಯಾ ಮೊದಲಾದ ರೋಗಗಳಿಂದ ನಾವು ತಪ್ಪಿಸಿಕೊಳ್ಳಬೇಕಾದರೆ ರೋಗಕಾರಕ ಕ್ರಿಮಿಗಳನ್ನು ತನ್ನೊಡನೆ ಹೊತ್ತುಕೊಂಡು ಹಾರಾಡುವ ಸೊಳ್ಳೆಗಳ ಮೇಲೆ ನಿಯಂತ್ರಣ ಅಥವಾ ಹತೋಟಿಯನ್ನು ಸಾಧಿಸಲೇಬೇಕಾದ ಅನಿವಾರ್ಯತೆ ಮನುಷ್ಯನಿಗಿದೆ. ಹತೋಟಿಗೆ ಮನುಷ್ಯ ರೂಪಿಸಿರುವ ವಿಧಾನಗಳನ್ನು ಸೊಳ್ಳೆಗಳು ಕೆಲಮಟ್ಟಿಗೆ ಅರಿತುಕೊಂಡು ತಪ್ಪಿಸಿಕೊಂಡು ಬದುಕುವ ರೀತಿಯನ್ನು ಕಂಡುಕೊಂಡುಬಿಟ್ಟಿವೆ! ಹಾಗಾಗಿ ನಾವು ಕೈಗೊಳ್ಳುವ ಕ್ರಮಗಳಲ್ಲಿ ಕಾಲಕಾಲಕ್ಕೆ ಬದಲಾವಣೆಗಳನ್ನು ಮತ್ತು ಒಂದೇ ಕಾಲದಲ್ಲಿ ಒಂದಕ್ಕಿಂತ ಹೆಚ್ಚು ಹತೋಟಿ ಕ್ರಮಗಳನ್ನು ಒಟ್ಟಿಗೇ ಅಳವಡಿಸಬೇಕಾಗಿದೆ. ಸೊಳ್ಳೆಗಳ ನಿಯಂತ್ರಣ ಕ್ರಮಗಳನ್ನು ಫಲಕಾರಿಯನ್ನಾಗಿ ಮಾಡಬೇಕಾದರೆ ಸೊಳ್ಳೆಯ ಜೀವನ ಶೈಲಿ, ಚಕ್ರಗಳ ಜ್ಞಾನ ಅತ್ಯಾವಶ್ಯಕ. ಮೂರು ವಿಧಾನಗಳಿಂದ ಸೊಳ್ಳೆಗಳ ಮೇಲೆ ಹತೋಟಿ ಸಾಧಿಸಬಹುದು. ಅವುಗಳೆಂದರೆ,

I. ಲಾರ್ವಾ ಅವಸ್ಥೆಯ ಮೇಲೆ ಸಾಧಿಸುವ ನಿಯಂತ್ರಣ : ಈಗಾಗಲೇ ತಿಳಿದಿರುವಂತೆ ಲಾರ್ವಾ ಅವಸ್ಥೆಯಿಂದ ಪ್ಯೂಪಾ ಅಲ್ಲಿಂದ ಮುಂದೆ ಮರಿಸೊಳ್ಳೆ ಹಂತಗಳುಂಟಾಗುತ್ತವೆ. ಮರಿಸೊಳ್ಳೆಯಾಗಿ ಪ್ರೌಢವಾಗಿ ನಮ್ಮನ್ನು ಕಚ್ಚುವ ಮೊದಲೇ ಸಾಯಿಸುವ ಯೋಜನೆಯೇ ಇದು. ಇದಕ್ಕಾಗಿ ರಾಸಾಯನಿಕ ಪದಾರ್ಥಗಳನ್ನು ಉಪಯೋಗಿಸುವುದು; ಮತ್ತು ಕೆಲವು ನೈಸರ್ಗಿಕ ಕ್ರಮಗಳನ್ನು ಅಳವಡಿಸುವುದು.

ರಾಸಾಯನಿಕ ಪದಾರ್ಥಗಳ ಬಳಕೆ : ಕೆಳ ಕಾಣಿಸಿದ ರಾಸಾಯನಿಕ ಪದಾರ್ಥಗಳನ್ನು ಸೂಕ್ತ ರೀತಿಯಲ್ಲಿ ಬಳಸಿದರೆ ಲಾರ್ವಾಗಳನ್ನು ನಿರ್ಮೂಲನೆ ಮಾಡಬಹುದು.

೧. ಖನಿಜ ತೈಲ : ಲಾರ್ವಾಗಳು ವಾಸಿಸುವ ನೀರಿನ ಆಕರಗಳಿಗೆ ಖನಿಜ ತೈಲವನ್ನು ಸಿಂಪಡಿಸುವಿಕೆ. ಇದರಿಂದ ನೀರಿನ ಮೇಲ್ಭಾಗದಲ್ಲಿ ಒಂದು ತೆಳುವಾದ ತೈಲದ ಪದರ ಉಂಟಾಗುವುದು. ಈ ಪದರವು ಆಮ್ಲಜನಕವನ್ನು ನೀರಿನೊಳಗೆ ಹೋಗದಂತೆ ತಡೆಯುವುದು. ಇದರಿಂದ ಲಾರ್ವಾಗಳು ಉಸಿರಾಟಕ್ಕೆ ತೊಂದರೆಯುಂಟಾಗಿ ನಾಶಗೊಳ್ಳುತ್ತವೆ. ಸೀಮೆಎಣ್ಣೆ, ಡೀಸೆಲ್ ಅಥವಾ ಯಾವುದೇ ಬಗೆಯ ಎಣ್ಣೆಯನ್ನು ನೀರಿನಲ್ಲಿ ಸಿಂಪಡಿಸಬಹುದು. ನೀರನ್ನು ಕುಡಿಯುವ ಸಲುವಾಗಿ ಬಳಸುವಂತಹದ್ದಾಗಿದ್ದರೆ ಅಥವಾ ಬೇರೆ ಇತರ ಪ್ರಾಣಿಗಳು ಜಲಚರಗಳು ವಾಸಿಸುತ್ತಿದ್ದರೆ ಇಂತಹ ನೀರಿನ ಆಸರೆಗೆ ತೈಲವನ್ನು ಬಳಸಬಾರದು.

೨. ಪ್ಯಾರಿಸ್‌ಗ್ರೀನ್ ಪುಡಿ (ಕಾಪರ್ ಅಸಿಟೋ ಆರ್ಸನೈಟ್) : ೯೮ ಕೆ.ಜಿ. ಸುಣ್ಣದ ಪುಡಿಗೆ ೨೦ ಗ್ರಾಂ ಪ್ಯಾರಿಸ್ ಗ್ರೀನ್ ಪುಡಿಯನ್ನು ಮಿಶ್ರಮಾಡಿ ನೀರಿಗೆ ಸಿಂಪಡಿಸಬೇಕು. ಈ ಪುಡಿಯು ನೀರಿನಲ್ಲಿ ಕರಗುವುದಿಲ್ಲ. ಸೂಕ್ಷ್ಮ ಪುಡಿಯು ಸೊಳ್ಳೆಯ ಲಾರ್ವಾಗಳನ್ನು ಆಕರ್ಷಿಸುತ್ತವೆ. ಪುಡಿಯ ಕಣಗಳನ್ನು ತಿಂದ ಲಾರ್ವಾಗಳ ಉದರದಲ್ಲಿ ವಿಷದ ಪ್ರಭಾವವುಂಟಾಗಿ ಲಾರ್ವಾಗಳು ನಾಶಹೊಂದುತ್ತವೆ. ಪ್ಯಾರಿಸ್‌ಗ್ರೀನ್ ಪುಡಿಯನ್ನು ೧ ಹೆಕ್ಟೇರ್ ನೀರಿನ ಸೆಲೆಗೆ ೧ ಕೆ.ಜಿ. ಪ್ರಮಾಣದಲ್ಲಿ ಉಪಯೋಗಿಸಬೇಕಾಗುತ್ತದೆ. ಈ ಪ್ರಮಾಣವು

ಲಾರ್ವಾಗಳಿಗೆ ಮಾರಕವಾಗಿದೆ. ಈ ಪ್ರಮಾಣವು ನೀರಿನಲ್ಲಿರುವ, ಮೀನು ಕಪ್ಪೆಗಳಿಗಾಗಲೀ ಮತ್ತು ಮನುಷ್ಯನಿಗಾಗಲೀ ಅಥವಾ ದನಕರುಗಳಿಗಾಗಲೀ ಹಾನಿಕರವಾಗಿರುವುದಿಲ್ಲ. ಆದುದರಿಂದ ಇದರ ಬಳಕೆ ಯಶಸ್ವಿಯಾಗಿ ಲಾರ್ವಾಗಳನ್ನು ನಾಶಪಡಿಸುತ್ತದೆ.

೩. ಕೃತ್ರಿಮ ರಾಸಾಯನಿಕ ಪದಾರ್ಥಗಳ (ಸಿಂಥೆಟಿಕ್ ಪದಾರ್ಥಗಳು) ಬಳಕೆ : ಫೆಂಥಿಯಾನ್, ಕ್ಲೋರೋಪೈರಿಫಾಸ್, ಅಬೇಟ್ ಎಂಬ ಪದಾರ್ಥಗಳು ನಿಗದಿತ ಪ್ರಮಾಣದಲ್ಲಿ ಬಳಕೆ ಮಾಡಿದರೆ ಪರಿಣಾಮಕಾರಿಯಾಗಿ ಲಾರ್ವಾಗಳನ್ನು ನಾಶಪಡಿಸುತ್ತವೆ. ಮನುಷ್ಯನಿಗೆ ಪ್ರಾಣಾಪಾಯವನ್ನುಂಟು ಮಾಡುವುದರಿಂದ ಮತ್ತು ಬಲು ಬೇಗನೇ ನೀರು ಕಲುಷಿತಗೊಳ್ಳುವುದರಿಂದ ಸಿಂಥೆಟಿಕ್ ಪದಾರ್ಥಗಳನ್ನು ಹೆಚ್ಚಾಗಿ ಬಳಸಲು ಶಿಫಾರಸ್ಸು ಮಾಡುವುದಿಲ್ಲ.

II ಪರಿಸರವನ್ನು ಶುಚಿಯಾಗಿಡುವುದು : ಸೊಳ್ಳೆಗಳು ಸಾಮಾನ್ಯವಾಗಿ ವಾಸಿಸುವ ತಗ್ಗುಪ್ರದೇಶಗಳು, ಹಳ್ಳ ಗುಂಡಿಗಳು, ಬಿಲ ಪೊಟರೆಗಳನ್ನು ಮುಚ್ಚಬೇಕು. ತ್ಯಾಜ್ಯಗಳನ್ನು ಸೂಕ್ತ ಸ್ಥಳಗಳಲ್ಲಿ ಶೇಖರಿಸಿ ಸಕಾಲದಲ್ಲಿ ವಿಲೇವಾರಿ ಮತ್ತು ನಾಶಮಾಡಬೇಕು. ವಾಸಿಸುವ ಮನೆಯ ಒಳಭಾಗಗಳು, ಕಿಟಕಿ, ಬಾಗಿಲು, ಪೀಠೋಪಕರಣಗಳ ಸಂಧಿಗೊಂದಿಗಳು, ಹೂದಾನಿ, ಕಾರಂಜಿಗಳು, ಕತ್ತಲೆ ಪ್ರದೇಶಗಳು ಎಲ್ಲವನ್ನು ಶುಚಿಗೊಳಿಸುತ್ತಿರಬೇಕು. ಸುತ್ತಮುತ್ತಲ ಪ್ರದೇಶಗಳನ್ನೇ ಶುಚಿಯಾಗಿಡಬೇಕು. ಪರಿಸರದಲ್ಲಿ ಒಡೆದ ಮಡಿಕೆ ಚೂರು, ಪ್ಲಾಸ್ಟಿಕ್ ಚೂರು, ಹಳೆಯ ಟೈರು, ತೆಂಗಿನ ಚಿಪ್ಪ್ಸ್ (ಕಂಟ) ಇತ್ಯಾದಿಗಳು ಇರದಂತೆ ಶುಚಿಗೊಳಿಸುತ್ತಿರಬೇಕು.

ದನದಕೊಟ್ಟಿಗೆ, ನೀರಿನ ತೊಟ್ಟಿಗಳನ್ನು ಆಗಾಗ್ಗೆ ಶುಚಿಗೊಳಿಸುತ್ತಿರಬೇಕು. ಸುತ್ತಮುತ್ತಲಲ್ಲಿ ನೀರು ನಿಲ್ಲದಂತೆ ಎಚ್ಚರವಹಿಸಬೇಕು ಕೆರೆ ಹೊಂಡಗಳಲ್ಲಿ ಜಲಸಸ್ಯಗಳನ್ನು (ಪಾಚಿ ಇತ್ಯಾದಿ) ಕಿತ್ತು ಹಾಕಬೇಕು. ಮೇಲೆ ತಿಳಿಸಿರುವ ಪ್ರದೇಶ ಅವಕಾಶಗಳನ್ನೆಲ್ಲಾ ಸೊಳ್ಳೆಯ ಆಕರ (Source) ಗಳೆಂದೇ ಪರಿಗಣಿಸಬೇಕು. ಆಕರಗಳ ನೈರ್ಮಲ್ಯವನ್ನು ಕಾಪಾಡಿದರೆ ಅಥವಾ ಕೆಲವು ಸಂದರ್ಭಗಳಲ್ಲಿ ಅವುಗಳನ್ನು ನಾಶಮಾಡುವುದೇ ಆದರೆ ಮಾತ್ರ ಸೊಳ್ಳೆ ನಿಯಂತ್ರಣ ಸಾಧ್ಯ.

III ಜೈವಿಕ ನಿಯಂತ್ರಣ : ಕಪ್ಪೆ, ಗಂಬೂಸಿಯಾ ಮತ್ತು ಲೆಬಿಸ್ಟರ್ ಎಂಬ ಜಾತಿಯ ಮೀನುಗಳು ಸೊಳ್ಳೆಯ ಲಾರ್ವಾಗಳನ್ನು ತಿಂದು ಬದುಕುತ್ತವೆ. ಇಂತಹ ಮೀನುಗಳನ್ನು ಕಾರಂಜಿ, ಬುಗ್ಗೆ, ತೋಟದ ಬಾವಿ, ನೀರಿನ ತೊಟ್ಟಿ, ಹಳ್ಳಕೊಳ್ಳ, ಕೆರೆ ಬಾವಿಗಳಲ್ಲಿ ಸಾಕುವುದರಿಂದ ಲಾರ್ವಾಗಳನ್ನು ನಾಶಪಡಿಸಬಹುದು.

ಪ್ರೌಢ ಸೊಳ್ಳೆಗಳ ನಿಯಂತ್ರಣ

ಮನೆಯ ಒಳಭಾಗ ಮತ್ತು ಹೊರಗಿನ ವಾತಾವರಣದಲ್ಲಿರುವ ಪ್ರೌಢ ಸೊಳ್ಳೆಗಳನ್ನು ನಾಶಮಾಡಲು ಕ್ರಮ ಕೈಗೊಳ್ಳಬೇಕು.

(ಅ) ಮನೆಯ ಒಳಭಾಗದಲ್ಲಿರುವ ಸೊಳ್ಳೆಗಳ ನಿಯಂತ್ರಣ : ೧ ಚದರ ಮೀಟರ್ ವ್ಯಾಪ್ತಿ ಪ್ರದೇಶಕ್ಕೆ ೧ ರಿಂದ ೨ ಗ್ರಾಂನಷ್ಟು ಪ್ರಮಾಣದ ಶುದ್ಧ ಡಿಡಿಟಿಯನ್ನು ಮಿಶ್ರಿಸಿ ವಾಸಿಸುವ ಮನೆಯ ಒಳಭಾಗಗಳಲ್ಲಿ ಮತ್ತು ದನದ ಕೊಟ್ಟಿಗೆಗೆ ವರ್ಷಕ್ಕೆ ಕನಿಷ್ಠ ೩

ಬಾರಿಯಂತೆ ಸಿಂಪಡಿಸಬೇಕು ಇದು ಫಲಪ್ರದವಾಗಿ ಕೆಲಸಮಾಡುತ್ತದೆ. ಡಿಡಿಟಿಗೆ ಸೊಳ್ಳೆಗಳು ಬಗ್ಗದಿದ್ದರೆ ಮೆಲಾಥಿನ್ ಅಥವಾ ಪ್ರೊಪಕ್ಸರ್ ರಾಸಾಯನಿಕಗಳನ್ನು ಬಳಸಬೇಕು.

(ಆ) ಹೊರವಾತಾವರಣದಲ್ಲಿರುವ ಸೊಳ್ಳೆಗಳನ್ನು ಕೊಲ್ಲಲು ಪೈರಥ್ರಿಮ್ ಎಂಬ ಹೂಗಳು ಸಹಕಾರಿಯಾಗಿವೆ. ಹೂಗಳನ್ನು ಚೆನ್ನಾಗಿ ಒಣಗಿಸಿ ಪುಡಿಮಾಡಿ ವಾತಾವರಣದಲ್ಲಿ ಸಿಂಪಡಿಸಬೇಕು. ಕೈಪಂಪು ಮೂಲಕ ಸಿಂಪಡಿಸಿದಾಗ ಪುಡಿಕಣಗಳು ಅತ್ಯಂತ ಸೂಕ್ಷ್ಮವಾಗಿರುವುದರಿಂದ ವಾತಾವರಣದಲ್ಲಿ ಹರಡಿಕೊಂಡು ಒಂದು ರೀತಿಯ ಮಂಜು ಕವಿದಂತೆ ಅಥವಾ ಹೊಗೆ ಹಾಕಿದ ರೀತಿ ಕಾಣಿಸುತ್ತದೆ. ಹೂಗಳ ಪುಡಿಯಲ್ಲಿರುವ ಪೈರಿಥ್ರಿನ್ ಎಂಬ ಪದಾರ್ಥವು ಸೊಳ್ಳೆಗಳ ಮಿದುಳು ಮತ್ತು ನರಕೋಶಗಳನ್ನು ಘಾಸಿಗೊಳಿಸಿ ಸಾಯಿಸುತ್ತದೆ. ಒಮ್ಮೆಗೇ ಸಿಂಪಡಿಸುವುದರಿಂದ ಅಸಂಖ್ಯಾತ ಸೊಳ್ಳೆಗಳನ್ನು ನಾಶಪಡಿಸಬಹುದು. ಬಹಳಕಾಲದವರೆಗೆ ಇದರ ತೀವ್ರತೆ ವಾತಾವರಣದಲ್ಲಿರುವುದಿಲ್ಲ. ಬೇಗನೇ ತೀವ್ರತೆ ಕಡಿಮೆಯಾಗುವುದರಿಂದ ಬೇರೆ ಪ್ರದೇಶಗಳಿಂದ ಬರುವಂತಹ ಸೊಳ್ಳೆಗಳ ಮೇಲೆ ಪುಡಿಯ ಸಿಂಪರಣೆಯ ಪ್ರಭಾವ ಬೀರುವುದಿಲ್ಲ. ಮೆಲಾಥಿನ್ ಮತ್ತು ಫೆವಿಟ್ರೋಥಿಯಾನ್‌ಗಳನ್ನು ಕೂಡಾ ಇದೇರೀತಿ ಸಿಂಪಡಿಸಬಹುದು. ಈ ಕ್ರಿಯೆಗೆ ಫಾಗಿಂಗ್ ಎಂದು ಹೆಸರು.

(ಇ) ವಂಶವಾಹಿ (ಜೀನ್, Gene) ಗಳ ಮೇಲೆ ಹತೋಟಿ ಸಾಧಿಸಿ ಸೊಳ್ಳೆಗಳ ನಿಯಂತ್ರಣ ಮಾಡುವ ವಿಧಾನವು ಆಧುನಿಕ ವೈಜ್ಞಾನದ ಪ್ರಯೋಗಗಳಲ್ಲೊಂದಾಗಿದೆ. ಸೊಳ್ಳೆಯ ಶರೀರದಲ್ಲಿರುವ

ನಿರ್ದಿಷ್ಟ ವಂಶವಾಹಿ ಕೋಶಗಳನ್ನೇ ಮಾರ್ಪಡಿಸಿ ಸೊಳ್ಳೆಯ ಲೈಂಗಿಕ ಶಕ್ತಿಯನ್ನು ಕುಂಠಿತಗೊಳಿಸಿ ಸಂತಾನ ನಿಯಂತ್ರಣ ಮಾಡುವಿಕೆ ಈ ಪ್ರಯೋಗಗಳ ಗುರಿ.


ವೈಯಕ್ತಿಕ ರಕ್ಷಣೆ

ಹೀಗೆ ಏನೆಲ್ಲಾ ಉಪಾಯಗಳನ್ನು ಅಳವಡಿಸುತ್ತಾ ಬಂದಿದ್ದರೂ ಮನುಷ್ಯನಿಗೆ ಸವಾಲು ಎಸೆಯುವಂತೆ ಸೊಳ್ಳೆಗಳ ಕಡಿತದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಲಾರ್ವಾಗಳ ಸಂಪೂರ್ಣ ನಾಶಪಡಿಸುವಿಕೆಯಾಗಲಿ, ಪ್ರೌಢಸೊಳ್ಳೆಗಳ ನಾಶ ಮತ್ತು ರೋಗ ಹರಡುವಿಕೆಯನ್ನು ತಡೆಗಟ್ಟುವಿಕೆಗಳು ಎಲ್ಲವೂ ಮನುಷ್ಯನ ಕೈಗೆ ಸಂಪೂರ್ಣವಾಗಿ ನಿಲುಕಿಲ್ಲ. ಪ್ರೌಢ ಸೊಳ್ಳೆಗಳಿಂದ ಕಚ್ಚಿಸಿಕೊಳ್ಳುವುದರಿಂದ ತಪ್ಪಿಸಿಕೊಳ್ಳಲು ಕೆಲವು ಇತರ ಕ್ರಮಗಳನ್ನು ಕೈಗೊಳ್ಳಲೇಬೇಕು.

ಮೈತುಂಬಾ ಬಟ್ಟೆ ಧರಿಸುವುದು : ಸೊಳ್ಳೆಗಳು ಚರ್ಮದ ಮೇಲೆ ಕುಳಿತು ಕಚ್ಚುವುದರಿಂದ ಸಾಧ್ಯವಾದಷ್ಟು ವೇಳೆ ಮೈ ತುಂಬಾ ಬಟ್ಟೆ ಧರಿಸಬೇಕು.




ಸೊಳ್ಳೆ ಪರದೆಯ ಒಳಗೆ ಮಲಗುವುದು



ಹಳ್ಳ-ಗುಂಡಿಗಳನ್ನು ಮುಚ್ಚುತ್ತಿರುವುದು



ನೀರಿನ ಆಸರೆಗೆ ಗಂಬೂಸಿಯಾ, ಗಪ್ಪಿ ಮೀನುಗಳನ್ನು ಬಿಡುತ್ತಿರುವುದು



ಮನೆಯ ಉಪಕರಣಗಳನ್ನು ಶುಚಿಗೊಳಿಸುತ್ತಿರುವುದು

ಸೊಳ್ಳೆಪರದೆಯ ಉಪಯೋಗ : ಸುಲಭವಾದ ಮತ್ತು ಹೆಚ್ಚು ಪರಿಣಾಮಕಾರಿಯಾದ ವಿಧಾನ. ಹಗಲಿನ ವೇಳೆಯಲ್ಲಾಗಲೀ ಅಥವಾ ರಾತ್ರಿವೇಳೆಯಲ್ಲಾಗಲೀ ಮನೆಯ ಒಳಗಡೆ ಮಲಗುವಾಗ ಸೊಳ್ಳೆಪರದೆಯನ್ನು ಕಟ್ಟಿ ಅದರೊಳಗೆ ಮಲಗಬೇಕು.

ಜಾಲರಿಗಳನ್ನು ಜೋಡಿಸುವುದು : ಕಟ್ಟಡಗಳಲ್ಲಿರುವ ಕಿಟಕಿ ಬಾಗಿಲುಗಳಿಗೆ ಮತ್ತು ಗಾಳಿ ಆಡುವ ಅವಕಾಶವಿರುವೆಡೆಯಲ್ಲೆಲ್ಲಾ ಸೂಕ್ಷ್ಮ ರಂಧ್ರಗಳಿರುವ ಕಬ್ಬಿಣದ ಅಥವಾ ಪ್ಲಾಸ್ಟಿಕ್‌ಗಳಿಂದ

ತಯಾರಿಸಿದ ಜಾಲರಿ (ಮೆಷ್) ಗಳನ್ನೇ ಜೋಡಿಸಬೇಕು. ಇವುಗಳಿಂದ ಹೊರವಾತಾವರಣದಲ್ಲಿರುವ ಸೊಳ್ಳೆಗಳು ಒಳಗೆ ನುಗ್ಗುವುದನ್ನು ತಡೆಯಬಹುದು.

ಸೊಳ್ಳೆ ಬತ್ತಿಗಳನ್ನು ಉರಿಸುವುದು : ಪ್ರಾಲೆಥ್ರಿನ್, ಅಲೆರ್ಥನ್ ಮೊದಲಾದ ರಾಸಾಯನಿಕ ಪದಾರ್ಥಗಳಿಂದ ತಯಾರಿಸಿದ ಬತ್ತಿಗಳು ಮಾರುಕಟ್ಟೆಯಲ್ಲಿ ಲಭ್ಯವಿದೆ. ಇವುಗಳನ್ನು ಬೆಂಕಿಹತ್ತಿಸಿ ಉರಿಸಿದಾಗ ಇದರಿಂದ ಬರುವ ಹೊಗೆಯು ಸೊಳ್ಳೆಗಳನ್ನು ಸಾಯಿಸುತ್ತವೆ. ಮನೆಯ ಒಳಭಾಗದಲ್ಲಿ ಹೆಚ್ಚು ಪ್ರಯೋಜನಕಾರಿ. ಇಂತಹದೇ ರಾಸಾಯನಿಕಗಳನ್ನು ಸೀಮೆಎಣ್ಣೆಯೊಂದಿಗೆ ಸಂಸ್ಕರಿಸಿ ತಯಾರಿಸಿದ ದ್ರಾವಣಗಳೂ ದೊರೆಯುತ್ತವೆ. ಈ ದ್ರಾವಣಗಳನ್ನು ವಿದ್ಯುಚ್ಛಕ್ತಿ ಸಹಾಯದಿಂದ ಉರಿಸುವ ಸಾಧನ (ಲಿಕ್ವಿಡೇಟರ್) ಕ್ಕೆ ಅಳವಡಿಸಿ ಇದರಿಂದಲೂ ಮನೆಯೊಳಗಿನ ವಾತಾವರಣದಲ್ಲಿ ಸೊಳ್ಳೆಗೆ ಮಾರಕವಾದ ಕಣ್ಣಿಗೆ ಕಾಣಿಸಿದ ರೀತಿಯಲ್ಲಿ ಹೊಗೆ ಬಂದು ಸೊಳ್ಳೆಗಳನ್ನು ನಾಶಪಡಿಸಬಹುದು. ನಮ್ಮ ಪೂರ್ವಜರು ಮಾಡುತ್ತಿದ್ದ ಕ್ರಮಗಳಾದ ಸಾಂಬ್ರಾಣಿ ಹೊಗೆ ಹಾಕುವುದು. ಬೇವಿನ ಕಡ್ಡಿ ಪುಡಿ, ಧೂಪ ಹಾಕುವುದನ್ನು ನಾವು ಆಚರಿಸಬಹುದಾಗಿದೆ.

ಮೈ ಚರ್ಮಕ್ಕೆ ಬೇವಿನ ಎಣ್ಣೆ, ಕೊಬ್ಬರಿ ಎಣ್ಣೆಯನ್ನು ಸವರುವುದರಿಂದ ಸೊಳ್ಳೆಗಳಿಂದ ತಪ್ಪಿಸಿಕೊಳ್ಳಬಹುದು. ರಾಸಾಯನಿಕ ಪದಾರ್ಥಗಳಿಂದ ತಯಾರಿಸಿದ ಮೈಗೆ ಲೇಪಿಸುವ ಮುಲಾಮು ಕೂಡಾ ಉಪಯೋಗದಲ್ಲಿದೆ.ಸೊಳ್ಳೆ ಬತ್ತಿ ಉರಿಸುವುದರಿಂದ ಬರುವ ಹೊಗೆ, ಮೈ ಮೇಲೆ ಹಚ್ಚುವ ಮುಲಾಮು ಕೆಲವರಿಗೆ "ಅಲರ್ಜಿ"

(= ಒಗ್ಗದಿರುವಿಕೆ) ಯನ್ನುಂಟು ಮಾಡುತ್ತವೆಯಾದ್ದರಿಂದ ವಿವೇಚನೆಯಿಂದ ಬಳಸಬೇಕು.

೧೯೩೩ ರಲ್ಲಿ ಸ್ಥಾಪನೆಯಾದ ಅಧ್ಯಾಪಕರ ಸಂಘವು ಪ್ರಚಾರೋಪನ್ಯಾಸಗಳನ್ನು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಪ್ರಾರಂಭಿಸಿತು. ಈ ಉಪನ್ಯಾಸಗಳು ಪುಟ್ಟ ಪುಸ್ತಕಗಳ ರೂಪದಲ್ಲಿ ಪ್ರಕಟವಾಗಿ ಜನಪ್ರಿಯವಾದುವು. ಈ ಪ್ರಯೋಗದ ಖ್ಯಾತಿ ಇಂಗ್ಲೆಂಡಿನವರೆಗೂ ಹಬ್ಬಿತು.

ಪ್ರಸಾರಾಂಗವು ಜ್ಞಾನಸಾಧನೆಗೆ, ಜ್ಞಾನ ಪ್ರಸಾರಕ್ಕೆ ಬೇಕಾಗುವ ಸಕಲ ಸಾಧನಗಳನ್ನು ಪ್ರಚಾರೋಪನ್ಯಾಸಗಳ ಮೂಲಕ, ಪ್ರಚಾರ ಪುಸ್ತಕಮಾಲೆಯ ಪ್ರಕಟಣೆಗಳ ಮೂಲಕ, ಇತರ ಉದ್ಗ್ರಂಥಗಳ ಪ್ರಕಟಣೆ ಇತ್ಯಾದಿಗಳ ಮೂಲಕ, ನಿರ್ವಹಿಸುತ್ತ ನಾಡಿನ ಅತ್ಯುತ್ತಮ ಜ್ಞಾನಪ್ರಸಾರ ಕೇಂದ್ರವಾಗಲೆಂದು ಹಾರೈಸುತ್ತೇನೆ.

(ನೂರನೆಯ ಪ್ರಚಾರ ಪುಸ್ತಕವಾದ "ಪ್ರಸಾರಾಂಗ" ಮುನ್ನುಡಿಯಿಂದ)

– ರಾಷ್ಟ್ರಕವಿ ಕುವೆಂಪು